ಸ್ಯಾಂಕಿ ಕೆರೆಯಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ನೇತೃತ್ವದಲ್ಲಿ 'ಕಾವೇರಿ ಆರತಿ' ನೆರವೇರಿತು (ಎಡಚಿತ್ರ) ಪುರೋಹಿತರು 'ಕಾವೇರಿ ಆರತಿ' ನೆರವೇರಿಸಿದರು ಪ್ರಜಾವಾಣಿ ಚಿತ್ರಗಳು/ಪುಷ್ಕರ್ ವಿ.

ಡಿ.ಕೆ. ಶಿವಕುಮಾರ್ ನೇತೃತ್ವದಲ್ಲಿ ನಡೆದ 'ಜಲದೇವತೆ'ಗೆ ನಮನ ಕಾರ್ಯಕ್ರಮ

ಸ್ಯಾಂಕಿ ಕೆರೆಯಲ್ಲಿ 'ಕಾವೇರಿ ಆರತಿ' ವೈಭವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತೇಲುವ ವೇದಿಕೆಯಲ್ಲಿ ಸಂಗೀತ ಕಾರ್ಯಕ್ರಮದ ಇಂಪು, ವೇದಮಂತ್ರಗಳ ಘೋಷಗಳೊಂದಿಗೆ ಸ್ಯಾಂಕಿ ಕೆರೆಯಲ್ಲಿ ಶುಕ್ರವಾರ 'ಕಾವೇರಿ ಆರತಿ' ವೈಭವದಿಂದ ನೆರವೇರಿತು.

'ವಿಶ್ವ ಜಲದಿನ'ದ ಅಂಗವಾಗಿ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ನೇತೃತ್ವದಲ್ಲಿ ನಡೆದ 'ಕಾವೇರಿ ಆರತಿ' ಕಾರ್ಯಕ್ರಮಕ್ಕೆ ಸಚಿವರಾದ ರಾಮಲಿಂಗಾರೆಡ್ಡಿ, ದಿನೇಶ್ ಗುಂಡೂರಾವ್, ಬೈರತಿ ಸುರೇಶ್, ಕೆಕೆಆರ್‌ಡಿಬಿ ಅಧ್ಯಕ್ಷ ಅಜಯ್ ಸಿಂಗ್, ಸರ್ಕಾರದ ದೆಹಲಿಯ ವಿಶೇಷ ಪ್ರತಿನಿಧಿ ಟಿ.ಬಿ. ಜಯಚಂದ್ರ, ಶಾಸಕರಾದ ಬಾಲಕೃಷ್ಣ, ಶರತ್ ಬಚ್ಚೇಗೌಡ, ಎಚ್.ಡಿ. ರಂಗನಾಥ್, ಎನ್. ಶ್ರೀನಿವಾಸ್, ಎ.ಸಿ. ಶ್ರೀನಿವಾಸ್, ಶಿವಲಿಂಗೇಗೌಡ, ಯುವ ಕಾಂಗ್ರೆಸ್ ಅಧ್ಯಕ್ಷ ಮಂಜುನಾಥ ಗೌಡ, ಬಿಎಂಆರ್‌ಡಿಎ ಆಯುಕ್ತ ರಾಜೇಂದ್ರ ಚೋಳನ್, ಬಿಡಬ್ಲ್ಯುಎಸ್‌ಎಸ್‌ಬಿ ಆಯುಕ್ತ ರಾಮ್ ಪ್ರಸಾತ್ ಮನೋಹರ್, ಉಷಾ ಡಿ.ಕೆ. ಶಿವಕುಮಾರ್ ಸಾಕ್ಷಿಯಾದರು.

ಡಿ.ಕೆ. ಶಿವಕುಮಾರ್ ಮತ್ತು ತಂಡ ಶುಕ್ರವಾರ ಬೆಳಿಗ್ಗೆ ಭಾಗಮಂಡಲದಲ್ಲಿ ಕಾವೇರಿಗೆ ಪೂಜೆ ಸಲ್ಲಿಸಿದ ಬಳಿಕ ಸಂಗಮ ಕ್ಷೇತ್ರದಿಂದ 'ತೀರ್ಥ'ದ ರೂಪದಲ್ಲಿ ಬೆಂಗಳೂರಿಗೆ ನೀರು ತರಲಾಯಿತು. ಪುರೋಹಿತರು ವೇದಮಂತ್ರ ಪಠಿಸಿದರು. ಬಳಿಕ ಆರತಿ ಎತ್ತಿ ನಮನ ಸಲ್ಲಿಸಲಾಯಿತು.

'ಶನಿವಾರ (ಮಾ.22) ವಿಶ್ವ ಜಲ ದಿನ. ಅದರ ಪ್ರಯುಕ್ತ ಕಾವೇರಿ ಆರತಿ ಕಾರ್ಯಕ್ರಮವನ್ನು ಜಲಮಂಡಳಿ ವತಿಯಿಂದ ಹಮ್ಮಿಕೊಳ್ಳಲಾಗಿದೆ. ನೀರಿಲ್ಲದೇ ಯಾರೂ ಬದುಕಲು ಸಾಧ್ಯವಿಲ್ಲ. ಅಂಥ ನೀರನ್ನು ಒದಗಿಸುವ ಜಲಮಾತೆಗೆ ಪ್ರಾರ್ಥನೆ ಸಲ್ಲಿಸುವುದು ಎಲ್ಲರ ಕರ್ತವ್ಯ' ಎಂದು ಡಿ.ಕೆ. ಶಿವಕುಮಾರ್ ತಿಳಿಸಿದರು.

'ನೀರನ್ನು ವಿವಿಧ ವಿಧದಲ್ಲಿ ಬಳಸಿಕೊಳ್ಳುತ್ತೇವೆ. ಸೇವಿಸುವಾಗ ಪಾನ ಎನ್ನುತ್ತೇವೆ. ಅಡುಗೆಗೆ ಬಳಸುವಾಗ ಪಾಕ ಎನ್ನುತ್ತೇವೆ. ಪಾನಕ ಜ್ಯೂಸ್ ಆಗುತ್ತದೆ. ಸ್ನಾನ ಮಾಡಿ ಪಾಪಗಳನ್ನು ತೊಳೆದುಕೊಂಡಾಗ ಪಾವನವಾಗುತ್ತೇವೆ. ನೀರು, ಮಣ್ಣು, ಗಾಳಿಯನ್ನು ವಂಶಪಾರಂಪರ್ಯವಾಗಿ ಉಳಿಸಬೇಕು' ಎಂದರು.

'ದೈನಂದಿನ ಚಟುವಟಿಕೆಯಲ್ಲಿ ಮಿತವಾಗಿ ನೀರು ಬಳಸಿ ನೀರು ಉಳಿಸುತ್ತೇನೆ. ಮಳೆ ನೀರಿನ ಸಂಗ್ರಹ ವಿಧಾನವನ್ನು ಅನುಸರಿಸುವ ಮೂಲಕ ಅಂತರ್ಜಲ ಮರುಪೂರಣಕ್ಕೆ ಸಹಕರಿಸುತ್ತೇನೆ. ಜಲಮೂಲಗಳನ್ನು ರಕ್ಷಿಸುವುದಾಗಿ ಮತ್ತು ಭವಿಷ್ಯದ ಪೀಳಿಗೆಗಾಗಿ ಅವುಗಳ ಸಂರಕ್ಷಣೆ ಮಾಡುತ್ತೇನೆ. ನಾನು, ನನ್ನ ಕುಟುಂಬ ಮತ್ತು ಸಮುದಾಯದಲ್ಲಿ ನೀರು ಉಳಿಸುವ ಬಗ್ಗೆ ಜಾಗೃತಿ ಮೂಡಿಸುತ್ತೇನೆ. ಸುಸ್ಥಿರ ಭವಿಷ್ಯದ ನಿರ್ಮಾಣಕ್ಕಾಗಿ ನನ್ನ ಜೀವನದಲ್ಲಿ ಈ ಕ್ರಮಗಳನ್ನು ಅಳವಡಿಸಿಕೊಳ್ಳುತ್ತೇನೆ' ಎಂದು 'ವಿಶ್ವಜಲ' ಪ್ರತಿಜ್ಞಾವಿಧಿಯನ್ನು ಜನರು ಸ್ವೀಕರಿಸಿದರು.

ಗಾಯಕಿ ಅನನ್ಯ ಭಟ್ ಹಾಗೂ ಗಾಯಕ ರಘು ದೀಕ್ಷಿತ್ ಅವರ ಸಂಗೀತ ಗಾಯನ, ವಿವಿಧ ತಂಡಗಳಿಂದ ನೃತ್ಯ ಕಾರ್ಯಕ್ರಮ, ಆಕರ್ಷಕ ವಿದ್ಯುತ್ ದೀಪಗಳ ಬೆಳಕಿನಾಟಗಳು ಕಾರ್ಯಕ್ರಮಕ್ಕೆ ಮೆರುಗು ನೀಡಿದವು.

₹45 ಲಕ್ಷ ಮೌಲ್ಯದ 80 ಮೊಬೈಲ್ ಜಪ್ತಿ

ತಮಿಳುನಾಡು ವ್ಯಕ್ತಿಗೆ ಮಾರಾಟ, ಐದು ಮಂದಿ ಬಂಧನ

ಪ್ರಜಾವಾಣಿ ವಾರ್ತೆ

ಆರೋಪಿಗಳಿಂದ ವಶಪಡಿಸಿಕೊಂಡಿರುವ ಮೊಬೈಲ್



ಶುಬಿನ್ ಸುಹೇರ್

ಮೊಹಮ್ಮದ್ ಮಿದ್ಲಾಜ್

ಶಂಶೀರ್ ಬೇಗ್

ಉದುಮನ್ ಫೈಜಲ್

ಬೆಂಗಳೂರು: ನಗರದ ಆರ್‌ಎಂಸಿ ಯಾರ್ಡ್ ಮತ್ತು ಪುಟ್ಟೇನಹಳ್ಳಿ ಠಾಣೆ ಪೊಲೀಸರು ಪ್ರತ್ಯೇಕ ಕಾರ್ಯಾಚರಣೆ ನಡೆಸಿ ಐದು ಮಂದಿಯನ್ನು ಬಂಧಿಸಿ, ₹45 ಲಕ್ಷ ಮೌಲ್ಯದ 80 ಮೊಬೈಲ್‌ಗಳನ್ನು ಜಪ್ತಿ ಮಾಡಿದ್ದಾರೆ.

ಕೇರಳ, ತಮಿಳುನಾಡು ಹಾಗೂ ಭದ್ರಾವತಿ ತಾಲ್ಲೂಕಿನ ನಾಲ್ವರು ಆರೋಪಿಗಳು ಮತ್ತು ಜಿಗಣಿ ಹೋಬಳಿಯ ಜನತಾ ಕಾಲೊನಿಯ ನಿವಾಸಿಯೊಬ್ಬರನ್ನು ಬಂಧಿಸಿದ್ದಾರೆ.

ಆರ್‌ಎಂಸಿ ಯಾರ್ಡ್: ಮಲ್ಲೇಶ್ವರದ ಅಪಾರ್ಟ್‌ಮೆಂಟ್ ನಿವಾಸಿ, ತರಕಾರಿ ಖರೀದಿಸಲು ಮಾರ್ಕೆಟ್‌ಗೆ ಹೋಗಿದ್ದ ವೇಳೆ ಐ ಫೋನ್ ಕಳವಾಗಿತ್ತು. ಈ ಸಂಬಂಧ ಪ್ರಕರಣ ದಾಖಲಿಸಿಕೊಂಡ ಆರ್‌ಎಂಸಿ ಯಾರ್ಡ್ ಪೊಲೀಸರು ತನಿಖೆ ಕೈಗೊಂಡಿದ್ದರು.

ಕೇರಳದ ಶುಬಿನ್ ಸುಹೇರ್, ಮೊಹಮ್ಮದ್ ಮಿದ್ಲಾಜ್, ಭದ್ರಾವತಿಯ ಶಂಶೀರ್ ಬೇಗ್ ಮತ್ತು ತಮಿಳುನಾಡಿನ ಉದುಮನ್ ಫೈಜಲ್ ಅವರನ್ನು ಬಂಧಿಸಲಾಗಿದ್ದು, ಐದನೇ ಆರೋಪಿ ಶ್ರೀನಿವಾಸ ಮತ್ತು ಆರನೇ ಆರೋಪಿ ನಾಗೇಶ್ ತಲೆಮರೆಸಿಕೊಂಡಿದ್ದಾರೆ ಎಂದು ಪೊಲೀಸರು ಹೇಳಿದರು.

'ಪ್ಲಾಟಿನಂ ಸಿಟಿ ಅಪಾರ್ಟ್‌ಮೆಂಟ್ ರಸ್ತೆಯಲ್ಲಿ ಐದು ಮೊಬೈಲ್ ಸಮೇತ ಇಬ್ಬರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ ಕಳವು ಮಾಡಿರುವುದಾಗಿ ಹೇಳಿದರು. ಈ ಇಬ್ಬರು ಸೋಲದೇವನಹಳ್ಳಿಯ ಬಾಡಿಗೆ ಮನೆಯಲ್ಲಿ ವಾಸವಾಗಿದ್ದಾರೆ. ಭದ್ರಾವತಿಯ ಇಬ್ಬರು ಕಳವು ಮಾಡಿದ ಮೊಬೈಲ್‌ಗಳನ್ನು ತೆಗೆದುಕೊಂಡು ಬಂದು ಮಾರಾಟ ಮಾಡಲು ಇವರಿಗೆ ನೀಡುತ್ತಿದ್ದರು. ಈ ಮೊಬೈಲ್‌ಗಳನ್ನು ತಮಿಳುನಾಡಿನ ವ್ಯಕ್ತಿ ಬಂದು ಖರೀದಿಸುತ್ತಿದ್ದ ಎಂಬುದನ್ನು ವಿಚಾರಣೆ ವೇಳೆ ಹೇಳಿದ್ದಾರೆ' ಎಂದು ಪೊಲೀಸರು ತಿಳಿಸಿದರು.

ಕಾರ್ಯಾಚರಣೆ ನಡೆಸಿ ಮೊಬೈಲ್ ಫೋನ್ ಖರೀದಿಸಲು ಬಂದ ವ್ಯಕ್ತಿಯನ್ನು ಸೋಲದೇವನಹಳ್ಳಿಯ ಆರೋಪಿ ಮನೆಯಲ್ಲಿ ಹಾಗೂ ಗೊರಗುಂಟೆ ಪಾಳ್ಯದ ಮೆಟ್ರೊ ನಿಲ್ದಾಣ ಬಳಿ ಭದ್ರಾವತಿಯ ಇಬ್ಬರನ್ನು ವಶಕ್ಕೆ ಪಡೆದು ಮೊಬೈಲ್‌ಗಳನ್ನು ಜಪ್ತಿ ಮಾಡಲಾಯಿತು. ನಾಪತ್ತೆಯಾಗಿರುವ ಇಬ್ಬರು ಆರೋಪಿಗಳ ಪತ್ತೆಗೆ ಶೋಧ ನಡೆಸಲಾಗುತ್ತಿದೆ ಎಂದು ಹೇಳಿದರು.

ಹಳೆ ಆರೋಪಿ ಸೆರೆ: ಮೊಬೈಲ್ ಹಾಗೂ ದ್ವಿಚಕ್ರ ವಾಹನ ಕಳವು ಮಾಡುತ್ತಿದ್ದ ಹಳೆ ಆರೋಪಿ ಕಿರಣ್ ಅವರನ್ನು ಪುಟ್ಟೇನಹಳ್ಳಿ ಠಾಣೆ ಪೊಲೀಸರು ಬಂಧಿಸಿ, ₹2.73 ಲಕ್ಷ ಮೌಲ್ಯದ 10 ಮೊಬೈಲ್ ಹಾಗೂ 2 ದ್ವಿಚಕ್ರ ವಾಹನವನ್ನು ವಶಪಡಿಸಿಕೊಂಡಿದ್ದಾರೆ. ಈತನ ಬಂಧನದಿಂದ ಎರಡು ಮೊಬೈಲ್ ಹಾಗೂ ಸುಲಿಗೆ ಪ್ರಕರಣಗಳು ಪತ್ತೆಯಾಗಿವೆ. ಉಳಿದ ಎಂಟು ಮೊಬೈಲ್ ಫೋನ್‌ಗಳ ವಾರಸುದಾರರ ಪತ್ತೆ ಕಾರ್ಯ ನಡೆದಿದೆ ಎಂದು ಪೊಲೀಸರು ತಿಳಿಸಿದರು.

ಜೆ.ಪಿ.ನಗರದ ನಿವಾಸಿಯೊಬ್ಬರು ಕ್ಲಾರೆನ್ಸ್ ಶಾಲೆ ಮುಂಭಾಗದ ರಸ್ತೆಯಲ್ಲಿ ಮೊಬೈಲ್‌ನಲ್ಲಿ ಮಾತನಾಡುವ ವೇಳೆ ದ್ವಿಚಕ್ರ ವಾಹನದಲ್ಲಿ ಬಂದ ವ್ಯಕ್ತಿ, ಮೊಬೈಲ್ ಕಿತ್ತುಕೊಂಡು ಪರಾರಿಯಾಗಿದ್ದ. ಈ ಬಗ್ಗೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು, ತನಿಖೆ ಕೈಗೊಂಡಿದ್ದರು.

ರಾಜಗೋಪಾಲನಗರ ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದ ಸುಲಿಗೆ ಪ್ರಕರಣದಲ್ಲಿ ಜೈಲಿನಲ್ಲಿದ್ದ ಆರೋಪಿಯನ್ನು ವಶಕ್ಕೆ ಪಡೆದುಕೊಂಡು ವಿಚಾರಣೆ ನಡೆಸಿದಾಗ ಮೊಬೈಲ್ ಫೋನ್ ಸುಲಿಗೆ ಮಾಡಿರುವುದಾಗಿ ಹೇಳಿದ್ದಾನೆ. ಅಲ್ಲದೇ, ನಗರದ ವಿವಿಧೆಡೆ ಮೊಬೈಲ್ ಫೋನ್‌ಗಳನ್ನು ಸುಲಿಗೆ ಮಾಡಿರುವುದು ಮತ್ತು ದ್ವಿಚಕ್ರ ವಾಹನಗಳನ್ನು ಕಳವು ಮಾಡಿರುವುದಾಗಿ ತಿಳಿಸಿದ್ದಾನೆ. ಆರೋಪಿಯಿಂದ ಮೊಬೈಲ್ ಫೋನ್, ದ್ವಿಚಕ್ರ ವಾಹನ ವಶಪಡಿಸಿಕೊಂಡು ವಾಪಸ್ ಜೈಲಿಗೆ ಕಳುಹಿಸಲಾಯಿತು ಎಂದು ಹೇಳಿದರು.

₹20 ಲಕ್ಷ ಮೌಲ್ಯದ 253 ಗ್ರಾಂ ಚಿನ್ನಾಭರಣ ವಶ

ಫ್ಲ್ಯಾಟ್‌ನಲ್ಲಿ ಕಳವು: ದಂಪತಿ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಲಸ ಮಾಡುತ್ತಿದ್ದ ಮನೆಯಲ್ಲಿ ಚಿನ್ನಾಭರಣ ಕಳವು ಮಾಡಿದ್ದ ಕೆಲಸದಾಕೆ ಹಾಗೂ ಅವರ ಪತಿಯನ್ನು ಹೆಣ್ಣೂರು ಠಾಣೆ ಪೊಲೀಸರು ಬಂಧಿಸಿದ್ದಾರೆ.

ಗೊಟ್ಟಿಗೆರೆ ನಿವಾಸಿ ಸೋನಿಯಾ ಮತ್ತು ಪ್ರದೀಪ್ ಅವರನ್ನು ಬಂಧಿಸಿ, ₹20.24 ಲಕ್ಷ ಮೌಲ್ಯದ 253 ಗ್ರಾಂ ಚಿನ್ನಾಭರಣವನ್ನು ವಶಪಡಿಸಿಕೊಂಡಿದ್ದಾರೆ.

ಠಾಣಾ ವ್ಯಾಪ್ತಿಯ ಅಪಾರ್ಟ್‌ಮೆಂಟ್ ನಿವಾಸಿ ವಿಶ್ವನಾಥ್ ಅವರು ಅನಾರೋಗ್ಯದಿಂದ ಬಳಲುತ್ತಿದ್ದ ಅಜ್ಜಿಯ ಆರೈಕೆಗಾಗಿ ಸೋನಿಯಾ ಅವರನ್ನು ನೇಮಕ ಮಾಡಿಕೊಂಡಿದ್ದರು. ಕೆಲಸದ ಅವಧಿಯಲ್ಲಿ ಕೊಠಡಿಯ ಬೀರುವಿನಲ್ಲಿಟ್ಟಿದ್ದ ವಜ್ರ, ಚಿನ್ನಾಭರಣ ಹಾಗೂ ₹2.50 ಲಕ್ಷ ನಗದು ಕಳ್ಳತನ ಮಾಡಿದ್ದಳು ಎಂದು ಪೊಲೀಸರು ತಿಳಿಸಿದರು.

ಜ. 11ರಂದು ಕೆಲಸದಾಕೆ ಮನೆಯಿಂದ ಹೊರಗೆ ಹೋಗಿದ್ದು, ಮರಳಿ ಕರ್ತವ್ಯಕ್ಕೆ ಬರಲಿಲ್ಲ. ಮೊಬೈಲ್ ಸ್ವಿಚ್ ಆಫ್ ಆಗಿತ್ತು. ಕೆಲಸದಾಕೆ ಮೇಲೆ ಅನುಮಾನಗೊಂಡು, ಬೀರು ತೆಗೆದು ನೋಡಿದಾಗ ಕಳ್ಳತನವಾಗಿರುವುದು ಗೊತ್ತಾಯಿತು. ಪ್ರಕರಣ ದಾಖಲಿಸಿಕೊಂಡು ಬಾತ್ಮಿದಾರರ ಮಾಹಿತಿ ಆಧರಿಸಿ, ಎಚ್‌ಬಿಆರ್ ಲೇಔಟ್‌ನ 4ನೇ ಬ್ಲಾಕ್ ಹತ್ತಿರ ದಂಪತಿಯನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಯಿತು. ಕಳವು ಮಾಡಿರುವುದಾಗಿ ತಪ್ಪೊಪ್ಪಿಕೊಂಡಿದ್ದಾಳೆ. ಕದ್ದ ಆಭರಣವನ್ನು ಮಾರಾಟ ಮಾಡಲು ಪತಿ ಸಹಕರಿಸುತ್ತಿದ್ದ ಎಂದು ಪೊಲೀಸರು ಮಾಹಿತಿ ನೀಡಿದರು.

ಆಭರಣಗಳನ್ನು ನೆಲ್ಲೂರಿನ ಆಭರಣ ಅಂಗಡಿ ಹಾಗೂ ಜೆ.ಪಿ.ನಗರ ಕೊತ್ತನೂರು ದಿಣ್ಣೆಯಲ್ಲಿ ವಾಸವಿರುವ ಸ್ನೇಹಿತನಿಗೆ ಮಾರಾಟ ಮಾಡಿರುವುದಾಗಿ ತಿಳಿಸಿದರು. ಇಬ್ಬರಿಗೂ ನೋಟಿಸ್ ಜಾರಿ ಮಾಡಿದ್ದು, ಆಭರಣವನ್ನು ಠಾಣೆಗೆ ತಂದು ಒಪ್ಪಿಸಿದ್ದಾರೆ. ಆರೋಪಿಗಳನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ ಎಂದರು.

ಈ ಹಿಂದೆ ನಗರದ ವಿವಿಧ ಠಾಣಾ ವ್ಯಾಪ್ತಿಯ ಮೂರು ಮನೆಗಳಲ್ಲಿ ಕಳವು ಮಾಡಿರುವುದಾಗಿ ತಿಳಿಸಿದ್ದು, ಅವರಿಂದ 45 ಗ್ರಾಂ ಚಿನ್ನಾಭರಣ ವಶಪಡಿಸಿಕೊಳ್ಳಲಾಗಿದೆ. ಮನೆ ಕೆಲಸಕ್ಕೆ ಮಹಿಳೆಯರನ್ನು ನೇಮಿಸಿಕೊಳ್ಳುವ ಮುನ್ನ ಅವರ ಪೂರ್ವಾಪರ ವಿಚಾರಿಸಬೇಕು. ಸಮೀಪದ ಠಾಣೆ ಅಥವಾ ಸೇವಾ ಸಿಂಧು ಪೋರ್ಟಲ್ ಮೂಲಕ ತಿಳಿದುಕೊಳ್ಳಬಹುದು. ಆಭರಣಗಳನ್ನು ಲಾಕರ್‌ನಲ್ಲಿ ಸುರಕ್ಷಿತವಾಗಿ ಇಡಬೇಕು ಎಂದು ಪೊಲೀಸರು ಸಲಹೆ ನೀಡಿದರು.

ಪೊಲೀಸ್ ಸೋಗಿನಲ್ಲಿ ಸುಲಿಗೆ

ಬೆಂಗಳೂರು: ಪೊಲೀಸ್ ಸೋಗಿನಲ್ಲಿ ಯುವಕ, ಯುವತಿ ಹಾಗೂ ದಂಪತಿಯನ್ನು ಗುರಿಯಾಗಿಸಿಕೊಂಡು ಹಣ, ಆಭರಣ ಸುಲಿಗೆ ಮಾಡುತ್ತಿದ್ದ ಆಟೊ ಚಾಲಕನನ್ನು ಪೊಲೀಸರು ಬಂಧಿಸಿದ್ದಾರೆ.

ಆರ್.ಟಿ.ನಗರ ನಿವಾಸಿ ಆಸೀಫ್ ಖಾನ್ ಅವರನ್ನು ಬಂಧಿಸಿ, 80 ಗ್ರಾಂ ಚಿನ್ನಾಭರಣ ವಶಪಡಿಸಿಕೊಳ್ಳಲಾಗಿದೆ. ನಗರದ ವಿವಿಧ ಠಾಣೆಗಳಲ್ಲಿ ಈತನ ವಿರುದ್ಧ 19 ಪ್ರಕರಣಗಳು ದಾಖಲಾಗಿರುವುದು ತನಿಖೆ ವೇಳೆ ಗೊತ್ತಾಗಿದೆ ಎಂದು ಡಿಸಿಪಿ ಲೋಕೇಶ್ ಬಿ ಜಗಲಾಸರ್ ತಿಳಿಸಿದ್ದಾರೆ.

'ಆಟೊ ಚಾಲನೆ ಮಾಡುವಾಗ, ಸಂಜೆ ವೇಳೆ ಸಾರ್ವಜನಿಕ ಸ್ಥಳ, ಉದ್ಯಾನ ಹಾಗೂ ಕಾರುಗಳಲ್ಲಿ ಒಟ್ಟಿಗಿರುವ ದಂಪತಿ ಹಾಗೂ ಜೋಡಿಗಳ ಬಳಿ ತೆರಳಿ, ಪೊಲೀಸ್ ಎಂದು ಹೇಳುತ್ತಿದ್ದ. ಅಸಭ್ಯವಾಗಿ ವರ್ತಿಸುತ್ತಿರುವ ಕಾರಣ ನಿಮ್ಮ ವಿರುದ್ಧ ಪ್ರಕರಣ ದಾಖಲಿಸಲಾಗುವುದು ಎಂದು ಹಣ ಸುಲಿಗೆ ಮಾಡುತ್ತಿದ್ದ. ಮಾರ್ಚ್ 5ರಂದು ಜಯನಗರದ ಪಾರ್ಕ್ ಬಳಿ ಕಾರಿನೊಳಗೆ ಕುಳಿತಿದ್ದ ದಂಪತಿಯನ್ನು ಬೆದರಿಸಿ, ₹10 ಸಾವಿರ ನಗದು, 12 ಗ್ರಾಂ ತೂಕದ ಚಿನ್ನದ ಸರ ಸುಲಿಗೆ ಮಾಡಿ ಪರಾರಿಯಾಗಿದ್ದ' ಎಂದು ಪೊಲೀಸರು ಹೇಳಿದರು.

ಕಂಪನಿಗೆ ₹96 ಲಕ್ಷ ವಂಚನೆ: ಮಾರಾಟ ಪ್ರತಿನಿಧಿ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಂಪನಿಯ ವೆಲ್ಡಿಂಗ್ ರಾಡ್‌ಗಳನ್ನು ವಿವಿಧ ಅಂಗಡಿಗಳಿಗೆ ಮಾರಾಟ ಮಾಡಿ ಬಂದ ಹಣವನ್ನು ತನ್ನ ವೈಯಕ್ತಿಕ ಖಾತೆ ಮತ್ತು ನಗದು ರೂಪದಲ್ಲಿ ಪಡೆದು ₹ 96 ಲಕ್ಷ ವಂಚಿಸಿದ ಪ್ರಕರಣದಲ್ಲಿ ಮಾರಾಟ ಪ್ರತಿನಿಧಿಯನ್ನು ಹಲಸೂರು ಗೇಟ್ ಪೊಲೀಸರು ಬಂಧಿಸಿದ್ದಾರೆ.

ವಿನಾಯಕ ಟ್ರೇಡಿಂಗ್ ಸೆಂಟರ್ ಪ್ರೈವೇಟ್ ಕಂಪನಿ ಮಾಲೀಕ ರಾಘವೇಂದ್ರ ಅವರ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು, ಹರಿಯಾಣದ ಹಿಸ್ಸಾರ್ ಜಿಲ್ಲೆಯ ದಯಾನಂದ್ ಅಗರ್‌ವಾಲ್ ಅವರನ್ನು ಬಂಧಿಸಿ, ₹11.24 ಲಕ್ಷ ವಶಪಡಿಸಿಕೊಳ್ಳಲಾಗಿದೆ. ನಾಪತ್ತೆಯಾಗಿರುವ ಆರೋಪಿ ಪತ್ತೆಗೆ ಶೋಧ ಕಾರ್ಯ ನಡೆಯುತ್ತಿದೆ ಎಂದು ಪೊಲೀಸರು ತಿಳಿಸಿದರು.

'ಕಂಪನಿಯಲ್ಲಿ ಮಾರಾಟ ಪ್ರತಿನಿಧಿಯಾಗಿರುವ ದಯಾನಂದ, ಬೆಂಗಳೂರು, ಮಂಡ್ಯ, ಚನ್ನಪಟ್ಟಣದ ಅಂಗಡಿಗಳಿಗೆ ₹96 ಲಕ್ಷ ಮೌಲ್ಯದ ವೆಲ್ಡಿಂಗ್ ರಾಡ್‌ಗಳನ್ನು ಮಾರಾಟ ಮಾಡಿ, ಬಂದ ಹಣವನ್ನು ಕಂಪನಿ ಬ್ಯಾಂಕ್ ಖಾತೆಗೆ ಜಮೆ ಮಾಡದೆ, ತನ್ನ ವೈಯಕ್ತಿಕ ಖಾತೆಗೆ ಮಾಡಿಕೊಂಡಿದ್ದಾನೆ' ಎಂದು ಪೊಲೀಸರು ತಿಳಿಸಿದರು.

ನಾಲ್ವರು ಮಾರಾಟ ಪ್ರತಿನಿಧಿಗಳ ವಿರುದ್ಧ ತನಿಖೆ ನಡೆಸಲಾಯಿತು. ಈ ಪೈಕಿ ದಯಾನಂದ ಅವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ, ಮಾರಾಟ ಮಾಡಿದ ಹಣವನ್ನು ನೀಡದೆ ಮೋಸ ಮಾಡಿರುವುದಾಗಿ ಹೇಳಿದ್ದಾನೆ. ಆತನಿಂದ ₹11 ಲಕ್ಷ ನಗದು ವಶಪಡಿಸಿಕೊಳ್ಳಲಾಗಿದೆ ಎಂದು ಹೇಳಿದರು

ಮತ್ತಿಬ್ಬರು ಆರೋಪಿಗಳು ಕೃತ್ಯದಲ್ಲಿ ಭಾಗಿಯಾಗಿರುವ ಬಗ್ಗೆ ಪುರಾವೆಗಳು ಕಂಡು ಬಂದಿಲ್ಲದ ಕಾರಣ ಅವರಿಗೆ ನೋಟಿಸ್ ನೀಡಲಾಗಿದೆ. ತಲೆಮರೆಸಿಕೊಂಡಿರುವ ಮತ್ತೊಬ್ಬ ಆರೋಪಿಯ ಪತ್ತೆ ಕಾರ್ಯ ಮುಂದುವರಿದಿದೆ ಎಂದರು.

ಕಾಲೇಜು ವಿದ್ಯಾರ್ಥಿನಿ ಆತ್ಮಹತ್ಯೆ

ಬೆಂಗಳೂರು: ನಗರದ ಖಾಸಗಿ ಕಾಲೇಜಿನ ವಿದ್ಯಾರ್ಥಿನಿ ಶುಕ್ರವಾರ ಮಧ್ಯಾಹ್ನ ಕಟ್ಟಡದ ನಾಲ್ಕನೇ ಮಹಡಿಯಿಂದ ಹಾರಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಕೇರಳ ಮೂಲದ ಲಕ್ಷ್ಮಿ ಮಿತ್ರ (23) ಅವರು ಬಿಸಿಎ ಆರನೇ ಸೆಮಿಸ್ಟರ್ ವಿದ್ಯಾರ್ಥಿನಿ. ಮಹಡಿಯಿಂದ ಬಿದ್ದು ತೀವ್ರವಾಗಿ ಗಾಯಗೊಂಡ ಇವರನ್ನು ಆಸ್ಪತ್ರೆಗೆ ದಾಖಲಿಸಲಾಯಿತು. ಆದರೆ ಚಿಕಿತ್ಸೆಗೆ ಸ್ಪಂದಿಸಲಿಲ್ಲ. ಆತ್ಮಹತ್ಯೆಗೆ ನಿಖರ ಕಾರಣ ತಿಳಿದು ಬಂದಿಲ್ಲ. ಸೋಲದೇವನಹಳ್ಳಿ ಪೊಲೀಸ್ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಕೇರಳದಲ್ಲಿರುವ ಪೋಷಕರಿಗೆ ವಿಷಯ ತಿಳಿಸಲಾಗಿದೆ ಎಂದರು.

ಸ್ಫೋಟಕ ಮಾದರಿ ವಸ್ತುಗಳು ಪತ್ತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂಪಿಗೆಹಳ್ಳಿ ಠಾಣೆ ವ್ಯಾಪ್ತಿಯ ಬೆಳ್ಳಹಳ್ಳಿಯ ಹೋಟೆಲ್ ಸಿಬ್ಬಂದಿ ಬ್ಯಾಗ್‌ನಲ್ಲಿ ಸ್ಫೋಟಕ ಮಾದರಿಯ ವಸ್ತುಗಳು ಪತ್ತೆಯಾಗಿದ್ದು, ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

ಅಬ್ದುಲ್ ರೆಹಮಾನ್ ಅವರ ಬ್ಯಾಗ್‌ನಲ್ಲಿ ಪತ್ತೆಯಾದ ವಸ್ತುಗಳನ್ನು ಪೊಲೀಸರು ವಶಕ್ಕೆ ಪಡೆದು ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಿದ್ದಾರೆ. ಆರೋಪಿ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ.

'ಬೆಳ್ಳಹಳ್ಳಿಯ ನಿವಾಸಿ ಎಂದು ಹೇಳಿಕೊಂಡಿರುವ ಅಬ್ದುಲ್ ಹೋಟೆಲ್‌ನಲ್ಲಿ ಮೂರು ದಿನದ ಹಿಂದೆಯಷ್ಟೇ ಕೆಲಸಕ್ಕೆ ಸೇರಿಕೊಂಡಿದ್ದ. ಬಳಿಕ ಹೋಟೆಲ್ ಮಾಲೀಕರು, ಆತನ ಆಧಾರ್ ಕಾರ್ಡ್ ಕೇಳಿದ್ದರು. ಆದರೆ, ಆತ ಕೊಟ್ಟಿರಲಿಲ್ಲ. ಇದರಿಂದ ಅನುಮಾನಗೊಂಡು, ಶೆಡ್‌ನಲ್ಲಿದ್ದ ರೆಹಮಾನ್‌ನ ಬ್ಯಾಗ್ ಪರಿಶೀಲಿಸಿದಾಗ ಸ್ಫೋಟಕ ಮಾದರಿಯ ವಸ್ತುಗಳು ಪತ್ತೆಯಾಗಿವೆ' ಎಂದು ಹೇಳಿದ್ದಾರೆ.

'ರಸ್ತೆ ಬದಿ ಪ್ಲಾಸ್ಟಿಕ್ ವಸ್ತುಗಳನ್ನು ಸಂಗ್ರಹಿಸುವ ವೇಳೆ ಸಿಕ್ಕ ಈ ವಸ್ತುವನ್ನೂ ಬ್ಯಾಗ್‌ನಲ್ಲಿಟ್ಟುಕೊಂಡಿದ್ದೆ ಎಂದು ವಿಚಾರಣೆ ವೇಳೆ ರೆಹಮಾನ್ ಹೇಳಿದ್ದಾನೆ. ಟೆನಿಸ್ ಬಾಲ್ ಗಾತ್ರದ ವಸ್ತುವಿನಿಂದ ಬತ್ತಿಗಳು ಹೊರ ಬಂದಿದ್ದು, ಅದರಲ್ಲಿದ್ದ ರಾಸಾಯನಿಕವನ್ನು ಸಂಗ್ರಹಿಸಿ ಎಫ್‌ಎಸ್‌ಎಲ್‌ಗೆ ಕಳುಹಿಸಲಾಗಿದೆ. ಆರೋಪಿ ಬಳಿ ಮೊಬೈಲ್ ಇಲ್ಲ. ಇದುವರೆಗೂ ಯಾವುದೇ ಅಪರಾಧ ಪ್ರಕರಣಗಳಲ್ಲಿ ಭಾಗಿಯಾಗಿರುವುದು ಪತ್ತೆಯಾಗಿಲ್ಲ' ಎಂದು ಪೂರ್ವ ವಿಭಾಗ ಜಂಟಿ ಪೊಲೀಸ್ ಆಯುಕ್ತ ರಮೇಶ್ ಬಾನೋತ್ ತಿಳಿಸಿದ್ದಾರೆ.

ಮೇಕೆದಾಟು ಜಾರಿ ಕರವೇ ಪಾದಯಾತ್ರೆ

ರಾಮನಗರ: ಕಾವೇರಿ ನದಿಗೆ ಮೇಕೆದಾಟು ಬಳಿ ಅಣೆಕಟ್ಟೆ ನಿರ್ಮಾಣ ಯೋಜನೆ ಜಾರಿಗೆ ಆಗ್ರಹಿಸಿ, ಕರ್ನಾಟಕ ರಕ್ಷಣಾ ವೇದಿಕೆ (ಪ್ರವೀಣ್ ಕುಮಾರ್ ಶೆಟ್ಟಿ ಬಣ) ವತಿಯಿಂದ ರಾಮನಗರದಿಂದ ರಾಜಧಾನಿ ಬೆಂಗಳೂರಿನವರೆಗೆ ಕೈಗೊಂಡಿರುವ ಎರಡು ದಿನಗಳ ಪಾದಯಾತ್ರೆ ಶುಕ್ರವಾರ ಶುರುವಾಯಿತು.

ಪಾಕ್ ಪರ ಗೂಢಚಾರನ ಬಂಧನ

ಬೆಂಗಳೂರು: ಕೇಂದ್ರ, ರಾಜ್ಯ ಗುಪ್ತಚರ ಇಲಾಖೆ ಹಾಗೂ ಸೇನಾ ಗುಪ್ತಚರ ವಿಭಾಗದ ಅಧಿಕಾರಿಗಳು ಜಂಟಿ ಕಾರ್ಯಾಚರಣೆ ನಡೆಸಿ, ದೇಶದ ರಕ್ಷಣಾ ವ್ಯವಸ್ಥೆಯ ಮಾಹಿತಿಗಳನ್ನು ನೆರೆ ರಾಷ್ಟ್ರ ಪಾಕಿಸ್ತಾನಕ್ಕೆ ರವಾನಿಸುತ್ತಿದ್ದ ಗೂಢಚಾರನನ್ನು ಬಂಧಿಸಿವೆ.

ಉತ್ತರ ಪ್ರದೇಶದ ಗಾಜಿಯಾಬಾದ್ ಮೂಲದ ನಿವಾಸಿ ದೀಪ್ ರಾಜ್ ಚಂದ್ರ ಶಂಕಿತ ಗೂಢಚಾರ. ಬಿಇಎಲ್ ಉದ್ಯೋಗಿಯಾಗಿದ್ದುಕೊಂಡೇ ಈತ ವಾಟ್ಸ್‌ಆ್ಯಪ್ ಹಾಗೂ ಟೆಲಿಗ್ರಾಂ ಬಳಸಿ ಮಾಹಿತಿ ರವಾನಿಸುತ್ತಿದ್ದ ವಿಚಾರ ತನಿಖೆ ವೇಳೆ ಗೊತ್ತಾಗಿದೆ ಎಂದು ಗೃಹ ಸಚಿವ ಜಿ.ಪರಮೇಶ್ವರ ತಿಳಿಸಿದ್ದಾರೆ. ಆರೋಪಿಯಿಂದ ಮೊಬೈಲ್, ಲ್ಯಾಪ್‌ಟಾಪ್‌ಗಳನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

ನಗರದಲ್ಲಿ ಇಂದು

ಎಚ್‌.ಎಸ್‌. ಶ್ರೀಮತಿ

ಅಖಿಲ ಕರ್ನಾಟಕ ಲೇಖಕಿಯರ ಸಮ್ಮೇಳನ: ಉದ್ಘಾಟನೆ: ಸಿದ್ದರಾಮಯ್ಯ, ಸಮ್ಮೇಳನಾಧ್ಯಕ್ಷತೆ: ಎಚ್.ಎಸ್. ಶ್ರೀಮತಿ, ಪ್ರಸ್ತಾವನೆ: ಎಚ್.ಎಲ್. ಪುಷ್ಪ, ಮುಖ್ಯ ಅತಿಥಿಗಳು: ಸೋಮಣ್ಣ ಬೇವಿನಮರದ, ರಾಜೇಂದ್ರ ಚೆನ್ನಿ, ವೂಡೇ ಪಿ. ಕೃಷ್ಣ, ಎನ್. ಮಂಜುಳ, ಕೆ.ಎಂ. ಗಾಯತ್ರಿ, ಸಂಘದ ಮಾಜಿ ಅಧ್ಯಕ್ಷರಿಗೆ ಗೌರವ ಸನ್ಮಾನ, 'ಭಾಷೆ: ಸಾಧ್ಯತೆ ಮತ್ತು ಸವಾಲುಗಳು' ವಿಚಾರ ಗೋಷ್ಠಿ, ಕವಿಗೋಷ್ಠಿ, 'ತಲ್ಕಿ' ನಾಟಕ ಪ್ರದರ್ಶನ, ಆಯೋಜನೆ: ಕರ್ನಾಟಕ ಲೇಖಕಿಯರ ಸಂಘ, ಸ್ಥಳ: ಕೊಂಡಜ್ಜಿ ಬಸಪ್ಪ ಸಭಾಂಗಣ, ಅರಮನೆ ರಸ್ತೆ, ಬೆಳಿಗ್ಗೆ 10ರಿಂದ

'ಪೂರ್ವ ಕದಂಬರು ಮತ್ತು ಅವರ ಕಾಲ' ಕುರಿತು ರಾಷ್ಟ್ರೀಯ ವಿಚಾರ ಸಂಕಿರಣ ಹಾಗೂ ಕದಂಬರ ಶಾಸನಗಳ ಪಡಿಯಚ್ಚು ಚಿತ್ರಗಳು ಮತ್ತು ಶಿಲಾಶಾಸನಗಳ 3ಡಿ ಡಿಜಿಟಲ್ ಮಾದರಿಗಳ ಪ್ರದರ್ಶನ: ಮುಖ್ಯ ಅತಿಥಿಗಳು: ಪಿ.ಸಿ. ಮೋಹನ್, ಕೆ. ಮುನಿರತ್ನಂ ರೆಡ್ಡಿ, ಆಶಯ ಭಾಷಣ: ರಾಜಾರಾಮ ಹೆಗಡೆ, ಅಧ್ಯಕ್ಷತೆ: ವಿ. ನಾಗರಾಜ್, ಆಯೋಜನೆ ಹಾಗೂ ಸ್ಥಳ: ಶತಮಾನೋತ್ಸವ ಭವನ, ದಿ ಮಿಥಿಕ್ ಸೊಸೈಟಿ, ನೃಪತುಂಗ ರಸ್ತೆ, ಬೆಳಿಗ್ಗೆ 10.30

'ಚಾರು ವಸಂತ' ಪುಸ್ತಕ ಬಿಡುಗಡೆ: ಶ್ಯಾಮಲ ಭಟ್ಟಾಚಾರ್ಯ, ಅತಿಥಿ: ಅನುಭವ್ ತುಳಸಿ, ಮಾನಸ, ಅಧ್ಯಕ್ಷತೆ: ವೂಡೇ ಪಿ. ಕೃಷ್ಣ, ಮೂಲ ಲೇಖಕ: ಹಂ.ಪ.ನಾಗರಾಜಯ್ಯ, ಅಸ್ಸಾಮಿ ಭಾಷೆಗೆ ಅನುವಾದ: ಅಂಕುರ್ ರಂಜನ್ ಪುಕನ್, ಆಯೋಜನೆ: ಕಮಲಾ–ಹಂಪನಾ ಸಾಹಿತ್ಯ ವೇದಿಕೆ, ಶೇಷಾದ್ರಿಪುರಂ ಶಿಕ್ಷಣ ದತ್ತಿ, ಸ್ಥಳ: ಶೇಷಾದ್ರಿಪುರಂ ಕಾಲೇಜು, ಶೇಷಾದ್ರಿಪುರ, ಸಂಜೆ 4

ಭರತನಾಟ್ಯ ರಂಗಪ್ರವೇಶ: ಎ.ಎನ್. ಕೀರ್ತನಾ ರಾವ್, ಅತಿಥಿಗಳು: ಅರಳುಮಲ್ಲಿಗೆ ಪಾರ್ಥಸಾರಥಿ, ರಾಧಾ ಶ್ರೀಧರ್, ಎಂ.ಆರ್. ಕಮಲಾ, ಆಯೋಜನೆ: ಆರತಿ ಎನ್. ರಾವ್ ಮತ್ತು ಎಂ.ಎನ್. ನಾಗಭೂಷಣ ರಾವ್, ಸ್ಥಳ: ಎಡಿಎ ರಂಗಮಂದಿರ, ಜೆ.ಸಿ.ರಸ್ತೆ, ಸಂಜೆ 5

'ಮರೆಯಲಾಗದ ಮಹನೀಯರು': ಅಧ್ಯಕ್ಷತೆ: ವೈ.ಕೆ. ಮುದ್ದುಕೃಷ್ಣ, ಸಂತ ಶಿಶುನಾಳ ಶರೀಫರಿಗೆ ನುಡಿನಮನ: ಸತ್ಯೇಶ್ ಬೆಳ್ಳೂರ್, ಎಂ. ಗೋವಿಂದ ಪೈ ಅವರಿಗೆ ನುಡಿನಮನ: ನಾ. ದಾಮೋದರ ಶೆಟ್ಟಿ, ಡಿ.ವಿ.ಗುಂಡಪ್ಪ ಅವರಿಗೆ ನುಡಿನಮನ: ಪುತ್ತುರಾಯ, ಪು.ತಿ. ನರಸಿಂಹಾಚಾರ್ ಅವರಿಗೆ ನುಡಿನಮನ: ಬಿ.ವಿ. ರಾಜಾರಾಂ, ಉಪಸ್ಥಿತಿ: ಮುದ್ದುಮೋಹನ್, ಮುನಿಕೃಷ್ಣ, ಆಯೋಜನೆ: ಕರ್ನಾಟಕ ಸುಗಮ ಸಂಗೀತ ಪರಿಷತ್ತು, ಸ್ಥಳ: ಆರ್. ಅಶೋಕ ಶಾಸಕರ ಕಚೇರಿ ಆವರಣ, ಬೆಂಗಳೂರು ವಿಹಾರ ಕೇಂದ್ರ ಹತ್ತಿರ, ಬನಶಂಕರಿ 2ನೇ ಹಂತ, ಸಂಜೆ 5.30

ಡೆಬೋರ ತ್ಯಾಗರಾಜನ್ ಅವರ 'ಕರ್ನಾಟಕ ಗ್ರಾಮೀಣ ಸೃಜನಶೀಲ' ಪುಸ್ತಕ ಬಿಡುಗಡೆ: ರಾಮಲಿಂಗಾರೆಡ್ಡಿ, ಅತಿಥಿಗಳು: ಗೀತಾ ರಾವ್, ಪ್ರಮೋದ್ ಕುಮಾರ್, ಅಧ್ಯಕ್ಷತೆ: ಬಿ.ಎಲ್. ಶಂಕರ್, ಆಯೋಜನೆ ಹಾಗೂ ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್ತು, ಕುಮಾರಕೃಪ ರಸ್ತೆ, ಸಂಜೆ 5.30

'ಮಹಾಭಾರತ-ಶಾಂತಿಪರ್ವ' ಪ್ರವಚನ: ಕಲ್ಯಾ ಶ್ರೀಕಾಂತಾಚಾರ್ಯ, ಆಯೋಜನೆ ಹಾಗೂ ಸ್ಥಳ: ಮಾಧ್ವ ಸಂಘ, 58ನೇ ಅಡ್ಡರಸ್ತೆ, 4ನೇ ಬ್ಲಾಕ್, ರಾಮಮಂದಿರದ ಹತ್ತಿರ, ರಾಜಾಜಿನಗರ, ಸಂಜೆ 6.30

'ನಾಯಿ ಕಳೆದಿದೆ' ನಾಟಕ ಪ್ರದರ್ಶನ: ನಿರ್ದೇಶನ: ರಾಜೇಂದ್ರ ಕಾರಂತ್, ತಂಡ: ನಮ್ದೆ ನಟನೆ, ಸ್ಥಳ: ಡಾ.ಸಿ.ಅಶ್ವಥ್ ಕಲಾ ಭವನ, ಎನ್.ಆರ್. ಕಾಲೊನಿ, ಸಂಜೆ 7

'ಡಖವ್' ನಾಟಕ ಪ್ರದರ್ಶನ: ನಿರ್ದೇಶನ: ಕೌಶಿಕ್ ಎಚ್.ಎ., ಸ್ಥಳ: ಸಾಂಸ್ಕೃತಿಕ ಸಮುಚ್ಚಯ, ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 7.30

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ

nagaradalli_indu@prajavani.co.in

ಬೀದರ್, ರಾಯಚೂರು ಜಿಲ್ಲೆಯಲ್ಲಿ ಮಳೆ

ಪ್ರಜಾವಾಣಿ ವಾರ್ತೆ

ಕಲಬುರಗಿ: ಕಲ್ಯಾಣ ಕರ್ನಾಟಕದ ಬೀದರ್, ಕಲಬುರಗಿ, ಕೊಪ್ಪಳ, ರಾಯಚೂರು ಜಿಲ್ಲೆಗಳಲ್ಲಿ ಶುಕ್ರವಾರ ಕೆಲ ಹೊತ್ತು ಗುಡುಗು ಸಹಿತ ಮಳೆಯಾಗಿದೆ.

ಬೀದರ್ ನಗರದಲ್ಲಿ ಮಧ್ಯಾಹ್ನ 3.30ರಿಂದ ಸಂಜೆ 4.30ರ ತನಕ ಗುಡುಗು ಸಹಿತ ಮಳೆಯಾಗಿದ್ದು, ತಾಪಮಾನದಲ್ಲಿ ಭಾರಿ ಇಳಿಕೆಯಾಗಿದೆ. ವಾತಾವರಣ ಸಂಪೂರ್ಣ ತಂಪಾಗಿದೆ. ಬಿಸಿಲಿನಿಂದ ಕಂಗೆಟ್ಟಿದ್ದ ಜನ ನೆಮ್ಮದಿಯ ನಿಟ್ಟುಸಿರು ಬಿಟ್ಟಿದ್ದಾರೆ. ಬೆಳಿಗ್ಗೆಯಿಂದ ಮಧ್ಯಾಹ್ನದ ತನಕ ಸಾಧಾರಣ ಪ್ರಮಾಣದಲ್ಲಿ ಬಿಸಿಲು ಇತ್ತು. ಮಧ್ಯಾಹ್ನದ ನಂತರ ದಟ್ಟ ಕಾರ್ಮೋಡ ಕವಿದು ವರ್ಷಧಾರೆಯಾಗಿದೆ.

ಬೀದರ್ ತಾಲ್ಲೂಕಿನ ಅಮಲಾಪುರ, ಚಿಟ್ಟಾ, ಘೋಡಂಪಳ್ಳಿ, ಯಾಕತಪುರ, ಯದಲಾಪುರ, ಶಹಾಪುರ, ಗುನ್ನಳ್ಳಿ ಸೇರಿದಂತೆ ಹಲವೆಡೆ ಮಳೆಯಾಗಿದೆ. ಜಿಲ್ಲೆಯ ಬಸವಕಲ್ಯಾಣ, ಚಿಟಗುಪ್ಪ, ಹುಮನಾಬಾದ್, ಹುಲಸೂರಿನಲ್ಲಿ ಗುರುವಾರ ತಡರಾತ್ರಿ ಸಾಧಾರಣ ಮಳೆಯಾಗಿದೆ. ಬೀದರ್ ನಗರದಲ್ಲಿ ಸಂಜೆ ಪುನಃ ಕೆಲಹೊತ್ತು ಮಳೆ ಸುರಿದಿದೆ.

ಕೊಪ್ಪಳ ಜಿಲ್ಲೆಯ ಹನುಮಸಾಗರ ಬಳಿಯ ಜಹಗೀರಗುಡದೂರದಲ್ಲಿ ಗುರುವಾರ ರಾತ್ರಿ ಮಳೆ ಸುರಿದಿದೆ. ಒಂದು ಗಂಟೆಗಿಂತ ಹೆಚ್ಚು ಸಮಯ ಸುರಿದ ಮಳೆ ರೈತರ ಮೊಗದಲ್ಲಿ ಮಂದಹಾಸ ಮೂಡಿಸಿದೆ.

ಮಳೆಯ ಜೊತೆಗೆ ಸಿಡಿಲಿನ ಅಬ್ಬರ ಜೋರಾಗಿದ್ದು, ಗ್ರಾಮದ ತೆಂಗಿನ ಮರಕ್ಕೆ ಸಿಡಿಲು ಬಡಿದಿದೆ.

ರಾಯಚೂರು ಜಿಲ್ಲೆಯ ಹಟ್ಟಿ ಪಟ್ಟಣದಲ್ಲಿ ಅರ್ಧಗಂಟೆ ಬಿದ್ದ ಅಕಾಲಿಕ ಮಳೆಯಿಂದ ಚರಂಡಿಗಳು ಭರ್ತಿಯಾಗಿ ತುಂಬಿ ಹರಿದವು.

ಗೆಜ್ಜಲಗಟ್ಟಾ, ಗುರುಗುಂಟಾ ಗ್ರಾಮದಲ್ಲಿ ಕೆಲ ಹೊತ್ತು ಮಳೆಯಾಗಿದೆ.

ಕಲಬುರಗಿ ಜಿಲ್ಲೆಯ ಕಮಲಾಪುರದಲ್ಲಿ ಕೆಲ ಕಾಲ ಮಳೆಯಾಯಿತು.

ಮಲ್ಪೆ ಬಂದರಿನಲ್ಲಿ ಹಲ್ಲೆಗೊಳಗಾದ ಮಹಿಳೆಯ ಹೇಳಿಕೆ

‘ಊರಿಗೆ ವಾಪಸ್ ಹೋಗುತ್ತೇವೆ’

ಪ್ರಜಾವಾಣಿ ವಾರ್ತೆ

ಉಡುಪಿ: ‘ಮೀನು ಕದ್ದಿದ್ದೇನೆ ಎಂದು ಆರೋಪಿಸಿ ನನಗೆ ಹೊಡೆದಿದ್ದಾರೆ. ಆ ನಂತರ ನಾನು ಬಂದರಿಗೆ ಹೋಗಿಲ್ಲ. ನಾವು ನಮ್ಮ ಊರಿಗೆ ವಾಪಸ್ ಹೋಗುತ್ತೇವೆ’ ಎಂದು ಮಲ್ಪೆಯಲ್ಲಿ ಹಲ್ಲೆಗೊಳಗಾಗಿದ್ದ ವಿಜಯನಗರ ಜಿಲ್ಲೆಯ ಹೂವಿನಹಡಗಲಿಯ ಮಹಿಳೆ ಹೇಳಿದರು.

ಸುದ್ದಿಗಾರರ ಜೊತೆ ಶುಕ್ರವಾರ ಮಾತನಾಡಿದ ಅವರು, ‘ಆರೇಳು ವರ್ಷದಿಂದ ಮಲ್ಪೆಯಲ್ಲಿ ಕೆಲಸ ಮಾಡುತ್ತಿದ್ದೇನೆ. ನನ್ನ ಮೇಲೆ ಹಲ್ಲೆ ಮಾಡಿದವರನ್ನು ಬಂದರಿನಲ್ಲಿ ನೋಡಿದ ಪರಿಚಯವಿದೆ’ ಎಂದರು.

‘ಹಲ್ಲೆ ನಡೆಸಿದವರ ಮೇಲೆ ನನಗೆ ದ್ವೇಷವಿಲ್ಲ. ಅವರಿಗೆ ಏನೂ ಮಾಡುವುದು ಬೇಡ. ಘಟನೆ ನಡೆದ ಬಳಿಕ ನನಗೆ ಯಾರೂ ತೊಂದರೆ ನೀಡಿಲ್ಲ. ನಮ್ಮ ಪಾಡಿಗೆ ನಾವು ದುಡಿದು ತಿನ್ನುತ್ತೇವೆ’ ಎಂದರು.

‘ಕೃತ್ಯ ನಡೆದ ದಿನ ರಾತ್ರಿ ರಾಜಿ ಪಂಚಾಯಿತಿ ಮಾಡಿಕೊಂಡು ಬಂದಿದ್ದೆವು. ಮರುದಿನ ಪ್ರಕರಣ ದಾಖಲು ಮಾಡಿಕೊಂಡಿದ್ದಾರೆ. ಅದಕ್ಕೆ ನಾನು ಪೊಲೀಸ್ ಠಾಣೆಗೆ ಹೋಗಿ ಸಹಿ ಮಾಡಿ ಬಂದಿದ್ದೇನೆ’ ಎಂದೂ ವಿವರಿಸಿದರು.

‘ನಾನು ಸ್ವಲ್ಪ ಮೀನು ತೆಗೆದಿದ್ದು ಹೌದು, ಬಂದರಿನಲ್ಲಿ ಈ ರೀತಿ ಮೀನು ತೆಗೆಯುವುದು ಸಾಮಾನ್ಯ. ಆದರೆ ಅವತ್ತು ನನ್ನ ಗ್ರಹಚಾರ ಸರಿ ಇರಲಿಲ್ಲ’ ಎಂದು ಪ್ರತಿಕ್ರಿಯಿಸಿದರು.

ಅಪಪ್ರಚಾರ ವಿರೋಧಿಸಿ ಪ್ರತಿಭಟನೆ: ‘ಮಹಿಳೆ ಮೇಲೆ ಹಲ್ಲೆ ನಡೆದಿರುವುದನ್ನು ನಾವು ಸಮರ್ಥಿಸಿಕೊಳ್ಳುವುದಿಲ್ಲ. ಮಲ್ಪೆಯಲ್ಲಿ ನಾವೆಲ್ಲ ಸೌಹಾರ್ದದಿಂದ ಬದುಕುತ್ತಿದ್ದೇವೆ. ಕೋವಿಡ್ ಕಾಲದಲ್ಲಿ ಹೊರಗಿನ ಕಾರ್ಮಿಕರಿಗೆ ನಾವು ಸಾಕಷ್ಟು ಸಹಾಯ ಮಾಡಿದ್ದೇವೆ. ಮೊನ್ನೆಯ ಕೃತ್ಯವನ್ನು ಇಟ್ಟುಕೊಂಡು ಅಪಪ್ರಚಾರ ಮಾಡಲಾಗುತ್ತಿದೆ ಮತ್ತು ಅಮಾಯಕರನ್ನು ಬಂಧಿಸಿರುವುದನ್ನು ಖಂಡಿಸಿ ಶನಿವಾರ ಬೆಳಿಗ್ಗೆ 9ರಿಂದ ಮಧ್ಯಾಹ್ನ 12ರವರೆಗೆ ಮಲ್ಪೆಯಲ್ಲಿ ಮೀನುಗಾರಿಕಾ ಚಟುವಟಿಕೆ ಸ್ಥಗಿತಗೊಳಿಸಿ ಪ್ರತಿಭಟಿಸಲಿದ್ದೇವೆ’ ಎಂದು ಮಲ್ಪೆ ಮೀನುಗಾರರ ಸಂಘದ ಅಧ್ಯಕ್ಷ ದಯಾನಂದ ಸುವರ್ಣ ತಿಳಿಸಿದ್ದಾರೆ.

ಸಂತ್ರಸ್ತೆ ಹೇಳಿಕೆ ದಾಖಲು: ಸಂತ್ರಸ್ತ ಮಹಿಳೆಯು ನ್ಯಾಯಾಧೀಶರ ಮುಂದೆ ಶುಕ್ರವಾರ ಹೇಳಿಕೆ ನೀಡಿದ್ದಾರೆ.

ಸಾಕ್ಷ್ಯ ಅಧಿನಿಯಮ ಕಲಂ 164ರ ಅಡಿಯಲ್ಲಿ ದೂರುದಾರೆ ಹೇಳಿಕೆ ನೀಡಿದ್ದು, ನ್ಯಾಯಾಧೀಶರು ಅದನ್ನು ದಾಖಲಿಸಿಕೊಂಡಿದ್ದಾರೆ.

ಪ್ರಕರಣದಲ್ಲಿ ಇದುವರೆಗೆ ಐವರನ್ನು ಬಂಧಿಸಿದ್ದು, ತನಿಖೆ ಮುಂದುವರಿದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

‘ಇಂತಹ ಕೃತ್ಯ ಸಾಮಾನ್ಯ ಎಂಬಂತಾಗಿದೆ’

‘ಎರಡೂವರೆ ದಶಕಗಳ ಹಿಂದುತ್ವ ರಾಜಕೀಯ, ಕರಾವಳಿಯ ಸಮಾಜದಲ್ಲಿ ಯಾವ ರೀತಿಯ ನಡವಳಿಕೆಗಳನ್ನು ಜನರಲ್ಲಿ ಉಂಟು ಮಾಡಿದೆಯೋ ಅದರ ಮತ್ತೊಂದು ಅವತರಣಿಕೆ ಮಲ್ಪೆಯಲ್ಲಿ ಮಹಿಳೆಯನ್ನು ಮರಕ್ಕೆ ಕಟ್ಟಿ ಹಲ್ಲೆ ನಡೆಸಿರುವ ಪ್ರಕರಣ’ ಎಂದು ‘ಸಹಬಾಳ್ವೆ ಉಡುಪಿ’ ಜಿಲ್ಲಾ ಸಂಚಾಲಕ ಕೆ. ಫಣಿರಾಜ್ ಹೇಳಿದ್ದಾರೆ.

‘ಈ ರೀತಿಯ ಕೃತ್ಯ ಎಸಗುವುದು, ಅದರ ಬಗ್ಗೆ ನಾಚಿಕೆ ಇಲ್ಲದೆ ಹೇಳಿಕೆ ಕೊಡುವುದು ಇಲ್ಲಿ ಸಾಮಾನ್ಯವಾಗಿದೆ’ ಎಂದು ಹೇಳಿಕೆಯಲ್ಲಿ ತಿಳಿಸಿದ್ದಾರೆ.

‘ಇಲ್ಲಿ ಪೆಟ್ಟು ಕೊಟ್ಟವರೂ, ಪೆಟ್ಟು ತಿಂದವರೂ ದುರ್ಬಲರೆ. ಇಂತಹ ಕೃತ್ಯ ಎಸಗಿ ಅನಂತರ ರಾಜಿ ಪಂಚಾಯಿತಿ ಮಾಡಿಕೊಳ್ಳುತ್ತೇವೆ ಎನ್ನುವುದು ಇಡೀ ಸಂವಿಧಾನ, ಪ್ರಜಾಪ್ರಭುತ್ವವನ್ನು ಪ್ರಶ್ನಿಸಿದಂತೆ’ ಎಂದು ಹೇಳಿದ್ದಾರೆ.

ನಿರ್ದೇಶಕ ಎ.ಟಿ.ರಘು ನಿಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಿಡ್ನಿ ವೈಫಲ್ಯದಿಂದ ಬಳಲುತ್ತಿದ್ದ ‘ಮಂಡ್ಯದ ಗಂಡು’ ಸಿನಿಮಾ ಖ್ಯಾತಿಯ ನಿರ್ದೇಶಕ, ನಟ ಎ.ಟಿ.ರಘು (78) ಗುರುವಾರ ರಾತ್ರಿ ನಿಧನರಾದರು. ಅವರಿಗೆ ಪತ್ನಿ, ಇಬ್ಬರು ಮಕ್ಕಳು ಇದ್ದಾರೆ. ಶುಕ್ರವಾರ ಮಧ್ಯಾಹ್ನ ಹೆಬ್ಬಾಳದ ಚಿತಾಗಾರದಲ್ಲಿ ಅಂತ್ಯಕ್ರಿಯೆ ನಡೆಯಿತು.

ಎ.ಟಿ.ರಘು

ರಘು 35ಕ್ಕೂ ಅಧಿಕ ಸಿನಿಮಾಗಳನ್ನು ನಿರ್ದೇಶಿಸಿದ್ದು, ಈ ಪೈಕಿ 28 ಸಿನಿಮಾಗಳು ಅಂಬರೀಶ್ ಅವರದ್ದು ಎನ್ನುವುದು ವಿಶೇಷ. ಅಂಬರೀಶ್ ನಾಯಕರಾಗಿದ್ದ ‘ನ್ಯಾಯ ನೀತಿ ಧರ್ಮ’ ಸಿನಿಮಾ ಮೂಲಕ ನಿರ್ದೇಶಕರಾದರು. ಬಳಿಕ ‘ಶಂಕರ್ ಸುಂದರ್’, ‘ಪ್ರೀತಿ’, ‘ಆಶಾ’, ‘ಇನ್‌ಸ್ಪೆಕ್ಟರ್ ಕ್ರಾಂತಿಕುಮಾರ್’, ‘ಗುರು ಜಗದ್ಗುರು’, ‘ಮಿಡಿದ ಹೃದಯಗಳು’, ‘ಅಂತಿಮ ತೀರ್ಪು’, ‘ಧರ್ಮಯುದ್ಧ’ ‘ಬೇಟೆಗಾರ’ ಹೀಗೆ ಸಾಲು ಸಾಲು ಸಿನಿಮಾಗಳನ್ನು ಅಂಬರೀಶ್ ಅವರಿಗೆ ನಿರ್ದೇಶಿಸಿದರು.

ಟೈಗರ್ ಪ್ರಭಾಕರ್ ನಟಿಸಿದ ‘ಕಾಡಿನ ರಾಜ’, ‘ಅಜಯ್ ವಿಜಯ್’ ಸಿನಿಮಾಗಳನ್ನೂ ನಿರ್ದೇಶಿಸಿದ್ದರು. ಹಲವು ಸಿನಿಮಾಗಳಲ್ಲಿ ಅಭಿನಯಿಸಿದ್ದರು. ‘ಮೇರಿ ಅದಾಲತ್’ ಸಿನಿಮಾದಲ್ಲಿ ರಜನಿಕಾಂತ್ ಅವರಿಗೆ ರಘು ಆ್ಯಕ್ಷನ್ ಕಟ್ ಹೇಳಿದ್ದರು. ಅಂಬರೀಶ್ ನಟನೆಯ ‘ಮೈಸೂರು ಜಾಣ’ ಸಿನಿಮಾ ಮೂಲಕ ಅವರು ನಿರ್ಮಾಪಕರಾದರು. ‘ಮಂಡ್ಯದ ಗಂಡು’ ಸಿನಿಮಾವನ್ನು ನಿರ್ದೇಶಿಸಿ, ನಿರ್ಮಾಣ ಮಾಡಿದರು.

ಮಡಿಕೇರಿಯವರಾದ ರಘು ವಿದ್ಯಾರ್ಥಿಯಾಗಿದ್ದಾಗ ‘ಮಿಸ್ ಲೀಲಾವತಿ’ ಸಿನಿಮಾದಲ್ಲಿ ಸಣ್ಣ ಪಾತ್ರವೊಂದಕ್ಕೆ ಬಣ್ಣ ಹಚ್ಚುವುದರ ಮೂಲಕ ಚಿತ್ರರಂಗಕ್ಕೆ ಕಾಲಿಟ್ಟರು.

ರಂಗಕರ್ಮಿ ಷಡಾಕ್ಷರಪ್ಪ ನಿಧನ

ಪ್ರಜಾವಾಣಿ ವಾರ್ತೆ

ಹರಪನಹಳ್ಳಿ (ವಿಜಯನಗರ ಜಿಲ್ಲೆ): ತಾಲ್ಲೂಕಿನ ಬಾಗಳಿ ಗ್ರಾಮದ ರಂಗಕರ್ಮಿ ಎಚ್. ಷಡಾಕ್ಷರಪ್ಪ (95) ಶುಕ್ರವಾರ ನಿಧನರಾದರು. ಅವರಿಗೆ ಪತ್ನಿ, ಇಬ್ಬರು ಪುತ್ರರು ಮತ್ತು ಮೂವರು ಪುತ್ರಿಯರಿದ್ದಾರೆ.

ಎಚ್.ಷಡಾಕ್ಷರಪ್ಪ

ನಾಟಕ ಅಕಾಡೆಮಿ ಸದಸ್ಯರಾಗಿದ್ದ ಷಡಾಕ್ಷರಪ್ಪ ಅವರು ಗೋಣಿಬಸವೇಶ್ವರ ಪಾತ್ರದಿಂದ ಪ್ರಸಿದ್ಧರಾಗಿದ್ದರು. ಬಾಗಳಿಯಲ್ಲಿ ವಿಶ್ವಕಲಾ ರೈತ ನಾಟ್ಯ ಸಂಘ, ಕನಕೇಶ್ವರ ಯುವಕರ ಕಲಾ ಸಂಘ ಕಟ್ಟಿದ್ದರು. 2020ರಲ್ಲಿ ರಾಜ್ಯೋತ್ಸವ ಪ್ರಶಸ್ತಿಗೆ ಪಾತ್ರರಾಗಿದ್ದರು.

ವೇದಮೂರ್ತಿ ಕೊಟ್ರಯ್ಯ ಗವಾಯಿ ಶಿಷ್ಯರಾಗಿ, ಸಂಗೀತ ಕಲಾವಿದರಾಗಿದ್ದ ತಂದೆ ನಾಗೇಂದ್ರಪ್ಪ ಅವರ ಗರಡಿಯಲ್ಲಿ ಪಳಗಿದ್ದ ಷಡಾಕ್ಷರಪ್ಪ ಅವರು ಬಯಲಾಟ, ಪೌರಾಣಿಕ, ಸಾಮಾಜಿಕ ನಾಟಕಗಳಲ್ಲೂ ಅಭಿನಯಿಸಿದ್ದರು. ‘ಸಾವಿರಾರು ನಾಟಕಗಳ ಸರದಾರ’ ಎಂದೇ ಹೆಸರಾಗಿದ್ದರು. ಸ್ವಗ್ರಾಮದ ಸ್ಮಶಾನದಲ್ಲಿ ಶುಕ್ರವಾರ ಅಂತ್ಯಕ್ರಿಯೆ ನೆರವೇರಿತು.

ವೃದ್ಧೆ ಮೇಲೆ ಅತ್ಯಾಚಾರವೆಸಗಿ ಕೊಲೆ: ಬಂಧನ

ಕನಕಪುರ: ತಾಲ್ಲೂಕಿನ ಗ್ರಾಮವೊಂದರಲ್ಲಿ 80 ವರ್ಷದ ವೃದ್ದೆಯೊಬ್ಬರ ಮೇಲೆ ಅತ್ಯಾಚಾರ ಎಸಗಿ ಕೊಲೆ ಮಾಡಿದ ಆರೋಪದ ಮೇಲೆ ಅದೇ ಗ್ರಾಮದ ಕೃಷ್ಣಪ್ಪ (58) ಎಂಬುವರನ್ನು ಕನಕಪುರ ಗ್ರಾಮಾಂತರ ಠಾಣೆ ಪೊಲೀಸರು ಶುಕ್ರವಾರ ಬಂಧಿಸಿದ್ದಾರೆ.

ಸಂತ್ರಸ್ತೆಯ ಮನೆ ಪಕ್ಕದಲ್ಲೇ ವಾಸವಿದ್ದ ಕೃಷ್ಣಪ್ಪ, ಮನೆಗೆ ನುಗ್ಗಿ ಅತ್ಯಾಚಾರ ನಡೆಸಿದ್ದಾರೆ. ಪ್ರತಿರೋಧ ತೋರಿದ ಸಂತ್ರಸ್ತೆ ಕಿರುಚಿಕೊಂಡಿದ್ದಾರೆ. ಆಗ ಎದುರುಗಡೆ ಮನೆಯಲ್ಲಿರುವ ಸಂತ್ರಸ್ತೆ ಮೊಮ್ಮಗನ ಪತ್ನಿ ಮನೆಯೊಳಕ್ಕೆ ಬಂದಾಗ, ಆರೋಪಿ ವೃದ್ಧೆ ಮೇಲೆ ಅತ್ಯಾಚಾರ ಎಸಗುತ್ತಿದ್ದುದನ್ನು ಗಮನಿಸಿದ್ದಾರೆ.

ಅಷ್ಟು ಹೊತ್ತಿಗೆ ಸ್ಥಳಕ್ಕೆ ಬಂದ ನೆರೆಹೊರೆಯವರು ಆರೋಪಿಯನ್ನು ಹಿಡಿಯಲು ಯತ್ನಿಸಿದ್ದಾರೆ. ಆದರೆ, ಆತ ಓಡಿ ಹೋಗಿದ್ದಾರೆ. ನಿತ್ರಾಣರಾಗಿದ್ದ ವೃದ್ಧೆಯನ್ನು ಗಮನಿಸಿದಾಗ ಕೊನೆಯುಸಿರೆಳೆದಿರುವುದು ಗೊತ್ತಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಕರ್ನಾಟಕ ಸರಕಾರ GOVT OF KARNATAKA
ಜಿಲ್ಲಾಧಿಕಾರಿಗಳ ಕಾರ್ಯಾಲಯ, ಧಾರವಾಡ ಜಿಲ್ಲೆ, ಧಾರವಾಡ-580001
OFFICE OF THE DEPUTY COMMISSIONER, DHARWAD DISTRICT, DHARAWAD
Telephone No: 0836-2233851 Email-Id: ka.dharwad.dudc@gmail.com

ನಂ.ಡಿಯುಡಿಸಿ/ಟೆಂಡರ್ ಪ್ರಕಟಣೆ/2024-25 ದಿನಾಂಕ:21-03-2025

ಟೆಂಡರ ಪ್ರಕಟಣೆ (ಕೆ.ಪಿ.ಪಿ ಪೋರ್ಟಲ್ ಮುಖಾಂತರ)

ಜಿಲ್ಲಾ ನಗರಾಭಿವೃದ್ಧಿ ಕೋಶ ಧಾರವಾಡ ವ್ಯಾಪ್ತಿಯ ಪುರಸಭೆ ಅಣ್ಣಿಗೇರಿ, ನವಲಗುಂದ ಹಾಗೂ ಪಟ್ಟಣ ಪಂಚಾಯತ ಕಲಘಟಗಿ, ಕುಂದಗೋಳ, ಅಳ್ನಾವರ ವ್ಯಾಪ್ತಿಯಲ್ಲಿ ಇಂದಿರಾ ಕ್ಯಾಂಟೀನ್‌ಗಳಿಗೆ ತ್ವರಿತವಾಗಿ ತಿಂಡಿ, ಊಟ, ಆಹಾರ ಸಾಮಗ್ರಿ ಪೂರೈಕೆ ಹಾಗೂ ಸರಬರಾಜು ಮಾಡಲು ಆಸಕ್ತವುಳ್ಳ ಸರಬರಾಜುದಾರರಿಂದ ದ್ವಿ-ಲಕೋಟೆ ಪದ್ಧತಿಯಲ್ಲಿ ಈ ಕೆಳಗಿನಂತೆ ಪ್ಯಾಕೇಜ್‌ವಾರು ಟೆಂಡರ ಆಹ್ವಾನಿಸಲಾಗಿದೆ.

ಇಂಡೆಂಟ್ ನಂ. 1) DMA/2024-25/SE4986 2) DMA/2024-25/SE5016

ಕರ್ನಾಟಕ ಸರ್ಕಾರದ ಸಾರ್ವಜನಿಕ ಪಾರದರ್ಶಕತೆ ಮತ್ತು ಕಾನೂನು-1999 ಹಾಗೂ ನಿಯಮಾವಳಿ-2000 ರಂತೆ ಕರ್ನಾಟಕ ಪಬ್ಲಿಕ ಪ್ರೋಕ್ಯೂರಮೆಂಟ ಪ್ಲಾಟ್‌ಫಾರ್ಮನಲ್ಲಿ ನೊಂದಾಯಿಸಿದ ಗುತ್ತಿಗೆದಾರರು ಭಾಗವಹಿಸತಕ್ಕದ್ದು, ಬಿಡ್ ಸಲ್ಲಿಸಲು ಕೊನೆಯ ದಿನಾಂಕ:18-04-2025 ರಂದು ಸಂಜೆ 16.30 ಗಂಟೆಗೆ.

ಟೆಂಡರನಲ್ಲಿಯ ನಿಬಂಧನೆಗಳನ್ನು ಹಾಗೂ ಷರತ್ತುಗಳನ್ನು ವೀಕ್ಷಿಸುವುದು. ಟೆಂಡರ ಪ್ರೊಸೆಸಿಂಗ್ ಫೀ ಯನ್ನು ಆನ್‌ಲೈನ್‌ನಲ್ಲಿ ಪಾವತಿಸತಕ್ಕದ್ದು, ಟೆಂಡರ ದಾಖಲೆಗಳನ್ನು (https://kppp.karnataka.gov.in) ಪಡೆದು ಸಲ್ಲಿಸತಕ್ಕದ್ದು.

ಸಹಿ/- ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಧಾರವಾಡ.
ವಾ.ಸಾ.ಇ/ಧಾ/1116/ದೇಶಪಾಂಡೆಪಬ್ಲಿಸಿಟಿ/2024-25

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಆಡಳಿತ ಸುಧಾರಣೆ)
ಕೊಠಡಿ ಸಂಖ್ಯೆ: 612, 1ನೇ ಹಂತ, 6ನೇ ಮಹಡಿ, ಡಾ. ಅಂಬೇಡ್ಕರ್ ವೀಧಿ, ಬೆಂಗಳೂರು-560001. ದೂರವಾಣಿ: 080-22381075
ಇ-ಮೇಲ್: prsar-dpar@karnataka.gov.in

ಸಂಖ್ಯೆ: ಸಿಆಸುಇ/(ಆಸು)/60/ಸ್ವೀಮರ/2025 ದಿನಾಂಕ: 21.03.2025

ಅಲ್ಪಾವಧಿ ಇ-ಟೆಂಡರ್ ಅಧಿಸೂಚನೆ

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಆಡಳಿತ ಸುಧಾರಣೆ)ಗೆ ಹೊರಗುತ್ತಿಗೆ ಆಧಾರದ ಮೇಲೆ ಮಾನವ ಸಂಪನ್ಮೂಲ (ಸಿಆಸುಇ (ಆಸು)ಗೆ (02 ದತ್ತ ನಮೂದಕರು, 03 ವಾಹನ ಚಾಲಕರು ಹಾಗೂ 01 ಜವಾನ/ಕಛೇರಿ ಪರಿಚಾರಕ) ಸೇವೆಯನ್ನು ಒದಗಿಸುವ ಕುರಿತು ಇ-ಟೆಂಡರ್ ದಾಖಲೆಗಳನ್ನು ದಿನಾಂಕ: 27.03.2025 ರ ಸಂಜೆ 05.00 ಗಂಟೆಯೊಳಗೆ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಲು ಅವಕಾಶ ಕಲ್ಪಿಸಲಾಗಿದೆ.

ಟೆಂಡರ್‌ನ ಷರತ್ತು ಮತ್ತಿತರ ವಿವರಗಳನ್ನು https://kppp.karnataka.gov.in ರಲ್ಲಿ ಪಡೆಯಬಹುದಾಗಿದೆ.

ಸಹಿ/- ಸರ್ಕಾರದ ಅಧೀನ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ, (ಆಸು-ತಪಾಸಣೆ-ಸ್ವೀಮರ)
ವಾಸಾಸಂಇ/ವಾಪ್ರ/5854/ಸ್ಕ್ಯಾನ್/2024-25

ಕರ್ನಾಟಕ ಗೃಹ ಮಂಡಳಿ
3ನೇ ಮಹಡಿ, ಕಾವೇರಿ ಭವನ, ಬೆಂಗಳೂರು.

ಸಂಖ್ಯೆ: ಕಗೃಮಂ/ಕಾ/ಹಂಚಿಕೆ-06/ಪ.ಪ್ರ/2024-25 ದಿನಾಂಕ: 21.03.2024

ಕಾಲಾವಕಾಶ ವಿಸ್ತರಣೆ ಪ್ರಕಟಣೆ

ಕರ್ನಾಟಕ ಗೃಹ ಮಂಡಳಿಯು ಬೆಂಗಳೂರು ನಗರ ಚಂದಾಪುರ-ಆನೇಕಲ್ ಮುಖ್ಯರಸ್ತೆಗೆ ಹೊಂದಿಕೊಂಡಂತೆ ಸೂರ್ಯನಗರ 1ನೇ ಹಂತದಲ್ಲಿ **‘ಸೂರ್ಯ ಡಿವೈನ್’ (Surya Divine)** ವಸತಿ ಸಮುಚ್ಚಯದಲ್ಲಿ ಎಲ್ಲಾ ಸೌಲಭ್ಯಗಳನ್ನು ಹೊಂದಿರುವ 2 ಬಿಹೆಚ್‌ಕೆ ಫ್ಲಾಟ್‌ಗಳನ್ನು ನಿರ್ಮಿಸಲು ಉದ್ದೇಶಿಸಿ ಬೇಡಿಕೆ ಸಮೀಕ್ಷೆಯಡಿ ಸಾರ್ವಜನಿಕರಿಂದ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಿ ವಿವಿಧ ಪತ್ರಿಕೆಗಳಲ್ಲಿ ಸಾರ್ವಜನಿಕ ಪ್ರಕಟಣೆ ನೀಡಿದ್ದು, ಆರಂಭಿಕ ಠೇವಣಿ ಮೊತ್ತದೊಂದಿಗೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 15.03.2025ರವರೆಗೆ ವಿಸ್ತರಿಸಲಾಗಿತ್ತು. **ಸಾರ್ವಜನಿಕರ ಹಿತದೃಷ್ಟಿಯಿಂದ ಆರಂಭಿಕ ಠೇವಣಿ ಮೊತ್ತವನ್ನು ಪಾವತಿಸಲು ಕೊನೆಯ ದಿನಾಂಕವನ್ನು 30.04.2025ರವರೆಗೆ ವಿಸ್ತರಿಸಲಾಗಿರುತ್ತದೆ.** ಉಳಿದಂತೆ ದಿನಾಂಕ: 18.01.2025ರ ಪ್ರಕಟಣೆಯಲ್ಲಿ ತಿಳಿಸಿರುವ ಷರತ್ತು ಮತ್ತು ನಿಬಂಧನೆಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

ಆಸಕ್ತಿ ಇರುವ ಸಾರ್ವಜನಿಕರು ಆರಂಭಿಕ ಠೇವಣಿಯನ್ನು e-payment ಮೂಲಕ ಪಾವತಿಸಿ ಆನ್‌ಲೈನ್ ಅರ್ಜಿ (Online Application) ಸಲ್ಲಿಸಬಹುದಾಗಿದೆ.

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 30.04.2025

ಸಹಿ/- ಗೃಹ ಆಯುಕ್ತರು ಕಗೃಮಂ, ಬೆಂಗಳೂರು
DIPR/CP/YC/5856/2024-25

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ ಬಾಗಲಕೋಟೆ
ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ, ಬಾಗಲಕೋಟೆ
ಜಿಲ್ಲಾ ಆಡಳಿತ ಭವನ, ಕೊಠಡಿ ಸಂಖ್ಯೆ:126, ನವನಗರ, ಬಾಗಲಕೋಟೆ
ದೂರವಾಣಿ: 08354-235042 | ಇ-ಮೇಲ್: bgkeezpe@yahoo.com | ಫ್ಯಾಕ್ಸ್: 08354-235043

ಸಂ:ಕಾನಿಇಂ/ಪಂರಾಇಂವಿ/ಬಿಜಿಕೆ/ಪಿಬಿ-1/ಟೆಂಡರ್/2024-25/5169 ದಿನಾಂಕ: 19.03.2025

ಅಲ್ಪಾವಧಿ ಇ-ಪ್ರೋಕ್ಯೂರ್‌ಮೆಂಟ್ ದ್ವಿ-ಲಕೋಟೆ ಟೆಂಡರ್ ಪ್ರಕಟಣೆ
ಕೆ.ಡಬ್ಲ್ಯೂ-2, 3 & 4 ಬಿಡ್ ಡಾಕ್ಯೂಮೆಂಟ್

ಕರ್ನಾಟಕ ಸರಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಅಧಿಕೃತ ಅರ್ಹ ಗುತ್ತಿಗೆದಾರರಿಂದ 2023-24ನೇ ಸಾಲಿನ ಮಾನ್ಯ ಮುಖ್ಯಮಂತ್ರಿಗಳ ವಿಶೇಷ ಮಂಜೂರಾತಿ ಕಾರ್ಯಕ್ರಮ ಲೆಕ್ಕ ಶೀರ್ಷಿಕೆ: 5054 ಯೋಜನೆ ಅಡಿಯಲ್ಲಿ ಬಾಗಲಕೋಟೆ ಜಿಲ್ಲೆ ಹುನಗುಂದ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಗ್ರಾಮೀಣ ರಸ್ತೆ ಕಾಮಗಾರಿಗಳ ರೂ.12.00 ಕೋಟಿ ಯೋಜನೆಯಡಿ ಅನುದಾನದ ಅಡಿಯಲ್ಲಿ ಬಾಗಲಕೋಟೆ ಜಿಲ್ಲೆಯ ಹುನಗುಂದ ಉಪವಿಭಾಗ ವ್ಯಾಪ್ತಿಯ ಈ ಕೆಳಗಿನ ಕಾಮಗಾರಿಗೆ Standard Tender Document KW-2, 3&4 ರ ನಿಬಂಧನೆಗೊಳಪಟ್ಟಂತೆ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಆದ್ಯಾದೇಶ 1999-2000ರ ಪ್ರಕಾರ ಆ್ಯಕ್ಟ್ 2000ರ ನಿಯಮದಂತೆ ದ್ವಿ-ಲಕೋಟೆ ಪದ್ಧತಿಯನ್ವಯ ಐಟಂವಾರು ಗುತ್ತಿಗೆಯನ್ನು ಇ-ಪ್ರೋಕ್ಯೂರ್‌ಮೆಂಟ್ ಮೂಲಕ ಟರ್ನಕೀ ಆಧಾರದ ಮೇಲೆ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಸಾಮಾನ್ಯ ಗುತ್ತಿಗೆ ಕಾಮಗಾರಿಗಳ ಇಂಡೆಂಟ್ ನಂ:
RDPR/2024-25/RD/WORK_INDENT13331,
RDPR/2024-25/RD/WORK_INDENT13362,
RDPR/2024-25/RD/WORK_INDENT13363,
RDPR/2024-25/RD/WORK_INDENT13364

ಪ್ರವರ್ಗ-2 (ಎ) ವರ್ಗದ ಗುತ್ತಿಗೆಯ ಕಾಮಗಾರಿಯ ಇಂಡೆಂಟ ಸಂಖ್ಯೆ: RDPR/2024-25/RD/WORK_INDENT12321 ಪರಿಶಿಷ್ಟ ಜಾತಿ ವರ್ಗದ ಗುತ್ತಿಗೆಯ ಕಾಮಗಾರಿಯ ಇಂಡೆಂಟ್ ಸಂಖ್ಯೆ: RDPR/2024-25/RD/WORK_INDENT13589 ಇದ್ದು, ಕಾಮಗಾರಿಗಳ ವಿವರ, ಅಂದಾಜು ಮೊತ್ತ, ಗುತ್ತಿಗೆದಾರರ ಅರ್ಹತೆ ವಿವರ, ಟೆಂಡರ್ ಮೊತ್ತ (ರೂ.30.00 ದಿಂದ 200.00 ಲಕ್ಷಗಳ ಮಿತಿಗೊಳಪಟ್ಟು), ಟೆಂಡರ್ ಅರ್ಜಿಯ ಬೆಲೆ ಮತ್ತು ಇ.ಎಂ.ಡಿ ಮೊತ್ತ ಎಲ್ಲ ವಿವರಗಳು ಇ-ಪೋರ್ಟಲ್‌ನಲ್ಲಿ ಇದ್ದಂತೆ.

ಇ-ಪ್ರೋಕ್ಯೂರ್‌ಮೆಂಟ್ ಮುಖಾಂತರ ಅರ್ಜಿ ಸಲ್ಲಿಸುವ ಹಾಗೂ ಶೆಡ್ಯೂಲ್-ಬಿಯನ್ನು ವೆಬ್‌ಸೈಟ್‌ನಲ್ಲಿ ಭರ್ತಿ ಮಾಡಿ ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ: 04.04.2025 ರ ಸಾಯಂಕಾಲ 5.30 ಗಂಟೆವರೆಗೆ.

ಪ್ರೀ-ಬಿಡ್ ಮೀಟಿಂಗ್ ದಿನಾಂಕ ಮತ್ತು ಸಮಯ: 29.03.2025 ರಂದು ಮುಂಜಾನೆ 11.00 ಗಂಟೆಯ ನಂತರ.

ಇ-ಪ್ರೋಕ್ಯೂರ್‌ಮೆಂಟ್‌ನಲ್ಲಿ ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ ಮತ್ತು ಸಮಯ: 07.04.2025 ರಂದು ಮುಂಜಾನೆ 11.00 ಗಂಟೆಯ ನಂತರ.

ಸೂಚನೆ: ಹೆಚ್ಚಿನ ವಿವರಗಳಿಗಾಗಿ ಈ ಕೆಳಗೆ ಸಹಿ ಮಾಡಿದವರ ಕಛೇರಿಗೆ ಅಥವಾ ವೆಬ್‌ಸೈಟ್ https://kppp.karnataka.gov.in/ ಮುಖಾಂತರ ಸಂಪರ್ಕಿಸಬಹುದಾಗಿದೆ.

ಸಹಿ/- ಕಾರ್ಯನಿರ್ವಾಹಕ ಇಂಜಿನೀಯರರು, ಪಂಚಾಯತ ರಾಜ್ (ಇಂ)ವಿಭಾಗ, ಬಾಗಲಕೋಟೆ.
DIPR/BGK/RO-NO-584/2024-25

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ
“ಜ್ಞಾನ ಸಂಗಮ”, ಬೆಳಗಾವಿ-590018, ಕರ್ನಾಟಕ, ಭಾರತ

Ref. VTU/BGM/SAP/CW1/T-691,697/2024-25/6379 Dated: 21/03/2025

ಟೆಂಡರ ಪ್ರಕಟಣೆ

ಕುಲಸಚಿವರು, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾವಿ ಇವರಿಂದ ಕೆಳಕಂಡ ಕೆಲಸಗಳಿಗೆ (ದ್ವಿ ಲಕೋಟೆ ಪದ್ಧತಿಯಲ್ಲಿ) ಇ-ಟೆಂಡರ ಮೂಲಕ ಮೊಹರ ಬಂದ ದರಖಾಸ್ತುಗಳನ್ನು ಅರ್ಹ ತಯಾರಕರು / ಪೂರೈಕೆದಾರರಿಂದ ಆಹ್ವಾನಿಸಲಾಗಿದೆ.

ಕ್ರ. ಸಂ	ಕೆಲಸದ ಹೆಸರು	ಟೆಂಡರ್‌ಗಿಟ್ಟ ಮೊತ್ತ	ಮುಂಗಡ ಠೇವಣಿ
1	T-691: Tender for Refurbishment of Laboratories in Bosch-Rexroth Centre at VTU Mysuru - 2nd Call.	1,87,01,077/-	2,81,000/-
2	T-697: Tender for Procurement of Hardware, Audio/Video, Furniture, Fixtures, Electrical, Networking etc., for establishment of Centralized Research Facility at VTU, CDOE, Mysuru.	1,66,95,300/-	2,50,500/-

ಟೆಂಡರ್ ಪ್ರಿ ಬಿಡ್ ಮೀಟಿಂಗ್ ದಿನಾಂಕ: 25-03-2025 ರಂದು 11.00 ಗಂಟೆಗೆ ಆನ್‌ಲೈನ್ ಮೂಲಕ. ಟೆಂಡರ ಸಲ್ಲಿಸಲು ಕೊನೆಯ ದಿನಾಂಕ: 04-04-2025 ರ 2.30 ರ ವರೆಗೆ. ಟೆಂಡರ ತೆರೆಯುವ ದಿನಾಂಕ: 05-04-2025 ರ 4.00 ಗಂಟೆಗೆ. ಹೆಚ್ಚಿನ ಮಾಹಿತಿಗಾಗಿ www.vtu.ac.in ಮತ್ತು www.kppp.karnataka.gov.in ನೋಡಬಹುದು.

ಡಿಐಪಿಆರ್/ಬೆಳಗಾವಿ/1992/ಅಡ್ವರ್ಟೋರ್/2024-25 ಸಹಿ/- ಕುಲಸಚಿವರು, ವಿತಾವಿ, ಬೆಳಗಾವಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಛೇರಿ, ಸರ್ವಜ್ಞನಗರ ವಿಭಾಗ, 7ನೇ ಮಹಡಿ, ಪಿ.ಯು. ಬಿಲ್ಡಿಂಗ್, ಎಂ.ಜಿ. ರಸ್ತೆ, ಬೆಂಗಳೂರು – 560001.

ಸಂಖ್ಯೆ: ಕಾ.ಅ.(ಎಸ್‌ಜಿಎನ್)/ಕೆಪಿಪಿಪಿ/ಟೆಂಡರ್/20/2024-25 ದಿನಾಂಕ: 20-03-2025

ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)
(ದ್ವಿ-ಲಕೋಟೆ ಪದ್ಧತಿ) (ಜಿಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು (ಸರ್ವಜ್ಞನಗರ ವಿಭಾಗ), ಪೂರ್ವ ವಲಯ, ಬಿಬಿಎಂಪಿ ಬೆಂಗಳೂರು ಇವರು ಬಿಬಿಎಂಪಿ / ಕೆಪಿಡಬ್ಲ್ಯೂಡಿ / ಸಿಪಿಡಬ್ಲ್ಯೂಡಿ / ರೈಲ್ವೇಸ್ / ಎಂಇಎಸ್ / ರಾಷ್ಟ್ರೀಯ ಹೆದ್ದಾರಿ ಅಥವಾ ಯಾವುದೇ ರಾಜ್ಯ ಸರ್ಕಾರದ ಸಂಸ್ಥೆಗಳಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಈ ಕೆಳಕಂಡ ನಿರ್ಮಾಣ ಕಾಮಗಾರಿಗಾಗಿ ಟೆಂಡರ್‌ನ್ನು ಆಹ್ವಾನಿಸಿದ್ದಾರೆ. (ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ – ಕೆಡಬ್ಲ್ಯೂ4)

ಕ್ರ. ಸಂ.	ಕಾಮಗಾರಿಯ ಹೆಸರು
1	ಸರ್ವಜ್ಞನಗರ ವಿಧಾನಸಭಾ ಮತಕ್ಷೇತ್ರದಲ್ಲಿ ಕೆಲಸಗಳ ಸಮಗ್ರ ಅಭಿವೃದ್ಧಿಯ ಕಾಮಗಾರಿ. **ಕಾಮಗಾರಿ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 300.00, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 4,50,000/- (ರೂ. 1.00 ಲಕ್ಷ ಇ-ಪಾವತಿ ಮೂಲಕ ಬಾಕಿ ರೂ. 3,50,000/- ಬಿಜಿ / ಎಫ್‌ಡಿಆರ್ ಮೂಲಕ ತಾಂತ್ರಿಕ ಬಿಡ್ ತೆರೆಯುವ ಮೊದಲು ಸಲ್ಲಿಸಬೇಕು.)**

ಟೆಂಡರ್ ವೇಳಾಪಟ್ಟಿ: 1) ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಜಿಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: https://kppp.karnataka.gov.in ನಲ್ಲಿ ದಿನಾಂಕ: 15-04-2025 ರ ಸಂಜೆ 4.00 ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ಬಿಡ್ ಪೂರ್ವಭಾವಿ ಸಭೆ ದಿನಾಂಕ: 21-04-2025 ರಂದು ಸಂಜೆ 4.00 ಗಂಟೆಗೆ ಕಾರ್ಯಪಾಲಕ ಅಭಿಯಂತರರ ಕಛೇರಿ, ಸರ್ವಜ್ಞನಗರ ವಿಭಾಗ, 7ನೇ ಮಹಡಿ, ಪಬ್ಲಿಕ್ ಯುಟಿಲಿಟಿ ಬಿಲ್ಡಿಂಗ್, ಎಂ.ಜಿ. ರಸ್ತೆ, ಬಿಬಿಎಂಪಿ ಇಲ್ಲಿ ನಡೆಯುವುದು. 3) ಭರ್ತಿ ಮಾಡಿದ ಟೆಂಡರ್ ಡಾಕ್ಯೂಮೆಂಟ್‌ನ್ನು ಸಲ್ಲಿಸುವ ಕೊನೆಯ ದಿನಾಂಕ: 28-04-2025 ರಂದು ಸಂಜೆ 4.00 ಗಂಟೆವರೆಗೆ. 4) ತಾಂತ್ರಿಕ ಬಿಡ್ ಟೆಂಡರ್‌ನ್ನು ತೆರೆಯುವ ದಿನಾಂಕ: 29-04-2025 ರಂದು ಸಂಜೆ 4.30 ಗಂಟೆಗೆ ಸಾಧ್ಯವಾದಲ್ಲಿ ಅಥವಾ ಮುಂದಿನ ಕೆಲಸದ ದಿನದಂದು. ಹೆಚ್ಚಿನ ಮಾಹಿತಿಗಾಗಿ ಮೇಲ್ಕಂಡ ಕಛೇರಿಯನ್ನು ಸಂಪರ್ಕಿಸಬಹುದು.

ಸಹಿ/- ಕಾರ್ಯಪಾಲಕ ಅಭಿಯಂತರರು, ಸರ್ವಜ್ಞನಗರ ವಿಭಾಗ, ಬಿಬಿಎಂಪಿ.

ಕರ್ನಾಟಕ ಸರಕಾರ
ಪುರಸಭೆ ಕಾರ್ಯಾಲಯ ಲಕ್ಷ್ಮೇಶ್ವರ
ತಾ: ಲಕ್ಷ್ಮೇಶ್ವರ ಜಿ: ಗದಗ
e-mail: itstaff_ulb_laxmeshwar@yahoo.co.in
Phone:08487-272916,272334 Fax no:08487-272916
Website: www.lakshmishwartown.mrc.gov.in

ಕಂ/ಪುಸಲ/ತಾಂ.ವಿ/ಇ-ಟೆಂಡರ್/ವಹಿ/2024-25 ದಿ: 20-03-2025

ಅಲ್ಪಾವಧಿ ಟೆಂಡರ ಪ್ರಕಟಣೆ (ಇ-ಪ್ರೋಕ್ಯೂರಮೆಂಟ್ ಮೂಲಕ)

ಲಕ್ಷ್ಮೇಶ್ವರ ಪುರಸಭೆ ವ್ಯಾಪ್ತಿಯಲ್ಲಿ ಬರುವ ಸನ್ 2024-25 ನೇ ಸಾಲಿನ ಕುಡಿಯುವ ನೀರಿನ ಸಮಸ್ಯೆ ಪರಿಹರಿಸುವ ಎಸ್. ಎಫ್. ಸಿ. ಅನುದಾನದಲ್ಲಿ ವಾರ್ಡ ನಂ.17ರಲ್ಲಿ ಗುಡಗೇರಿ ಟೀಚರ ಮನೆ ಹತ್ತಿರ ಹಾಗೂ ಬಂಡೆಮ್ಮ ಗುಡಿ ಹತ್ತಿರ ಈಗಾಗಲೇ ಹೊಸದಾಗಿ ಕೊರೆಯಿಸಿದ ಕೊಳವೆ ಬಾವಿಗೆ 5 ಹೆಚ್. ಪಿ. ಪಂಪ್ ಮತ್ತು ಮೋಟಾರ ಅಳವಡಿಸಿ ನೀರು ಸರಬರಾಜು ಮಾಡುವುದು ಹಾಗೂ ಎಸ್ ಬಿ ಎಮ್ 2.0 ಅನುದಾನದಲ್ಲಿ (Translocation of RDF From Laxmeshwara SWM Site to Cement Factory Call-4) ಒಟ್ಟು 2 ಕಾಮಗಾರಿ ಅಂದಾಜು ಮೊತ್ತ ರೂ 27.46 ಲಕ್ಷಗಳಿಗೆ ಕೆ.ಟಿ.ಟಿ.ಪಿ ಕಾಯ್ದೆ ಅಧಿನಿಯಮ 2000 ರನ್ವಯ ಈ ಕೆಳಗಿನಂತೆ ಇಂಡಂಟ್‌ಗಳಲ್ಲಿ ಇ ಟೆಂಡರಗಳನ್ನು ಆಹ್ವಾನಿಸಿದ್ದು ಅರ್ಹ ಬಿಡ್‌ದಾರರು ಟೆಂಡರನ್ನು ಇ-ಪ್ರೋಕ್ಯೂರಮೆಂಟ್ ಪೋರ್ಟಲ್ https://kppp.karnataka.gov.in ಠೇವಣಿ (ಇಎಂಡಿ) ಮತ್ತು ಟೆಂಡರ ಫೀಯನ್ನು ಇ-ಪ್ರೋಕ್ಯೂರಮೆಂಟ್ ಪೋರ್ಟಲ್‌ನಲ್ಲಿ ಸೂಚಿಸಿದಂತೆ ಪಾವತಿಸಿ ಭಾಗವಹಿಸಬಹುದಾಗಿದೆ. ಟೆಂಡರ ಸಲ್ಲಿಸುವ ಕೊನೆಯ ದಿನಾಂಕ: 29-03-2025 ರ ಸಂಜೆ 4.00 ಗಂಟೆಯವರೆಗೆ ಟೆಂಡರ ದಿನಾಂಕಗಳನ್ನು ನಿಗಧಿಪಡಿಸಲಾಗಿದೆ ಹಾಗೂ ಟೆಂಡರಗೆ ಸಂಬಂಧಿಸಿದ ಯಾವುದೆ ಬದಲಾವಣೆಗಳು ಅಥವಾ ತಿದ್ದುಪಡಿಗಳನ್ನು E-portal ನಲ್ಲಿ ಪ್ರಕಟಿಸಲಾಗುವುದು.

ಅ ನಂ	ಕಾಮಗಾರಿಯ ಇಂಡಂಟ್ ವಿವರ	ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)
1	DMA/2024-25/WS/WORK_INDENT37440	1.50
2	DMA/2024-25/SE3761/CALL-4	25.96

ಸಹಿ/- (ಶ್ರೀಮಹೇಶ ಎಸ್ ಹಡಪದ) ಮುಖ್ಯಾಧಿಕಾರಿಗಳು ಪುರಸಭೆ ಲಕ್ಷ್ಮೇಶ್ವರ
ಸಹಿ/- (ಶ್ರೀಮತಿ ಯಲ್ಲವ್ವ ಗಂ ದುರಗಣ್ಣವರ) ಅಧ್ಯಕ್ಷರು ಪುರಸಭೆ ಲಕ್ಷ್ಮೇಶ್ವರ
ವಾ.ಸಾ.ಇ/ಗದಗ/717/ದೇಶಪಾಂಡೆಪಬ್ಲಿಸಿಟಿ/2024-25

ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ, ಲೋಕೋಪಯೋಗಿ ಇಲಾಖೆ, ತುಮಕೂರು.
ಕ್ರ.ಸಂ:ಕಾಇಂ:ಲೋಇವಿ:ತುವಃ:ಕಿಇಂ-3:ಟೆಂಡರ್51/2024-25 ದಿನಾಂಕ : 19.03.2025

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂ.51/2024-25
ದಿನಾಂಕ: 19.03.2025

ಈ ಕಚೇರಿ ಟೆಂಡರ್ ಪ್ರಕಟಣೆ ಸಂಖ್ಯೆ: 51/2024-25:ದಿನಾಂಕ 19-03-2025 ರಂದು ತುಮಕೂರು ವಿಭಾಗದ ವ್ಯಾಪ್ತಿಯಲ್ಲಿ ಲೆಕ್ಕ ಶೀರ್ಷಿಕೆ 5054-ಜಿಲ್ಲಾ ಮತ್ತು ಇತರೆ ರಸ್ತೆಗಳ ಸುಧಾರಣೆ ಯೋಜನೆ ಹಾಗೂ ರಾಜ್ಯ ಹೆದ್ದಾರಿ ರಸ್ತೆ ಕಾಮಗಾರಿಗಳು ಸುಧಾರಣೆ ಯೋಜನೆ ಅಡಿಯಲ್ಲಿ 02 ಕಾಮಗಾರಿಗೆ KPPP-Portal ಮೂಲಕ ಟೆಂಡರ್ ಆಹ್ವಾನಿಸಲಾಗಿರುತ್ತದೆ. ಟೆಂಡರಿಗಿಟ್ಟ ಗರಿಷ್ಠ ಮೊತ್ತ ರೂ.219.47 ಲಕ್ಷಗಳು, ಟೆಂಡರಿಗಿಟ್ಟ ಕನಿಷ್ಠ ಮೊತ್ತ ರೂ: 159.78 ಲಕ್ಷಗಳು ಇ.ಎಂ.ಡಿ ಗರಿಷ್ಠ ಮೊತ್ತ ರೂ.3,29,211/-, ಇ.ಎಂ.ಡಿ ಕನಿಷ್ಠ ಮೊತ್ತ ರೂ.2,39,673/- ಅರ್ಹ ಗುತ್ತಿಗೆದಾರರು 2ನೇ ದರ್ಜೆ ಹಾಗೂ 3ನೇ ದರ್ಜೆ ಮೇಲ್ಪಟ್ಟು, ಕಾಲಾವಧಿ: 6 ತಿಂಗಳುಗಳು ಸಂಬಂಧಿಸಿದ ವಿಚಾರಣೆ ಮತ್ತು ಸ್ಪಷ್ಟೀಕರಣಗಳಿಗೆ ಕೊನೆ ದಿನಾಂಕ ಮತ್ತು ವೇಳೆ: 27-03-2025 ರ 17-00 ಗಂಟೆಗೆ, KPPP-Portal ಮೂಲಕ ಟೆಂಡರ್‌ಅನ್ನು ದಿನಾಂಕ 20-03-2025 ರಿಂದ 28-03-2025 ರ 16.00 ಗಂಟೆವರೆಗೆ ಪಡೆಯಬಹುದಾಗಿದೆ. ಟೆಂಡರ್‌ಅನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ವೇಳೆ: 28-03-2025 ರ 16-00 ಗಂಟೆವರೆಗೆ, ತಾಂತ್ರಿಕ ಬಿಡ್‌ಅನ್ನು ತೆರೆಯುವ ದಿನಾಂಕ ಮತ್ತು ವೇಳೆ: 29-03-2025 ರ 16-30 ಗಂಟೆಗೆ, ಆರ್ಥಿಕ ಬಿಡ್‌ಅನ್ನು ತೆರೆಯುವ ದಿನಾಂಕ ಮತ್ತು ವೇಳೆ: 01-04-2025 ರ 17-00 ಗಂಟೆಗೆ, ಹೆಚ್ಚಿನ ವಿವರಗಳನ್ನು ಸದರಿ ಕಚೇರಿಯಿಂದ ಕಚೇರಿ ವೇಳೆಯಲ್ಲಿ ಪಡೆಯಬಹುದಾಗಿದೆ ಹಾಗೂ ವೆಬ್‌ಸೈಟ್ ಸಂ:https://kppp.karnataka.gov.in ರಲ್ಲಿ ಪಡೆಯಬಹುದಾಗಿದೆ.

ಸೂಚನೆ: ಆರ್ಥಿಕ ವಹಿವಾಟಿನ ಪತ್ರದಲ್ಲಿ ಯು.ಡಿ.ಐ ಸಂಖ್ಯೆಯನ್ನು ನಮೂದಿಸಿಲ್ಲದಿರುವ ಆರ್ಥಿಕ ವಹಿವಾಟನ್ನು ಪರಿಗಣಿಸುವುದಿಲ್ಲ.

ಸಹಿ/-ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ ವಿಭಾಗ, ತುಮಕೂರು.
DIPR/TUM/719/KSMCA/2024-25

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ
ಜಲಭವನ, ನಂ. 6, 1ನೇ ಘಟ್ಟ, 1ನೇ ಹಂತ, ಬಿಟಿಎಂ ಲೇಔಟ್, ಬನ್ನೇರುಘಟ್ಟ ಮುಖ್ಯ ರಸ್ತೆ, ಬೆಂಗಳೂರು – 560 029. ದೂ: 080-41106504 – 18
ಇ-ಮೇಲ್: cekwbbng@gmail.com ವೆಬ್‌ಸೈಟ್: https://kppp.karnataka.gov.in

ಟೆಂಡರ್ ಪ್ರಕಟಣೆ
(KPPP ಮೂಲಕ ಮಾತ್ರ)

ಸಂಖ್ಯೆ: KWB/TEC/CE(B)/GUBBI OHT/1338/2024-25 Dtd: 20/3/2025

ಕಾಮಗಾರಿಯ ಹೆಸರು : ಗುಬ್ಬಿ ಪಟ್ಟಣ ಪಂಚಾಯಿತಿಯ ಠೇವಣಿ ಕೊಡುಗೆ ಆಧಾರದಡಿ ಗುಬ್ಬಿ ಪಟ್ಟಣದ ಸರ್ಕಾರಿ ಆಸ್ಪತ್ರೆ ಮುಂಬಾಗ ಒಂದು ಸಂ. 5 ಲಲೀ. ಸಾಮರ್ಥ್ಯದ ಮೇಲ್ಮಟ್ಟದ ಜಲಸಂಗ್ರಹಾಗಾರ ನಿರ್ಮಾಣ ಮತ್ತು ಇತರೆ ಸಂಬಂಧಿತ ಕಾಮಗಾರಿ.

KUWSDB/2024-25/WS/WORK_INDENT 328

ಹೆಚ್ಚಿನ ವಿವರಗಳಿಗೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್ https://kppp.karnataka.gov.in ನಲ್ಲಿ ಸಂಪರ್ಕಿಸಬಹುದು.

ಸಹಿ/- ಮುಖ್ಯ ಅಭಿಯಂತರರು (ಬೆಂ), ಕನನೀಸ ಮತ್ತು ಒಚ ಮಂಡಳಿ, ಬೆಂಗಳೂರು
ವಾ.ಸಾ.ಸಂ.ಇ/5837/ಅಕಾರ್/2024-25

ಕರ್ನಾಟಕ ಗೃಹ ಮಂಡಳಿ
3ನೇ ಮಹಡಿ, ಕಾವೇರಿ ಭವನ, ಬೆಂಗಳೂರು.

ಸಂಖ್ಯೆ: ಕಗೃಮಂ/ಕಾ/ಹಂಚಿಕೆ-06/ಪ.ಪ್ರ/2024-25 ದಿನಾಂಕ: 21.03.2024

ಕಾಲಾವಕಾಶ ವಿಸ್ತರಣೆ ಪ್ರಕಟಣೆ

ಕರ್ನಾಟಕ ಗೃಹ ಮಂಡಳಿಯು ಬೆಂಗಳೂರು ನಗರ ಚಂದಾಪುರ-ಆನೇಕಲ್ ಮುಖ್ಯರಸ್ತೆಗೆ ಹೊಂದಿಕೊಂಡಂತೆ ಸೂರ್ಯನಗರ 1ನೇ ಹಂತದಲ್ಲಿ **‘ಸೂರ್ಯ ಶೈನ್’ (Surya Shine)** ವಸತಿ ಸಮುಚ್ಚಯದಲ್ಲಿ ಎಲ್ಲಾ ಸೌಲಭ್ಯಗಳನ್ನು ಹೊಂದಿರುವ 3 ಬಿಹೆಚ್‌ಕೆ ಫ್ಲಾಟ್‌ಗಳನ್ನು ನಿರ್ಮಿಸಲು ಉದ್ದೇಶಿಸಿ ಬೇಡಿಕೆ ಸಮೀಕ್ಷೆಯಡಿ ಸಾರ್ವಜನಿಕರಿಂದ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಿ ವಿವಿಧ ಪತ್ರಿಕೆಗಳಲ್ಲಿ ಸಾರ್ವಜನಿಕ ಪ್ರಕಟಣೆ ನೀಡಿದ್ದು, ಆರಂಭಿಕ ಠೇವಣಿ ಮೊತ್ತದೊಂದಿಗೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 30.01.2025ರವರೆಗೆ ವಿಸ್ತರಿಸಲಾಗಿತ್ತು. **ಸಾರ್ವಜನಿಕರ ಹಿತದೃಷ್ಟಿಯಿಂದ ಆರಂಭಿಕ ಠೇವಣಿ ಮೊತ್ತವನ್ನು ಪಾವತಿಸಲು ಕೊನೆಯ ದಿನಾಂಕವನ್ನು 30.04.2025ರವರೆಗೆ ವಿಸ್ತರಿಸಲಾಗಿರುತ್ತದೆ.** ಉಳಿದಂತೆ ದಿನಾಂಕ: 05.10.2024ರ ಪ್ರಕಟಣೆಯಲ್ಲಿ ತಿಳಿಸಿರುವ ಷರತ್ತು ಮತ್ತು ನಿಬಂಧನೆಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

ಆಸಕ್ತಿ ಇರುವ ಸಾರ್ವಜನಿಕರು ಆರಂಭಿಕ ಠೇವಣಿಯನ್ನು e-payment ಮೂಲಕ ಪಾವತಿಸಿ ಆನ್‌ಲೈನ್ ಅರ್ಜಿ (Online Application) ಸಲ್ಲಿಸಬಹುದಾಗಿದೆ.

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 30.04.2025

ಸಹಿ/- ಗೃಹ ಆಯುಕ್ತರು ಕಗೃಮಂ, ಬೆಂಗಳೂರು
DIPR/CP/YC/5860/2024-25

ಕರ್ನಾಟಕ ಸರ್ಕಾರ
ನಗರಸಭೆ ಕಾರ್ಯಾಲಯ, ಯಾದಗಿರಿ
ಜಿ: ಯಾದಗಿರಿ. ಕರ್ನಾಟಕ ರಾಜ್ಯ., ದೂರವಾಣಿ: 08443 256300
E-mail: itstaff_ulb_yadgiri@yahoo.com, Website: www.yadgir@yahoo.com

ಸಂ: ಸಸಯಾ:ತಾಂತ್ರಿಕ ಶಾಖೆ:ಇ-ಟೆಂಡರ:2024-25 ದಿನಾಂಕ::20-03-2025.

-: ಇ-ಪ್ರಕ್ಯೂರಮೆಂಟ್ ಅಲ್ಪಾವಧಿ ಟೆಂಡರ ಪ್ರಕಟಣೆ :-
-: ದ್ವೀ-ಲಕೋಟೆ ಪದ್ಧತಿ-2ನೇ ಕರೆ :-

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಯಾದಗಿರಿ ಜಿಲ್ಲೆಯ ಯಾದಗಿರಿ ನಗರಸಭೆಯ ಪೌರಾಯುಕ್ತರು ಇವರು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ಹಾಗೂ ನಿಯಮಗಳು 2000ರ ಇ-ಪ್ರಕ್ಯೂರಮೆಂಟ್ ಪದ್ಧತಿಯಲ್ಲಿ 2024-25ನೇ ಸಾಲಿನ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ ಮ್ಯಾಕ್ರೊ ಅನುದಾನದಡಿಯಲ್ಲಿ ತೆಗೆದುಕೊಂಡಿರುವ ಕಾಮಗಾರಿಗಳ ಇಂಡೆಂಟ್ ನಂಬರ DMA/2024-25/RD/WORK INDENT32431 ಇ-ಪ್ರಕ್ಯೂರಮೆಂಟ್ ಪೋರ್ಟಲನಲ್ಲಿ ಟೆಂಡರ ಕರೆಯಲಾಗಿದ್ದು, ಇ-ಪ್ರಕ್ಯೂರಮೆಂಟ್ ಪೋರ್ಟಲನಲ್ಲಿ ನೋಂದಾಯಿಸಲ್ಪಟ್ಟ ಲೋಕೋಪಯೋಗಿ ಇಲಾಖೆಯ ಅರ್ಹ ಸಿವಿಲ್ ಗುತ್ತಿಗೆದಾರರಿಂದ ಕೆ.ಡಬ್ಲ್ಯೂ-4 ರ Standard Tender Documentಗಳ ಅಡಿಯಲ್ಲಿ ಇ-ಟೆಂಡರನ್ನು ಆಹ್ವಾನಿಸಲಾಗಿದೆ. ಇ-ಪ್ರಕ್ಯೂರಮೆಂಟ್‌ನಲ್ಲಿ http://eproc.karnataka.gov.in ರ ಮೂಲಕ ಕೆಳಗೆ ನಮೂದಿಸಿರುವ ದಿನಾಂಕದಂದು ಆನ್ ಲೈನ್ ಮೂಲಕ ಟೆಂಡರಗಳನ್ನು ಸಲ್ಲಿಸತಕ್ಕದ್ದು, ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯ ವೆಬ್ ಸೈಟ್ www.yadgircity.mrc.gov.in ರಲ್ಲಿ ನೋಡಬಹುದು ಹಾಗೂ ತಾಂತ್ರಿಕ ಅಧಿಕಾರಿಗಳನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು.

1) ಟೆಂಡರಗಳನ್ನು ಸಲ್ಲಿಸಲು ಪ್ರಾರಂಭ ದಿನಾಂಕ :21-03-2025 ರಂದು 11.00 ಗಂಟೆಯಿಂದ 2) ಟೆಂಡರಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 28-03-2025 ರಂದು ಸಾಯಂಕಾಲ 5.30ರ ವರೆಗೆ. 3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 01-04-2025 4) ಆರ್ಥಿಕ ಬಿಡ್ ತೆರೆಯುವ ದಿನಾಂಕ: 09-04-2025.

ಸಹಿ/- ಪೌರಾಯುಕ್ತರು ನಗರಸಭೆ ಯಾದಗಿರಿ
ವಾ.ಸಾ.ಸಂ.ಇ/ಯಾದಗಿರಿ/594/ಕೆ.ಎಸ್.ಎಂ.ಸಿ&ಎ/2024-25

ಕೆ.ಎಂ.ಎಫ್ ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾಮಂಡಳ ನಿಯಮಿತ
ಕಹಾಮ ಸಂಕೀರ್ಣ, ಡಾ: ಎಮ್.ಹೆಚ್. ಮರೀಗೌಡ ರಸ್ತೆ, ಬೆಂಗಳೂರು – 560 029
ಫೋನ್: 080-26096839 / 26096855 ಇಮೇಲ್: purchase@kmf.coop

ಸಂಖ್ಯೆ: KMF/PUR/CFRM-633A/2024-25 ದಿನಾಂಕ: 20-03-2025

ಅಲ್ಪಾವಧಿ ಟೆಂಡರ್ ಪ್ರಕಟಣೆ (KPPP Tender No. KMF/2024-25/IND1320)

ಕರ್ನಾಟಕ ಹಾಲು ಮಹಾಮಂಡಳವು, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಘಟಕವಾರು ವಿವಿಧ ಪಶು ಆಹಾರ ಕಚ್ಚಾಮಾಲುಗಳನ್ನು ಖರೀದಿಸುವ ಸಂಬಂಧ ಟೆಂಡರ್ ಆಹ್ವಾನಿಸಿದ್ದು, ಆಸಕ್ತಿಯುಳ್ಳ ಟೆಂಡರ್‌ದಾರರು ಭಾಗವಹಿಸಬಹುದಾಗಿದೆ. ಟೆಂಡರ್ ದಾಸ್ತಾವೇಜುಗಳನ್ನು ಹಾಗೂ ಐಟಂವಾರು ಇ.ಎಂ.ಡಿ ವಿವರಗಳನ್ನು KPP Portal https://kppp.karnataka.gov.in ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಸದರಿ ಟೆಂಡರ್‌ಗೆ ಸಂಬಂಧಿಸಿದ ತಿದ್ದುಪಡಿ/ ಟಿಪ್ಪಣಿಗಳೇನಾದರು ಇದ್ದಲ್ಲಿ ಕೆಪಿಪಿ ಪೋರ್ಟಲ್‌ನಲ್ಲಿಯೇ ಪ್ರಕಟಿಸಲಾಗುವುದು.

ಕ್ರ. ಸಂ.	ಕಚ್ಚಾಮಾಲುಗಳು	ಘಟಕವಾರು ಪರಿಮಾಣ ಮೆಟ್ರಿಕ್ ಟನ್‌ಗಳಲ್ಲಿ (MTs)				
		ರಾಜಾನುಕುಂಟೆ	ಗುಬ್ಬಿ	ಧಾರವಾಡ	ಹಾಸನ	ಶಿಕಾರಿಪುರ
1	ಡಿ.ಒ.ಆರ್.ಬಿ	2500	4700	0	3000	2500
2	ಅಕ್ಕಿತೌಡು	500	1100	300	1000	300
3	ಎಣ್ಣೆರಹಿತ ಹತ್ತಿ ಬೀಜದ ಹಿಂಡಿ (ಫ್ಲೇಕ್ಸ್)	0	100	50	300	0
4	ಎಣ್ಣೆರಹಿತ ಸಾಸಿವೆ ಹಿಂಡಿ	250	500	50	1500	0
5	ಮೆಕ್ಕೆಜೋಳದ ಗ್ಲೂಟೇನ್ ಫೀಡ್	0	175	0	200	0
6	ಸಾಮಾನ್ಯ ಉಪ್ಪು	100	300	100	300	150
7	ಸುಣ್ಣದ ಪುಡಿ	250	200	0	300	0
8	ಕ್ಯಾಲ್ಸಿಯಂ ಕಾರ್ಬೋನೇಟ್	0	250	200	0	0
9	ಮೈಜ್ ಡಿ.ಡಿ.ಜಿ.ಎಸ್	0	0	75	150	0
10	ಎಣ್ಣೆರಹಿತ ಮೈಜ್ ಡಿ.ಡಿ.ಜಿ.ಎಸ್	0	0	125	200	0
11	ಎಣ್ಣೆರಹಿತ ಸೂರ್ಯಕಾಂತಿ ಹಿಂಡಿ ಗ್ರೇಡ್-1 (ಪೆಲೆಟ್ಸ್)	0	150	0	200	150
12	ಎಣ್ಣೆರಹಿತ ಶೇಂಗಾ ಹಿಂಡಿ	0	200	0	100	150

ಟೆಂಡರ್ ವೇಳಾಪಟ್ಟಿ: ಟೆಂಡರ್ ಪ್ರಾರಂಭವಾಗುವ ದಿನಾಂಕ: 20-03-2025; ಪೂರ್ವಭಾವಿ ಸಭೆಯ ದಿನಾಂಕ: 24-03-2025 at 11.30AM; ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 27-03-2025 at 04:30 PM; ತಾಂತ್ರಿಕ ಟೆಂಡರ್ ತೆರೆಯುವ ದಿನಾಂಕ: 28-03-2025 at 04.45 PM; ವಾಣಿಜ್ಯ ಟೆಂಡರ್ ತೆರೆಯುವ ದಿನಾಂಕ: 28-03-2025 at 05.00 PM.

ಕರ್ನಾಟಕ ಸಹಕಾರ ಹಾಲು ಮಹಾಮಂಡಳ ಪರವಾಗಿ ಸಹಿ/- ನಿರ್ದೇಶಕರು (ಖರೀದಿ)

‘ಅರಿವೊಂದೇ ಬಿಡುಗಡೆಯ ದಾರಿ’

ಬೆಂಗಳೂರಿನಲ್ಲಿ ಇಂದು–ನಾಳೆ ನಡೆಯಲಿರುವ ಎಂಟನೆಯ ಅಖಿಲ ಕರ್ನಾಟಕ ಲೇಖಕಿಯರ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ವಹಿಸಲಿರುವ **ಎಚ್.ಎಸ್. ಶ್ರೀಮತಿ** ಅವರೊಂದಿಗೆ ನಡೆಸಿದ ಮಾತುಕತೆ ಇಲ್ಲಿದೆ. ಸ್ತ್ರೀವಾದ, ಪ್ರಚಲಿತ ಸಾಹಿತ್ಯ ಹಾಗೂ ಸಮಾನತೆಯ ಮುಂದಿರುವ ಹಾದಿ ಕುರಿತು ಅವರು ಮುಕ್ತವಾಗಿ ಮಾತನಾಡಿದ್ದಾರೆ...

ಪ್ರಜಾವಾಣಿ ಸಂದರ್ಶನ

ಎಚ್.ಎಸ್. ಶ್ರೀಮತಿ

● ಮಂಜುಶ್ರೀ ಎಂ. ಕಡಕೋಳ

ಚಿತ್ರ: ಪಿ.ಎಸ್.ಕೃಷ್ಣಕುಮಾರ್

● **ಕನ್ನಡದಲ್ಲಿ ಸ್ತ್ರೀವಾದದ ತಾತ್ವಿಕ ಚೌಕಟ್ಟನ್ನು ರೂಪಿಸಬೇಕು ಅಂತ ಅನಿಸಿದ್ದೇಕೆ?**

ಸ್ತ್ರೀವಾದಕ್ಕೆ ನಾನು ಪ್ರವೇಶ ಪಡೆದದ್ದೇ ಆಕಸ್ಮಿಕವಾಗಿ, ಅದೂ ನನ್ನ 50ನೇ ವಯಸ್ಸಿನ ನಂತರ. ಹಂಪಿ ಕನ್ನಡ ವಿ.ವಿಯ ಮಹಿಳಾ ಅಧ್ಯಯನದ ಮುಖ್ಯಸ್ಥೆಯಾದ ಮೇಲೆ ಪಠ್ಯ ರೂಪಿಸುವಾಗ ಸ್ತ್ರೀವಾದದ ತಾತ್ವಿಕ ಚೌಕಟ್ಟು ಕಟ್ಟಿಕೊಡುವ ಅವಕಾಶ ಒದಗಿಬಂತು. ಇದು ನನ್ನ ಆಸಕ್ತಿಯೂ ಆಗಿತ್ತು. ಆದರೆ, ಇದನ್ನು ರೂಪಿಸುವಾಗ ಸಮುದ್ರದಲ್ಲಿ ಒಂದು ಬೊಗಸೆಯಷ್ಟನ್ನೂ ನನ್ನ ಕೈಲಿ ಹಿಡಿದುಕೊಳ್ಳಲಾಗಿಲ್ಲ ಎಂಬುದು ವಾಸ್ತವ.

● **ಅನೇಕ ಪಾಶ್ಚಾತ್ಯ ಸ್ತ್ರೀವಾದಿಗಳ ಚಿಂತನೆಗಳನ್ನು ಕನ್ನಡಕ್ಕೆ ಅನುವಾದಿಸಿದ್ದೀರಿ. ಕನ್ನಡ ಸಾಹಿತ್ಯದಲ್ಲೇ ಮೂಲವಾಗಿ ಇಂಥ ಚಿಂತನೆಗಳನ್ನು ರೂಪಿಸಬಹುದಿತ್ತಲ್ಲ?**

ಕನ್ನಡ ಸಾಹಿತ್ಯದಲ್ಲಿ ಸ್ತ್ರೀವಾದಿ ವಿಮರ್ಶೆಯಾಚೆಗೆ ಫೆಮಿನಿಸಂ ಹೆಚ್ಚು ಚಿಂತನೆ ಮಾಡಿದ್ದು ಕಾಣಲಿಲ್ಲ. ಸ್ತ್ರೀವಾದ ವ್ಯಕ್ತಿಕೇಂದ್ರಿತವಲ್ಲ, ಒಟ್ಟಾರೆ ಹೆಣ್ಣು ಬದುಕಿನ ಕ್ರಮದ ಸಮುದಾಯದ ಚಿಂತನೆ. ಹಾಗಾಗಿ, ನಾನು ಇಂಗ್ಲಿಷಿನ ಮೊರೆ ಹೋಗಬೇಕಾಯಿತು. ಮಹಿಳಾ ಅಧ್ಯಯನದ ವಿದ್ಯಾರ್ಥಿಗಳಿಗೆ ಪಠ್ಯ ರೂಪಿಸುವಾಗ ಅನೇಕ ಕ್ಲಾಸಿಕ್ಸ್ ಅನುವಾದಿಸತೊಡಗಿದೆ. ಅದೀಗ ಬೆಲ್‌ಹುಕ್ಸ್‌ವರೆಗೆ ಬಂದಿದೆ. ಚಿಂತನೆ ಅಲ್ಲಿನದಾಗಿರಬಹುದು, ಇಲ್ಲಿನದಾಗಿರಬಹುದು. ಯಾವುದೇ ಚಿಂತನೆಗಳನ್ನು ನಮ್ಮ ಬದುಕಿಗೆ ಅನ್ವಯಿಸಿ, ಅರ್ಥೈಸಿಕೊಂಡಾಗ ಮಾತ್ರ ಅವು ನಮ್ಮದಾಗುತ್ತವೆ.

● **ಮಹಿಳಾಪರ ಮಾತನಾಡುವವರನ್ನು ಪುರುಷ ದ್ವೇಷಿಗಳಂತೆ ನೋಡಲಾಗುತ್ತಿದೆಯಲ್ಲ?**

ಸ್ತ್ರೀವಾದದ ಕುರಿತು ಮಾತನಾಡುವವರ ವಿರುದ್ಧ ಭಯ ಹುಟ್ಟಿಸುವುದೇ ಅಧಿಕಾರಶಾಹಿ ವ್ಯವಸ್ಥೆಯ ಲಕ್ಷಣ. ಈ ವ್ಯವಸ್ಥೆ ತನ್ನ ವಿರುದ್ಧ ಹೋದವರ ಬಗ್ಗೆ ಜನಸಾಮಾನ್ಯರಲ್ಲಿ ಭಯವನ್ನು ಬಿತ್ತುತ್ತದೆ. ಆ ಮೂಲಕ ಏಟು ಕೊಡುತ್ತಾ ಹೋಗುತ್ತದೆ. ಏಕೆಂದರೆ ಸ್ತ್ರೀವಾದ ಪ್ರಶ್ನಿಸುವುದನ್ನು ಕಲಿಸುತ್ತದೆ. ಹೆಣ್ಣು ತಾನು ಎಲ್ಲಿದ್ದಾಳೆ ಎಂಬ ಅರಿವನ್ನು ಮೂಡಿಸುತ್ತದೆ. ಇಂಥ ಅರಿವು, ಪ್ರಶ್ನೆಯನ್ನು ಪುರುಷಪ್ರಧಾನ ಸಮಾಜ ಸಹಜವಾಗಿಯೇ ಎದುರಿಸಲಾಗದು. ಹಾಗಾಗಿ, ಸ್ತ್ರೀವಾದ, ಸ್ತ್ರೀವಾದಿಗಳು ಪುರುಷದ್ವೇಷಿಗಳಂತೆ ಕಾಣುತ್ತಾರೆ.

● **ಪುರುಷಕೇಂದ್ರಿತ ಅಧಿಕಾರ ಮತ್ತು ಅಧೀನತೆಯ ನೆಲೆಯನ್ನು ಮೀರುವುದು ಹೇಗೆ?**

ಪುರುಷಪ್ರಧಾನ ಸಮಾಜವು ‘ನೀನು ಹೆಂಗಸು, ನೀನು ಗಂಡಸು, ನೀನು ಭಿನ್ನ ಲಿಂಗಿ’ ಎಂದು ನಮ್ಮ ನಡುವೆಯೇ ಕಂದಕ ರೂಪಿಸಿ, ನಮ್ಮನ್ನು ಬೇರ್ಪಡಿಸಿದೆ. ಕೆಲವೇ ಕೆಲವು ಜನರಲ್ಲಿ ಅಧಿಕಾರ ಉಳಿಯಬೇಕು, ಮಿಕ್ಕವರು ಅವರಿಗೆ ಅಧೀನರಾಗಬೇಕೆಂಬುದೇ ಇದರ ಉದ್ದೇಶ. ಇದನ್ನು ಅರ್ಥೈಸಿಕೊಂಡು ಅಧಿಕಾರ ಮತ್ತು ಅಧೀನತೆಯ ನೆಲೆಯನ್ನು ಒಡೆಯಬೇಕಿದೆ. ನಮ್ಮೆಲ್ಲರ ಮಾತುಕತೆ, ನಡವಳಿಕೆ ಪ್ರತಿಯೊಂದರಲ್ಲೂ ಪುರುಷಪ್ರಧಾನತೆಯ ಪ್ರಭಾವ ಇದೆ. ಇದನ್ನು ಗಂಡು, ಹೆಣ್ಣು ಒಟ್ಟಾರೆ ನಾವೆಲ್ಲರೂ ಪ್ರಜ್ಞಾಪೂರ್ವಕವಾಗಿ ಮೀರಬೇಕಿದೆ. ಈ ಮೀರುವಿಕೆಯ ಅರಿವಿನ ಹಾದಿ ಸ್ತ್ರೀವಾದದಲ್ಲಿದೆ.

● **ಇಂದಿನ ಮಹಿಳಾ ಸಾಹಿತ್ಯ ಹೇಗಿದೆ?**

ಈ ಹಿಂದೆ ಕೆಲವು ವರ್ಗದ ಮಹಿಳೆಯರಿಗಷ್ಟೇ ಬರವಣಿಗೆಗೆ ಅವಕಾಶಗಳಿದ್ದವು. ಆದರೆ, ಈಗ ಪರಿಸ್ಥಿತಿ ಹಾಗಿಲ್ಲ, ಬದಲಾಗಿದೆ. ವಿಶೇಷವಾಗಿ ಮುಸ್ಲಿಂ ಮಹಿಳೆಯರು, ಯುವಲೇಖಕಿಯರು ಹೆಚ್ಚಿನ ಸಂಖ್ಯೆಯಲ್ಲಿ ವಿಭಿನ್ನ ಆಲೋಚನಾ ನೆಲೆಯಲ್ಲಿ ಬರೆಯುತ್ತಿರುವುದು ಆಶಾದಾಯಕವಾಗಿದೆ.

● **ವಿವಿಧ ಕ್ಷೇತ್ರಗಳಲ್ಲಿ ಮಹಿಳೆ ತನ್ನ ಸಾಮರ್ಥ್ಯ ಪ್ರದರ್ಶಿಸಿದ್ದರೂ ಸಮಾನತೆಯ ಹಾದಿ ಇನ್ನೂ ದೂರವಿದೆಯೇ?**

ವಿವಿಧ ಕ್ಷೇತ್ರಗಳಲ್ಲಿ ಮಹಿಳೆ ತನ್ನ ಸಾಮರ್ಥ್ಯ ಸಾಬೀತು ಮಾಡಿದ್ದಾಳೆ ನಿಜ. ಇವರ ಪ್ರಮಾಣ ಎಷ್ಟಿದೆ? ಎಲ್ಲೋ ಕೆಲವರ ಸಾಧನೆ ಇಟ್ಟುಕೊಂಡು ಸಾಮಾನ್ಯೀಕರಣ ಮಾಡಲಾಗದು. ಯಾವುದೇ ಹೆಣ್ಣಿಗೆ ಸಾಂದರ್ಭಿಕವಾಗಿ ಕೆಲ ಅನುಕೂಲ ದಕ್ಕಿರಬಹುದು. ಆದರೆ ಅದು ಇಡೀ ಸಮುದಾಯಕ್ಕೆ ಸಲ್ಲುತ್ತದೆಯೇ? ಎಷ್ಟು ಉದ್ಯೋಗಸ್ಥೆಯರು ಮದುವೆ ಬಳಿಕ ವೃತ್ತಿಜೀವನ ಮುಂದುವರಿಸಿದ್ದಾರೆ? ‘ನಾನು ನನ್ನ ಬದುಕನ್ನು ನಡೆಸಬಲ್ಲೆ’ ಅನ್ನುವಂಥ ಆತ್ಮವಿಶ್ವಾಸವನ್ನು ಉಳಿಸಿಕೊಳ್ಳಬಲ್ಲ ಹೆಂಗಸರು ಎಷ್ಟು ಪ್ರಮಾಣದಲ್ಲಿದ್ದಾರೆ ಎಂಬುದನ್ನು ನೋಡಿದರೆ ನಾವಿನ್ನೂ ಸಮಾನತೆಯ ಹಾದಿ ಮುಟ್ಟಿಲ್ಲ ಎಂದರ್ಥ.

● **ಇವತ್ತಿನ ಸಂದರ್ಭದಲ್ಲಿ ಕರ್ನಾಟಕ ಲೇಖಕಿಯರ ಸಾಹಿತ್ಯ ಸಮ್ಮೇಳನದ ಮಹತ್ವವನ್ನು ಹೇಗೆ ಮನಗಾಣಿಸುವಿರಿ?**

ಸಾಮಾನ್ಯ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಮಹಿಳೆ ಏಕೆ ಅಧ್ಯಕ್ಷೆಯಾಗುವುದಿಲ್ಲ, ಆಕೆಗೆ ಏಕೆ ಪ್ರಾತಿನಿಧ್ಯ ಸಿಗುವುದಿಲ್ಲ.. ಇವೆಲ್ಲವನ್ನು ಪ್ರಶ್ನಿಸುವ ಸಲುವಾಗಿಯೇ ‘we are here’ ಎಂಬುದನ್ನು ಸಾಬೀತು ಮಾಡಲೆಂದೇ ಲೇಖಕಿಯರ ಸಾಹಿತ್ಯ ಸಮ್ಮೇಳನಗಳು ನಡೆಯಬೇಕಿವೆ. ಇದೊಂದು ರೀತಿಯಲ್ಲಿ ಪ್ರಬಲರ ಎದುರು ಅಂಚಿನವರಿದ್ದಂತೆ. ವ್ಯವಸ್ಥೆಗೆ ನಮ್ಮ ಧ್ವನಿಯನ್ನು ಕೇಳಿಸುವ ಹಾಗೆ ಮಾಡಬೇಕಿದೆ. ಆಗ ಇಂಥ ಸಮ್ಮೇಳನಗಳು ಬೇಕು. ನಾವೆಲ್ಲಿದ್ದೇವೆ ಎಂಬುದನ್ನು ಪ್ರಬಲರಿಗೆ ಕೇಳಿಸಬೇಕಿದೆ, ಕಾಣಿಸಬೇಕಿದೆ, ಮನಗಾಣಿಸಬೇಕಿದೆ.

● **ಇಂದಿನ ಯುವಜನರ ಆಲೋಚನಾ ಕ್ರಮದ ಬಗ್ಗೆ ಹೇಗನ್ನಿಸುತ್ತೆ?**

ಇಂದಿನ ಯುವಜನರ ಆಲೋಚನಾ ಧಾಟಿ ಸಕಾರಾತ್ಮಕವಾಗಿದೆ. ಓದು, ಬರಹ, ಸ್ತ್ರೀವಾದ ಇತ್ಯಾದಿಗಳಿಗೆ ತೆರೆದುಕೊಳ್ಳುತ್ತಿದ್ದಾರೆ. ಪ್ರೀತಿ, ತ್ಯಾಗ, ಸಂಯಮ, ಸೇವೆ ಎಲ್ಲವೂ ಪರಸ್ಪರರ ಸಹಬಾಳ್ವೆಯ ತತ್ವದಲ್ಲಿ ಗ್ರಹಿಸಲು ಪ್ರಯತ್ನಿಸುತ್ತಿದ್ದಾರೆ. ಹಿರಿಯರು ತಮ್ಮ ಅನುಭವದ ಹಾದಿಯಲ್ಲಿ ಕಂಡುಕೊಂಡ ಸರಿ–ತಪ್ಪುಗಳ ಬಗ್ಗೆ ಯುವಜನರೊಂದಿಗೆ ಹಂಚಿಕೊಳ್ಳುವುದೂ ಅಗತ್ಯ.

ಸದಾಶಿವ, ಸತ್ಯನಾರಾಯಣ, ಮುಸ್ತಾಫಗೆ ಬಹುಮಾನ

ಪ್ರಜಾವಾಣಿ ವಾರ್ತೆ

ಸದಾಶಿವ ಸೊರಟೂರು



ಸತ್ಯನಾರಾಯಣ

ಮುಸ್ತಾಫ ಕೆ.ಎಚ್.

ಬೆಂಗಳೂರು: ಕನ್ನಡ ಪ್ರಬಂಧ ಸಾಹಿತ್ಯಕ್ಕೆ ನಿರಂತರವಾಗಿ ಹೊಸ ಪ್ರತಿಭೆಗಳನ್ನು ಪರಿಚಯಿಸುವ ‘ಸುಧಾ ಯುಗಾದಿ ಪ್ರಬಂಧ ಸ್ಪರ್ಧೆ’ಯ 2025ರ ಸಾಲಿನ ಫಲಿತಾಂಶ ಪ್ರಕಟಗೊಂಡಿದ್ದು, ಹೊನ್ನಾಳಿಯ ಸದಾಶಿವ ಸೊರಟೂರು ಅವರ ‘ನಿನ್ನೆ ಯಾರದ್ದೊ ಇಂದು ನನ್ನದು’ ಪ್ರಬಂಧ ಮೊದಲ ಬಹುಮಾನ ಪಡೆದಿದೆ.

ಬೆಂಗಳೂರಿನ ಬಿ.ಆರ್. ಸತ್ಯನಾರಾಯಣ (‘ಊರಮ್ಮ’ಗಳ ನೆನಪಲ್ಲಿ) ಹಾಗೂ ಕೊಡಗಿನ ಮುಸ್ತಾಫ ಕೆ.ಎಚ್. (‘ಇದು ಬರೀ ಗಂಜಿಯಲ್ಲೋ ಅಣ್ಣಾ...’) ಅವರ ಪ್ರಬಂಧಗಳು ಎರಡನೇ ಮತ್ತು ಮೂರನೇ ಬಹುಮಾನ ಪಡೆದಿವೆ. ‘ಸುಧಾ ಯುಗಾದಿ ವಿಶೇಷಾಂಕ’ದಲ್ಲಿ ಪ್ರಕಟಗೊಂಡಿರುವ ಬಹುಮಾನಿತ ಪ್ರಬಂಧಗಳಿಗೆ ಕ್ರಮವಾಗಿ ₹15,000, ₹12,000 ಹಾಗೂ ₹10,000 ದೊರೆಯಲಿದೆ.

‘ದೇವರ ಕೋಣೆ’ (ನಳಿನಿ ಭೀಮಪ್ಪ), ‘ಅಳುವ ಕಡಲೊಳು ತೇಲಿ ಬರುತಲಿದೆ’ (ರವಿ ಚಂದರ್), ‘ಸಂತೆಯೆಂಬ ಪುಟ್ಟ ಪ್ರಪಂಚದೊಳಗೆ’ (ಸಂಜೋತಾ ಪುರೋಹಿತ್), ‘ನಡಿಗೆಯ ನಂಟ’ (ಬ್ಯಾಡರಹಳ್ಳಿ ಶಿವರಾಜ್) ಹಾಗೂ ‘ಆಲದ ಮರವೇ ಆಲದ ಮರವೇ’ (ಬಿ.ಎಂ. ಭಾರತಿ ಹಾದಿಗೆ) ಪ್ರಬಂಧಗಳು ತೀರ್ಪುಗಾರರ ಮೆಚ್ಚುಗೆ ಪಡೆದಿವೆ. ‘ಸುಧಾ’ದಲ್ಲಿ ಪ್ರಕಟಗೊಳ್ಳುವ ಈ ರಚನೆಗಳಿಗೆ ತಲಾ ₹2,000 ದೊರೆಯಲಿದೆ.

ಆರು ನೂರಕ್ಕೂ ಹೆಚ್ಚಿನ ಪ್ರಬಂಧಗಳು ಸ್ಪರ್ಧೆಗೆ ಬಂದಿದ್ದವು. ಹಿರಿಯ ಲೇಖಕಿ ಜಯಶ್ರೀ ಕಾಸರವಳ್ಳಿ ಹಾಗೂ ವಿಮರ್ಶಕ ಎಚ್. ದಂಡಪ್ಪ ಸ್ಪರ್ಧೆಯ ತೀರ್ಪುಗಾರರು.

ಏಕತೆಗೆ ವಿಭಜಕ ಶಕ್ತಿಗಳ ಸವಾಲು

ಆರ್‌ಎಸ್‌ಎಸ್ ಪ್ರತಿನಿಧಿ ಸಭಾದ ಸಮಾವೇಶದಲ್ಲಿ ಮುಕುಂದ ಸಿ.ಆರ್.ಕಳವಳ

ಪ್ರಜಾವಾಣಿ ವಾರ್ತೆ



ಪ್ರತಿನಿಧಿ ಸಭೆಯಲ್ಲಿ ಆರ್‌ಎಸ್‌ಎಸ್ ಸರಸಂಘಚಾಲಕ ಮೋಹನ್ ಭಾಗವತ್, ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಭಾರತಾಂಬೆಯ ಚಿತ್ರಕ್ಕೆ ಪುಷ್ಪ ಸಮರ್ಪಿಸಿದರು ಪ್ರಜಾವಾಣಿ ಚಿತ್ರ

ಬೆಂಗಳೂರು: ‘ಭಾಷೆ, ಗಡಿ, ಪ್ರದೇಶಗಳ ಹೆಸರಿನಲ್ಲಿ ಅನೇಕ ಶಕ್ತಿಗಳು ರಾಷ್ಟ್ರೀಯ ಏಕತೆ ಮತ್ತು ಸಮಗ್ರತೆಗೆ ಸವಾಲನ್ನು ಒಡ್ಡುತ್ತಿವೆ. ಉತ್ತರ ಭಾರತ, ದಕ್ಷಿಣ ಭಾರತ ಎಂದು ವಿಭಜಿಸಲು ಹೊರಟಿವೆ. ಸಾಮಾಜಿಕ ಸಂಘಟನೆಗಳ ನಾಯಕರು, ಸಮುದಾಯಗಳ ನಾಯಕರು ವಿಭಜಕ ಸಮಸ್ಯೆಗಳನ್ನು ಪರಿಹರಿಸಲು ಕೆಲಸ ಮಾಡಬೇಕು’ ಎಂದು ಆರ್‌ಎಸ್‌ಎಸ್ ಸಹ ಕಾರ್ಯವಾಹ ಮುಕುಂದ ಸಿ.ಆರ್. ತಿಳಿಸಿದರು.

ಆರ್‌ಎಸ್‌ಎಸ್ ‘ಅಖಿಲ ಭಾರತೀಯ ಪ್ರತಿನಿಧಿ ಸಭಾ’ದ ಸಮಾವೇಶ ಉದ್ಘಾಟನೆಯ ಬಳಿಕ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿದರು.

‘ರೂಪಾಯಿ ಗುರುತನ್ನು ಬದಲಾಯಿಸುವುದು, ಭಾಷಾ ವಿಷಯಗಳನ್ನು ಉದ್ರೇಕಿಸುವುದು ಸರಿಯಲ್ಲ. ಎಲ್ಲ ಸಮಸ್ಯೆಗಳು ಸೌಹಾರ್ದಯುತವಾಗಿ ಪರಿಹಾರ ಕಾಣಬೇಕು ಎಂಬುದು ಆರ್‌ಎಸ್‌ಎಸ್ ಆಶಯ. ನಮ್ಮೊಳಗೆ ಕಿತ್ತಾಡುವಂತಾಗಬಾರದು’ ಎಂದು ಹೇಳಿದರು.

ಕ್ಷೇತ್ರ ಪುನರ್‌ವಿಂಗಡಣೆಯನ್ನು ದಕ್ಷಿಣ ರಾಜ್ಯಗಳಲ್ಲಿ ಪ್ರಸ್ತುತ ಇರುವ ಲೋಕಸಭಾ ಸ್ಥಾನಗಳ ಅನುಪಾತವನ್ನು ಆಧರಿಸಿ ಮಾಡಲಾಗುವುದು ಎಂದು ಗೃಹ ಸಚಿವರೇ ಹೇಳಿದ್ದಾರೆ. ಆರ್‌ಎಸ್‌ಎಸ್ ಈ ಬಗ್ಗೆ ಹೆಚ್ಚಿನದನ್ನು ಹೇಳುವುದಿಲ್ಲ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ದ್ವಿಭಾಷೆ ಅಥವಾ ತ್ರಿಭಾಷಾ ಸೂತ್ರದ ಬಗ್ಗೆ ಆರ್‌ಎಸ್‌ಎಸ್ ಯಾವುದೇ ನಿರ್ಣಯ ಕೈಗೊಂಡಿಲ್ಲ. ಪ್ರತಿ ಭಾರತೀಯನೂ ಬಹುಭಾಷೆ ಕಲಿಯಬೇಕು. ಶಿಕ್ಷಣದಲ್ಲಿ ಮಾತ್ರವಲ್ಲ, ನಿತ್ಯದ ವ್ಯವಹಾರದಲ್ಲಿ ಮಾತೃಭಾಷೆ ಇರಬೇಕು. ಪ್ರಾದೇಶಿಕ ಭಾಷೆ ತಿಳಿದಿರಬೇಕು. ವೃತ್ತಿಗಾಗಿ ಇಂಗ್ಲಿಷ್ ಅಥವಾ ಇನ್ಯಾವುದೇ ಭಾಷೆ ಗೊತ್ತಿದ್ದರೆ ಒಳ್ಳೆಯದು. ಹಿಂದಿ ಪ್ರದೇಶಗಳಲ್ಲಿ ದಕ್ಷಿಣ ಭಾರತದ ಮತ್ತು ಈಶಾನ್ಯ ಭಾರತದ ಯಾವುದಾದರೂ ಭಾಷೆ ಕಲಿಯಲು ಸಂಘ ಉತ್ತೇಜನ ನೀಡುತ್ತದೆ ಎಂದು ಪ್ರತಿಪಾದಿಸಿದರು.

ಮಣಿಪುರದಲ್ಲಿ ಶಾಂತಿ ಸ್ಥಾಪನೆಗಾಗಿ ಆರ್‌ಎಸ್‌ಎಸ್ ಪ್ರಯತ್ನಿಸುತ್ತಿದೆ. ಅಲ್ಲಿನ ನಾಯಕತ್ವ ಮತ್ತು ಬುಡಕಟ್ಟು ಸಮುದಾಯಗಳಲ್ಲಿ ಒಗ್ಗಟ್ಟು ತರಲು, ಕಲಹ ನಿರತ ಸಮುದಾಯಗಳ ನಡುವೆ ಸೌಹಾರ್ದ ಮೂಡಿಸಲು ಸಂಘ ಕೆಲಸ ಮಾಡುತ್ತಿದೆ. ರಾಷ್ಟ್ರಪತಿ ಆಳ್ವಿಕೆ ಹೇರಿದ ಬಳಿಕ ಶಾಂತಿ ಸ್ಥಾಪನೆಯ ನಿರೀಕ್ಷೆ ಹೆಚ್ಚಿದೆ ಎಂದರು.

ಸಂಘದ ಶಕ್ತಿ ವೃದ್ಧಿ

ಆರ್‌ಎಸ್‌ಎಸ್ ಕಡೆಗೆ ಯುವಜನರು ಆಕರ್ಷಿತರಾಗಿದ್ದು, ಸಂಘದ ಶಕ್ತಿ ವರ್ಧನೆಯಾಗುತ್ತಿದೆ. ಸ್ವಯಂ ಸೇವಕರ ಸಂಖ್ಯೆ ಒಂದು ಕೋಟಿ ದಾಟಿದೆ ಎಂದು ಸಂಘ ಹೇಳಿದೆ.

‘ಅಖಿಲ ಭಾರತೀಯ ಪ್ರತಿನಿಧಿ ಸಭಾ’ದಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರ ಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಮಂಡಿಸಿದ ವರದಿಯಲ್ಲಿ ಈ ಅಂಶವನ್ನು ಉಲ್ಲೇಖಿಸಲಾಗಿದೆ.

14-25 ವರ್ಷ ವಯಸ್ಸಿನವರು ಸ್ವಯಂಸೇವಕರಾಗಿ ಸೇರುತ್ತಿದ್ದಾರೆ. ಈ ವರ್ಷ 4,415 ಪ್ರಾರಂಭಿಕ ಶಿಕ್ಷಾ ವರ್ಗಗಳು (ಆರಂಭಿಕ ತರಬೇತಿ ಶಿಬಿರ) ನಡೆದವು. 2,22,962 ಮಂದಿ ಹಾಜರಾಗಿದ್ದು ಅವರಲ್ಲಿ 1.63 ಲಕ್ಷ ಮಂದಿ 14-25ರ ವರ್ಷ ವಯಸ್ಸಿನವರು. 2012ರಿಂದ ವೆಬ್‌ಸೈಟ್ ಮೂಲಕ 12.72 ಲಕ್ಷ ಜನರು ಸಂಘ ಸೇರಲು ಆಸಕ್ತಿ ತೋರಿಸಿದ್ದಾರೆ ಎಂದರು.

ಹತ್ಯೆ ಆರೋಪಿಗಳಿಗೆ ರಾಜಾತಿಥ್ಯ ತನಿಖೆಗೆ ಸೂಚನೆ: ಶಿವಾನಂದ

ಪ್ರಜಾವಾಣಿ ವಾರ್ತೆ

ಹಾವೇರಿ: ಶುಶ್ರೂಷಕಿ ಸ್ವಾತಿ ಬ್ಯಾಡಗಿ ಹತ್ಯೆ ಪ್ರಕರಣದ ಆರೋಪಿಗಳಿಗೆ ಹಲಗೇರಿ ಠಾಣೆ ಪೊಲೀಸರು ರಾಜಾತಿಥ್ಯ ನೀಡುತ್ತಿರುವ ಆರೋಪ ಕೇಳಿಬಂದಿದ್ದು, ಇದರ ಬಗ್ಗೆ ಸಮಗ್ರ ತನಿಖೆ ನಡೆಸಲು ಜಿಲ್ಲಾ ಉಸ್ತುವಾರಿ ಸಚಿವ ಶಿವಾನಂದ ಪಾಟೀಲ ಅವರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗೆ ಸೂಚಿಸಿದರು.

ಜಿಲ್ಲೆಯ ರಟ್ಟೀಹಳ್ಳಿ ತಾಲ್ಲೂಕಿನ ಮಾಸೂರಿನಲ್ಲಿರುವ ಸ್ವಾತಿ ಬ್ಯಾಡಗಿ ಅವರ ಮನೆಗೆ ಶುಕ್ರವಾರ ಭೇಟಿ ನೀಡಿದ ಶಿವಾನಂದ ಪಾಟೀಲ, ಕುಟುಂಬಸ್ಥರಿಗೆ ಸಾಂತ್ವನ ಹೇಳಿದರು. ರಾಜ್ಯ ಸರ್ಕಾರದ ₹5 ಲಕ್ಷ ಪರಿಹಾರದ ಆದೇಶ ಪ್ರತಿ ಮತ್ತು ವೈಯಕ್ತಿಕವಾಗಿ ₹1 ಲಕ್ಷ ಪರಿಹಾರ ನೀಡಿದರು.

ಶಿವಾನಂದ ಪಾಟೀಲರು ಮನೆಯೊಳಗೆ ಬರುತ್ತಿದ್ದಂತೆ ಕಾಲಿಗೆ ಬಿದ್ದ ಸ್ವಾತಿ ಅವರ ತಾಯಿ ಕರಿಯಮ್ಮ, ‘ನನ್ನ ಮಗಳ ಸಾವಿಗೆ ನ್ಯಾಯ ಬೇಕು’ ಎಂದು ಗೋಳಾಡಿದರು.

ಸ್ವಾತಿ ದೊಡ್ಡಪ್ಪ ರಾಜಪ್ಪ, ‘ಪೊಲೀಸರು ತರಾತುರಿಯಲ್ಲಿ ಮೃತದೇಹದ ಅಂತ್ಯಕ್ರಿಯೆ ನೆರವೇರಿಸಿದ್ದು, ಅವರ ತನಿಖೆ ಮೇಲೆ ನಮಗೆ ಅನುಮಾನವಿದೆ. ಗುರುವಾರ (ಮಾ. 20) ಮರಣೋತ್ತರ ಪರೀಕ್ಷೆ ವರದಿ ಬಗ್ಗೆ ವಿಚಾರಿಸಲು ಹಲಗೇರಿ ಠಾಣೆಗೆ ಹೋದಾಗ, ಹತ್ಯೆ ಆರೋಪಿಗಳಾದ ನಯಾಜ್, ದುರ್ಗಾಚಾರಿ ಹಾಗೂ ವಿನಾಯಕ್ ಒಂದೇ ಸೆಲ್‌ನಲ್ಲಿದ್ದರು. ಸೆಲ್‌ನಲ್ಲಿದ್ದ ಆರೋಪಿ ನಯಾಜ್, ಮೊಬೈಲ್‌ನಲ್ಲಿ ಮಾತನಾಡುತ್ತಿದ್ದ. ಪೊಲೀಸರೇ ಆತನಿಗೆ ಮೊಬೈಲ್ ನೀಡಿದ್ದರು. ದುರ್ಗಾಚಾರಿ ನಮ್ಮೆದುರೇ ಗುಟ್ಕಾ ತಿನ್ನುತ್ತಿದ್ದ. ವಿಚಾರಣೆ ನೆಪದಲ್ಲಿ ವಶಕ್ಕೆ ಪಡೆದಿರುವ ಪೊಲೀಸರು, ಆರೋಪಿಗಳಿಗೆ ರಾಜಾತಿಥ್ಯ ನೀಡುತ್ತಿದ್ದಾರೆ. ಹೀಗಾಗಿ, ಪ್ರಕರಣದ ತನಿಖೆಯನ್ನು ಸಿಬಿಐಗೆ ವಹಿಸಬೇಕು’ ಎಂದು ಕೋರಿದರು.

ಅಂತ್ಯಕ್ರಿಯೆ ದಿನದ ಗೊಂದಲ: ಮಾರ್ಚ್ 6ರಂದು ಸ್ವಾತಿ ಮೃತದೇಹ ಸಿಕ್ಕಿತ್ತು. 7ರಂದು ಅಂತ್ಯಕ್ರಿಯೆ ನೆರವೇರಿಸಿದ್ದಾಗಿ ಪೊಲೀಸರು ಪತ್ರಿಕಾ ಪ್ರಕಟಣೆ ನೀಡಿದ್ದಾರೆ. ಆದರೆ, ಮಾರ್ಚ್ 11ರಂದು ಅಂತ್ಯಕ್ರಿಯೆ ಮಾಡಿರುವುದಾಗಿ ಕುಟುಂಬಸ್ಥರಿಗೆ ಹೇಳಿದ್ದಾರೆ. ಅಂತ್ಯಕ್ರಿಯೆ ದಿನದ ಬಗ್ಗೆಯೇ ಗೊಂದಲ ಸೃಷ್ಟಿಯಾಗಿದ್ದು, ಪೊಲೀಸರ ತನಿಖೆ ಮೇಲೆ ಅನುಮಾನ ಮೂಡಿಸಿದೆ.

‘ಮಗಳನ್ನು ಚೆನ್ನಾಗಿ ಸಾಕಿದ್ದೆ. ಆದರೆ, ಪೊಲೀಸರು ಅನಾಥ ಶವವೆಂದು ಮಗಳ ಅಂತ್ಯಕ್ರಿಯೆ ಮಾಡಿ ಮುಗಿಸಿದ್ದಾರೆ. ಹೆತ್ತ ಕರುಳು ಮರುಗುತ್ತಿದೆ. ಪ್ರಕರಣದ ತನಿಖೆ ನಡೆಸುತ್ತಿರುವ ಪೊಲೀಸ್ ತನಿಖಾಧಿಕಾರಿಯನ್ನು ಬದಲಿಸಬೇಕು. ಇಲ್ಲದಿದ್ದರೆ, ಪ್ರಕರಣದ ತನಿಖೆಯನ್ನು ಸಿಬಿಐಗೆ ವಹಿಸಬೇಕು’ ಎಂದು ಸ್ವಾತಿ ತಾಯಿ ರೇಖಾ ಕಣ್ಣೀರಿಟ್ಟರು.

‘ಒತ್ತುವರಿದಾರರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಿ’

ಪ್ರಜಾವಾಣಿ ವಾರ್ತೆ

ಎಸ್.ಆರ್. ಹಿರೇಮಠ

ಹುಬ್ಬಳ್ಳಿ: ‘ಕೇತಗಾನಹಳ್ಳಿಯಲ್ಲಿ 14 ಎಕರೆಯಲ್ಲ, 71 ಎಕರೆ ಜಮೀನು ಒತ್ತುವರಿಯಾಗಿದೆ. ಒತ್ತುವರಿದಾರರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಬೇಕು’ ಎಂದು ಸಮಾಜ ಪರಿವರ್ತನಾ ಸಮುದಾಯದ ಮುಖ್ಯಸ್ಥ ಎಸ್.ಆರ್. ಹಿರೇಮಠ ಗುರುವಾರ ಒತ್ತಾಯಿಸಿದರು.

‘ಒತ್ತುವರಿದಾರರ ಜೊತೆಗೆ ಶಾಮೀಲಾದ ಅಧಿಕಾರಿಗಳ ವಿರುದ್ಧವೂ ಕಾನೂನು ಕ್ರಮ ಜರುಗಿಸಬೇಕು. ವಶಕ್ಕೆ ಪಡೆದ ಜಮೀನನ್ನು ಪುನಃ ಗೋಮಾಳವಾಗಿ ಪರಿವರ್ತಿಸಿ, ನ್ಯಾಯಾಲಯಕ್ಕೆ ವರದಿ ಸಲ್ಲಿಸಬೇಕು’ ಎಂದು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

‘ಸಿಟಿಜನ್ ಫಾರ್ ಡೆಮಾಕ್ರಸಿ (ಸಿಎಫ್‌ಡಿ) ಸಂಸ್ಥೆಯ ಸುವರ್ಣ ಮಹೋತ್ಸವ ಕಾರ್ಯಕ್ರಮ ದೆಹಲಿಯ ಗಾಂಧಿಶಾಂತಿ ಪ್ರತಿಷ್ಠಾನ ದಲ್ಲಿ ಏ.19–20ರಂದು ನಡೆಯಲಿದೆ. ನ್ಯಾಯಮೂರ್ತಿ ಮದನ್ ಎಂ.ಲೋಕುರ್ ಉದ್ಘಾಟಿಸುವರು. ಕರ್ನಾಟಕ ಸೇರಿದಂತೆ ವಿವಿಧ ರಾಜ್ಯಗಳ ಸಂಘ-ಸಂಸ್ಥೆಗಳ ಪ್ರತಿನಿಧಿಗಳು ಸಮಾವೇಶದಲ್ಲಿ ಪಾಲ್ಗೊಳ್ಳುವರು’ ಎಂದರು.

ಮೈಸೂರು-ಕಾರವಾರ ನಡುವೆ ರೈಲು ವಿಶೇಷ ಟ್ರಿಪ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯುಗಾದಿ ಮತ್ತು ರಂಜಾನ್ ಹಬ್ಬಗಳ ಸಂದರ್ಭದಲ್ಲಿ ಪ್ರಯಾಣಿಕರ ಹೆಚ್ಚುವರಿ ದಟ್ಟಣೆಯನ್ನು ಸರಿದೂಗಿಸಲು ಮೈಸೂರು ಮತ್ತು ಕಾರವಾರ ನಡುವೆ ಒಂದು ಟ್ರಿಪ್ ವಿಶೇಷ ಎಕ್ಸ್‌ಪ್ರೆಸ್ ರೈಲು ಕಾರ್ಯಾಚರಣೆಗೆ ರೈಲ್ವೆ ಮಂಡಳಿ ಅನುಮೋದನೆ ನೀಡಿದೆ.

ಮಾರ್ಚ್ 28ರಂದು ರಾತ್ರಿ 9.35ಕ್ಕೆ ಮೈಸೂರಿನಿಂದ ರೈಲು ಹೊರಡಲಿದ್ದು, ಮರುದಿನ ಸಂಜೆ 4.15ಕ್ಕೆ ಕಾರವಾರ ತಲುಪಲಿದೆ. ಅಂದು ರಾತ್ರಿ 11.30ಕ್ಕೆ ಕಾರವಾರದಿಂದ ಹೊರಟು ಮಾರ್ಚ್ 30ಕ್ಕೆ ಸಂಜೆ 4.40ಕ್ಕೆ ಮೈಸೂರು ತಲುಪಲಿದೆ.

21 ಬೋಗಿಗಳ ಈ ವಿಶೇಷ ರೈಲು ಮಂಡ್ಯ, ಕೆಎಸ್‌ಆರ್ ಬೆಂಗಳೂರು, ಯಶವಂತಪುರ, ಕುಣಿಗಲ್, ಹಾಸನ, ಸಕಲೇಶಪುರ, ಸುಬ್ರಹ್ಮಣ್ಯ ರೋಡ್, ಕಬಕ ಪುತ್ತೂರು, ಬಂಟ್ವಾಳ, ಸುರತ್ಕಲ್, ಮೂಲ್ಕಿ, ಉಡುಪಿ, ಬಾರ್ಕೂರು, ಕುಂದಾಪುರ, ಬೈಂದೂರು, ಭಟ್ಕಳ, ಮುರುಡೇಶ್ವರ, ಹೊನ್ನಾವರ, ಕುಮಟಾ, ಗೋಕರ್ಣ ರಸ್ತೆ ಮತ್ತು ಅಂಕೋಲಾ ನಿಲ್ದಾಣಗಳಲ್ಲಿ ನಿಲುಗಡೆಗೊಳ್ಳಲಿದೆ ಎಂದು ನೈರುತ್ಯ ರೈಲ್ವೆ ಅಧಿಕಾರಿಗಳು ತಿಳಿಸಿದ್ದಾರೆ.

ಸಿರಗುಪ್ಪ ತಾಲೂಕು: ಬತ್ತಿದ ವೇದಾವತಿ – ಹಗರಿ ನದಿ

ನೀರಿಗಾಗಿ ನದಿ ಒಡಲಿಗೆ ಕೊಳವೆ

● ಡಿ.ಮಾರೆಪ್ಪ ನಾಯಕ

ವೇದಾವತಿ–ಹಗರಿ ನದಿಯಲ್ಲಿ ಹಳ್ಳ ತೆಗೆದು ಕೇಸಿಂಗ್ ಅಳವಡಿಸಿ ನೀರು ಪಡೆಯಲು ರೈತರು ಯತ್ನಿಸಿದ್ದಾರೆ

ಸಿರುಗುಪ್ಪ: ತಾಲ್ಲೂಕಿನ ಸಾವಿರಾರು ರೈತರ ಜೀವನಾಡಿಯಾದ ವೇದಾವತಿ–ಹಗರಿ ನದಿಯು ಬೇಸಿಗೆ ಆರಂಭದಲ್ಲೇ ಸಂಪೂರ್ಣ ಬತ್ತಿದೆ. ಇಲ್ಲಿನ ನೀರನ್ನೇ ನಂಬಿದ್ದ ರೈತರು, ಜೀವ ಸಂಕುಲಗಳಿಗೆ ಸಂಕಷ್ಟ ಎದುರಾಗಿದೆ.

ತಾಲ್ಲೂಕಿನ ತಾಳೂರು, ಊಳೂರು, ಉತ್ತನೂರು, ಮಾಟಸೂಗೂರು, ಕೂರಿಗನೂರು, ಬೂದುಗುಪ್ಪ, ಮೈಲಾಪುರ, ಮೈಲಾಪುರ ಕ್ಯಾಂಪ್, ಕೆ.ಬೆಳಗಲ್ಲು, ಮುದೇನೂರು, ಹೀರೇಹಾಳು, ಕೆ.ಸೂಗೂರು, ರಾರಾವಿ, ಕುರುವಳ್ಳಿ, ನಾಗಲಾಪುರ, ಕುಡುದರಹಾಳು, ಚಿಕ್ಕಬಳ್ಳಾರಿ, 25-ಹಳೇಕೋಟೆ, ಬಲಕುಂದಿ, ಉಪ್ಪಾರಹೊಸಳ್ಳಿ, ಪೊಪ್ಪನಹಾಳು, ಅರಳಿಗನೂರು, ಶಾಲಿಗನೂರು, ಕರ್ಚಿಗನೂರು ಈ ಭಾಗದ ರೈತರು, ಜನ ಜಾನುವಾರುಗಳು ವೇದಾವತಿ-ಹಗರಿ ನದಿ ನೀರಿನ ಮೇಲೆ ಅವಲಂಬಿತವಾಗಿವೆ.

‘ನದಿ ನೀರನ್ನೇ ನಂಬಿ ಕಳೆದ ಡಿಸೆಂಬರ್‌ನಲ್ಲಿ ಭತ್ತ ನಾಟಿ ಮಾಡಿದ್ದೆವು. ಬೆಳೆ ಈಗ ತೆನೆ ಬಿಚ್ಚಿ ಕಾಳು ಕಟ್ಟುವ ಹಂತದಲ್ಲಿದೆ. ಈಗ ನೀರು ಅನಿವಾರ್ಯ. ಇಂಥ ಹೊತ್ತಲ್ಲೇ ನದಿ ಬತ್ತಿದೆ. ಗದ್ದೆಗಳು ಒಣಗಿವೆ. ಮೂರು ನಾಲ್ಕು ದಿನಗಳಲ್ಲಿ ಭತ್ತಕ್ಕೆ ನೀರು ಹರಿಯದಿದ್ದರೆ, ಕೈಗೆ ಬಂದ ತುತ್ತು ಬಾಯಿಗೆ ಬಾರದಂತಾಗುತ್ತದೆ’ ಎನ್ನುತ್ತಾರೆ ಗ್ರಾಮಸ್ಥರು.

‘ಬತ್ತಿದ ನದಿಯಲ್ಲಿ 20 ರಿಂದ 30 ಅಡಿ ಹಳ್ಳ ತೆಗೆದು, ಅದಕ್ಕೆ ಕೊಳವೆ ಅಳವಡಿಸಿ ನೀರು ಪಂಪ್ ಮಾಡಲು ರೈತರು ಪ್ರಯತ್ನಿಸುತ್ತಿದ್ದಾರೆ. ಆದರೆ, ಹಳ್ಳ ತೆಗೆದರೂ ನೀರು ಒಸರುತ್ತಿಲ್ಲ. ಈವರೆಗೆ ಎಕರೆಗೆ ₹40 ಸಾವಿರ ಖರ್ಚು ಮಾಡಿದ್ದೇವೆ. ತುಂಗಭದ್ರಾ ಅಣೆಕಟ್ಟಿನ ಕೆಳ ಹಂತದ ಕರ್ನೂಲು ಕಾಲುವೆ ಮೂಲಕ ಏನಾದರೂ ಮಾಡಿ ನದಿಗೆ ನೀರು ಹರಿಸಿದರೆ ಬೆಳೆ, ಜನ, ಜೀವಗಳು ಉಳಿಯುತ್ತವೆ. ಅಧಿಕಾರಿಗಳು, ಶಾಸಕರು ಕೂಡಲೇ ಎಚ್ಚೆತ್ತುಕೊಳ್ಳಬೇಕು’ ಎಂದು ರಾಜ್ಯ ರೈತ ಸಂಘದ ಸಿರುಗುಪ್ಪ ತಾಲೂಕು ಘಟಕದ ಅಧ್ಯಕ್ಷ ಜೆ.ಸಿದ್ದರಾಮನಗೌಡ ತಿಳಿಸಿದರು.

ಉನ್ನತ ಶಿಕ್ಷಣ ಇಲಾಖೆ

6ನೇ ಮಹಡಿ, ಗೇಟ್ ಸಂಖ್ಯೆ:03, ಕೊಠಡಿ ಸಂಖ್ಯೆ: 601(ಆರ್&ಐ ಶಾಖೆ) ಬಹುಮಹಡಿಗಳ ಕಟ್ಟಡ, ಬೆಂಗಳೂರು–560 001.

ಸಂಖ್ಯೆ: ಇಡಿ 57 ಯುಬಿವಿ 2025 ದಿನಾಂಕ: 21.03.2025

ಬೆಂಗಳೂರು ನಗರ ವಿಶ್ವವಿದ್ಯಾಲಯ, ಬೆಂಗಳೂರು ಕುಲಪತಿಗಳ ಹುದ್ದೆಯ ನೇಮಕಾತಿ

ಬೆಂಗಳೂರು ನಗರ ವಿಶ್ವವಿದ್ಯಾಲಯ, ಬೆಂಗಳೂರು ಇಲ್ಲಿಗೆ ಕುಲಪತಿ ಹುದ್ದೆಗೆ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ, 2000ರ ಪ್ರಕರಣ 14(5) ಹಾಗೂ ಪ್ರಕರಣ 14(6)ರನ್ವಯ ಅರ್ಜಿ ಆಹ್ವಾನಿಸಲಾಗಿದೆ.

ಕರ್ನಾಟಕ ಸರ್ಕಾರ ಉನ್ನತ ಶಿಕ್ಷಣ ಇಲಾಖೆಯು ಕರ್ನಾಟಕ ರಾಜ್ಯ ಬೆಂಗಳೂರು ನಗರ ವಿಶ್ವವಿದ್ಯಾಲಯ, ಬೆಂಗಳೂರು ಕುಲಪತಿ ಹುದ್ದೆಗೆ ಅರ್ಜಿ ಆಹ್ವಾನಿಸಿದೆ. ಈ ಅಧಿಸೂಚನೆಯ ದಿನಾಂಕದಿಂದ 30 ದಿನಗಳ ಒಳಗಾಗಿ ಅರ್ಜಿಯನ್ನು ಸಲ್ಲಿಸತಕ್ಕದ್ದು. ಅರ್ಜಿ ನಮೂನೆ ಮತ್ತು ಈ ಸಂಬಂಧ ಹೆಚ್ಚಿನ ವಿವರಗಳನ್ನು ಉನ್ನತ ಶಿಕ್ಷಣ ಇಲಾಖೆಯ https://hed.karnataka.gov.in ಅಧಿಕೃತ ಜಾಲತಾಣದಿಂದ ಪಡೆಯಬಹುದು.

ಸಹಿ/–
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಉನ್ನತ ಶಿಕ್ಷಣ ಇಲಾಖೆ

ವಾಸಾಸಂಇ/ವಾಪ್ರ/ಜಿಎ/5852/2024–25

MSIL **ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್**

(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)

ಆಡಳಿತ ವಿಭಾಗ

ಎಂಎಸ್‌ಐಎಲ್ ಹೌಸ್, ನಂ.36, ಕನ್ನಿಂಗ್‌ಹ್ಯಾಂ ರಸ್ತೆ, ಬೆಂಗಳೂರು–560 052
ದೂರವಾಣಿ : 080–22264021–25

ದಿನಾಂಕ: 22.03.2025

ಎಚ್ಚರಿಕೆ

ಎಂಎಸ್‌ಐಎಲ್ ಸಂಸ್ಥೆಯ ನೇಮಕಾತಿಗೆ ಸಂಬಂಧಪಟ್ಟಂತೆ ಸಲ್ಲಿಸಿರುವ ಅಭ್ಯರ್ಥಿಗಳು ಯಾವುದೇ ಮಧ್ಯವರ್ತಿಗಳು, ಏಜೆಂಟ್‌ಗಳು, ಅಧಿಕಾರಿ/ಸಿಬ್ಬಂದಿಗಳು ಅಥವಾ ಅನ್ಯವ್ಯಕ್ತಿಗಳ ಮುಖಾಂತರ ವಾಮಮಾರ್ಗದಲ್ಲಿ ಹಣಕಾಸು ನೀಡುವ ಮೂಲಕ ಆಯ್ಕೆ ಹೊಂದಲು ಪ್ರಯತ್ನಿಸಿದಲ್ಲಿ ಅಂತಹ ಅಭ್ಯರ್ಥಿಗಳ ವಿರುದ್ಧ ಕಠಿಣವಾದ ಕಾನೂನು ಕ್ರಮ ಕೈಗೊಳ್ಳಲಾಗುವುದು ಮತ್ತು ಅಂತಹ ಅಭ್ಯರ್ಥಿಗಳನ್ನು ಅನರ್ಹಗೊಳಿಸಲು ಕ್ರಮಕೈಗೊಳ್ಳಲಾಗುವುದು.

ಸೂಚನೆ: ನೇಮಕಾತಿಯು ಸಂಪೂರ್ಣವಾಗಿ ಅರ್ಹತೆ (ಮೆರಿಟ್) ಆಧಾರಿತವಾಗಿರುತ್ತದೆ.

ಸಹಿ/– ಮುಖ್ಯ ಆಡಳಿತಾಧಿಕಾರಿಗಳು

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ

(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)

ನಂ. 49, ಈಸ್ಟ್ ವಿಂಗ್, 4ನೇ ಮತ್ತು 5ನೇ ಮಹಡಿ, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು–560001.

website: www.kiadb.in, ಇ–ಮೇಲ್: cdoce1@kiadb.in or jdtp@kiadb.in

ನಂ. ಐಎಡಿಬಿ/ಜೆಡಿಟಿಪಿ/ಇಐಎ/ಇಟಿಎನ್‌ಡಿ–ಇಸಿ–21/3189/2024–25 ದಿನಾಂಕ:21–03–2025

ಪರಿಸರ ವಿಮೋಚನಾ ಪತ್ರ (ಎನ್‌ವಿರಾನ್‌ಮೆಂಟ್ ಕ್ಲಿಯರೆನ್ಸ್) ಪಡೆಯಲು ಸಲಹಾ ಸೇವೆಗಳನ್ನು ಒದಗಿಸಲು ಅಲ್ಪಾವಧಿ ಟೆಂಡರ್ ಆಹ್ವಾನ ಪ್ರಕಟಣೆ (ಜಿಓಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕೆಐಎಡಿಬಿಯು ಪರಿಸರ ಸಮಾಲೋಚಕರಿಂದ ಸಲಹಾ ಸೇವೆಗಳನ್ನು ಒದಗಿಸಲು ದ್ವಿಲಕೋಟೆ ಪದ್ಧತಿಯಲ್ಲಿ ಟೆಂಡರುಗಳನ್ನು ಅಹ್ವಾನಿಸಿದೆ. ಪರಿಸರ ಮತ್ತು ಅರಣ್ಯ ಸಚಿವಾಲಯ, ನವದೆಹಲಿ ಇದರ ಮಾನ್ಯತೆ ಪಡೆದ ಪಟ್ಟಿಯಲ್ಲಿ 7ಸಿ ವರ್ಗದಲ್ಲಿ ಸಲಹೆಗಾರರಾಗಿ ಹೆಸರು ಸೇರ್ಪಡೆಯಾಗಿರುವ ಸಂಸ್ಥೆಗಳು **NABET Accredited consultancy/MoU with NABET & NABL Accredited Consultant** ಟೆಂಡರ್‌ನಲ್ಲಿ ಭಾಗವಹಿಸಲು ಅರ್ಹರಾಗಿರುತ್ತಾರೆ.

ಕೇಂದ್ರ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯದಿಂದ (MoEF&CC) ಪರಿಸರ ವಿಮೋಚನಾ (EC) ಪತ್ರ ಮತ್ತು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ (ಕೆಎಸ್‌ಪಿಸಿಬಿ)ಯಿಂದ ಸ್ಥಾಪನೆ ಅನುಮತಿ ಪತ್ರ (CFE) ಪಡೆಯಲು ಹಾಗೂ 3 ವರ್ಷಗಳ ಅವಧಿಯವರೆಗೆ ಪರಿಸರ ವಿಮೋಚನಾ ಪತ್ರ ಮತ್ತು ಸ್ಥಾಪನೆ ಅನುಮತಿ ಪತ್ರಗಳಲ್ಲಿ ವಿಧಿಸುವ ನಿಬಂಧನೆಗಳಿಗೆ ಅರ್ಧವಾರ್ಷಿಕ ಅನುಸರಣಾ ವರದಿಯನ್ನು ತಯಾರಿಸಿ ಸಂಬಂಧಪಟ್ಟ ಪ್ರಾಧಿಕಾರಗಳಿಗೆ ಸಲ್ಲಿಸಲು, ಇಐಎ ವರದಿ, ಎಸ್‌ಐಎಸ್ ಅಧ್ಯಯನಗಳು ಇತ್ಯಾದಿಯನ್ನು ಸಿದ್ಧಪಡಿಸಲು.

ಕೆಲಸದ ಹೆಸರು : 1) ಬೆಂಗಳೂರು ನಗರ ಜಿಲ್ಲೆ, ಆನೇಕಲ್ ತಾಲ್ಲೂಕು, ಸರ್ಜಾಪುರ ಹೋಬಳಿ ಬಿ ಹೋಸಹಳ್ಳಿ ಎಸ್ ಮೇಡಹಳ್ಳಿ ಮತ್ತು ಅಡಿಗಾರ ಕಲ್ಲಹಳ್ಳಿ ಗ್ರಾಮಗಳಲ್ಲಿ ಅಭಿವೃದ್ಧಿಪಡಿಸುತ್ತಿರುವ ಸರ್ಜಾಪುರ ಕೈಗಾರಿಕಾ ಪ್ರದೇಶದ 1ನೇ ಹಂತ ಒಟ್ಟು 305.67ಎ ವಿಸ್ತೀರ್ಣಕ್ಕೆ ವಿಸ್ತೀರ್ಣಕ್ಕೆ. ಇ.ಎಂ.ಡಿ ರೂ.(ಲಕ್ಷಗಳಲ್ಲಿ) : 2.00. 2) ಬೆಂಗಳೂರು ನಗರ ಜಿಲ್ಲೆ, ಆನೇಕಲ್ ತಾಲ್ಲೂಕು, ಸರ್ಜಾಪುರ ಹೋಬಳಿ ಮುತ್ತನಲ್ಲೂರು ಅಮಾನೀಕೆರೆ, ಸೋಳ್ಳೆಪುರ, ಹಂದೇನಹಳ್ಳಿ, ಬಿಕ್ಕನಹಳ್ಳಿ, ಎಸ್ ಮೇಡಹಳ್ಳಿ, ಅಡಿಗಾರಕಲ್ಲಹಳ್ಳಿ ಗ್ರಾಮಗಳ ಸರ್ಜಾಪುರ ಕೈಗಾರಿಕಾ ಪ್ರದೇಶದ ಒಟ್ಟು 291.92ಎ ವಿಸ್ತೀರ್ಣಕ್ಕೆ. ಇ.ಎಂ.ಡಿ ರೂ.(ಲಕ್ಷಗಳಲ್ಲಿ) : 2.00. 3) ಬೆಂಗಳೂರು ನಗರ ಜಿಲ್ಲೆ, ಆನೇಕಲ್ ತಾಲ್ಲೂಕು, ಸರ್ಜಾಪುರ ಹೋಬಳಿ ಮುತ್ತನಲ್ಲೂರು ಅಮಾನೀಕೆರೆ ಸೋಳ್ಳೆಪುರ, ಹಂದೇನಹಳ್ಳಿ, ಬಿಕ್ಕನಹಳ್ಳಿ ಎಸ್ ಮೇಡಹಳ್ಳಿ, ಅಡಿಗಾರಕಲ್ಲಹಳ್ಳಿ ಗ್ರಾಮಗಳ ಸರ್ಜಾಪುರ ಕೈಗಾರಿಕಾ ಪ್ರದೇಶದ ಒಟ್ಟು 401.47ಎ ವಿಸ್ತೀರ್ಣಕ್ಕೆ. ಇ.ಎಂ.ಡಿ ರೂ.(ಲಕ್ಷಗಳಲ್ಲಿ) : 2.00.

ಟೆಂಡರ್ ದಿನಾಂಕಗಳು ಕೆಳಕಂಡಂತಿರುವುದು:

1. ಬಿಡ್ ಪೂರ್ವ ವಿಚಾರಣೆಗಳನ್ನು ಸ್ವೀಕರಿಸುವ ಕಡೆಯ ದಿನಾಂಕ: 27–03–2025 ರಂದು ಸಂಜೆ 4.00 ಘಂಟೆಯವರೆಗೆ.
2. ಬಿಡ್ ಪೂರ್ವ ಸಭೆ ನಡೆಯುವ ದಿನಾಂಕ: 28–03–2025 ರಂದು ಬೆಳಿಗ್ಗೆ 11.30 ಘಂಟೆಗೆ.
3. ಟೆಂಡರ್ ಸಲ್ಲಿಸುವ ಕಡೆಯ ದಿನಾಂಕ: 05–04–2025 ರಂದು ಮಧ್ಯಾಹ್ನ 3.00 ಘಂಟೆಯವರೆಗೆ.
4. ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: 07–04–2025 ರಂದು ಮಧ್ಯಾಹ್ನ 3.30 ಘಂಟೆ ನಂತರ.

ಅರ್ಜಿದಾರರು ಬಿಡ್ಡಿಂಗ್ ದಸ್ತಾವೇಜುಗಳನ್ನು ಕರ್ನಾಟಕ ಸರ್ಕಾರದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ https://kppp.karnataka.gov.in ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸಹಿ/–
ಮುಖ್ಯ ಅಭಿಯಂತರರು–1, ಕೆಐಎಡಿಬಿ, ಬೆಂಗಳೂರು

DIPR/CP/5864/Zen/2024-25

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ

ನಂ.49, “ಪರಿಸರ ಭವನ”, 1 ರಿಂದ 5ನೇ ಅಂತಸ್ತು, ಚರ್ಚ್ ಸ್ಟ್ರೀಟ್, ಬೆಂಗಳೂರು–560 001. ಕರ್ನಾಟಕ ರಾಜ್ಯ, ಭಾರತ.
ಫೋನ್: 25581383, 25589112, 25589113, ಫ್ಯಾಕ್ಸ್: 080–25586321
ಈ–ಮೇಲ್: ho@kspcb.gov.in ವೆಬ್‌ಸೈಟ್: https://kspcb.karnataka.gov.in

ಸಂಖ್ಯೆ: PCB 288 INFRA EPH 2024/4311 ದಿನಾಂಕ: 20/03/2025

ಪರಿಸರ ಸಾರ್ವಜನಿಕ ಸಭೆಗಾಗಿ ಅಧಿಸೂಚನೆ

ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿಯವರು ಧಾರವಾಡ ಜಿಲ್ಲೆಯ ಧಾರವಾಡ ತಾಲ್ಲೂಕಿನ ಸಿದ್ದಾಪುರ, ವೆಂಕಟಾಪುರ, ಹೊಸವಾಳ, ಗುಳೇದಕೊಪ್ಪ ಮತ್ತು ಮದಿಕೊಪ್ಪ ಗ್ರಾಮಗಳ ಒಟ್ಟು 410.36 ಹೆಕ್ಟೇರ್ (1014 ಎಕರೆ) ಪ್ರದೇಶದಲ್ಲಿ ಬಹು ಮಾದರಿ ಲಾಜಿಸ್ಟಿಕ್ಸ್ ಪಾರ್ಕ್ (ಬಿಎಂಐಸಿ ಧಾರವಾಡ ಕೈಗಾರಿಕಾ ನೋಡ್–3 ಕೈಗಾರಿಕಾ ಪ್ರದೇಶ) ಅಭಿವೃದ್ಧಿ ಪಡಿಸಲು ಉದ್ದೇಶಿಸಿರುತ್ತಾರೆ. ಈ ಪ್ರಸ್ತಾಪಿತ ಯೋಜನೆಗೆ ಪರಿಸರ ಅಘಾತ ಅಧ್ಯಯನ ಅಧಿಸೂಚನೆ ದಿನಾಂಕ 14.09.2006ರ ಪ್ರಕಾರ ಪರಿಸರ ವಿಮೋಚನಾ ಪತ್ರವನ್ನು ಪಡೆಯಬೇಕಾಗಿರುತ್ತದೆ ಮತ್ತು ಅದರ ಅಂಗವಾಗಿ ಸಾರ್ವಜನಿಕ ಪರಿಸರ ಆಲಿಕೆ ಸಭೆಯನ್ನು ನಡೆಸಬೇಕಾಗಿರುತ್ತದೆ. ಅದರಂತೆ ರಾಜ್ಯ ಮಟ್ಟದ ಪರಿಸರ ಅಘಾತ ಅಂದಾಜೀಕರಣ ಪ್ರಾಧಿಕಾರ, ಕರ್ನಾಟಕ ಇವರಿಂದ ಉಲ್ಲೇಖದ ನಿಯಮಗಳ (Terms of Reference, TOR) ಪತ್ರ ದಿನಾಂಕ: 22.01.2025 ಕಡತ ಸಂಖ್ಯೆ : SEIAA 05 IND 2025, ಪ್ರಸ್ತಾವನೆ ಸಂಖ್ಯೆ : SIA/KA/INFRA1/518314/2025 dated 21.01.2025 and TOR Identification No: TO25B3102KA5445817N ರಂತೆ ನೀಡಿರುತ್ತಾರೆ ಮತ್ತು ಪ್ರವರ್ತಕರ ಪತ್ರ ಸಂಖ್ಯೆ. KIADB/EE/DWD/EIA/Node-03/2282/2024-25/, ದಿನಾಂಕ 27.01.2025 (5.2.2025) ರ ಕೋರಿಕೆಯಂತೆ ಹಾಗೂ ಪರಿಸರ ಅಧಿಕಾರಿ, ಪ್ರಾದೇಶಿಕ ಕಛೇರಿ–ಧಾರವಾಡ ರವರ ಪತ್ರ ಸಂಖ್ಯೆ: ಮಾನಿಮಂ/ಪ್ರಾ.ಕ.(ಧಾರವಾಡ)/ಪಸಾಸ/2024–2025/2484, ದಿನಾಂಕ: 07.03.2025 ರಲ್ಲಿ ತಿಳಿಸಿರುವಂತೆ ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ಮಾನ್ಯ ಜಿಲ್ಲಾಧಿಕಾರಿಗಳು, ಧಾರವಾಡ ಜಿಲ್ಲೆ ರವರು **ದಿನಾಂಕ: 24.04.2025 ರಂದು ಅಪರಾಹ್ನ 04.00 ಗಂಟೆಗೆ** ನಿಗಧಿಪಡಿಸಿರುತ್ತಾರೆ. ಸದರಿ ಪರಿಸರ ಸಾರ್ವಜನಿಕ ಆಲಿಕೆ ಸಭೆಯ ವಿವರಗಳು ಈ ಕೆಳಕಂಡಂತಿವೆ.

1. **ಸಂಸ್ಥೆಯ ಹೆಸರು ಮತ್ತು ವಿಳಾಸ:** ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿ ವಲಯ ಕಛೇರಿ, ಲಕ್ಕಮನಹಳ್ಳಿ ಕೈಗಾರಿಕಾ ಪ್ರದೇಶ, ಪಿ.ಬಿ. ರಸ್ತೆ, ಧಾರವಾಡ –580004.
2. **ಉದ್ದೇಶಿತ ಯೋಜನೆಯ ಸ್ಥಳ:** ಸಿದ್ದಾಪುರ, ವೆಂಕಟಾಪುರ, ಹೊಸವಾಳ, ಗುಳೇದಕೊಪ್ಪ ಮತ್ತು ಮದಿಕೊಪ್ಪ ಗ್ರಾಮಗಳ ಒಟ್ಟು 410.3 ಹೆಕ್ಟೇರ್ (1014.0 ಎಕರೆ) ಪ್ರದೇಶದಲ್ಲಿ ಕೈಗಾರಿಕ ಪ್ರದೇಶ (ಬಿಎಂಐಸಿ ಧಾರವಾಡ ಕೈಗಾರಿಕಾ ವಿನ್ಯಾಸದ ಅಭಿವೃದ್ಧಿ ನೋಡ್–3)
3. **ಯೋಜನೆಯ ಕಾರ್ಯಚಟುವಟಿಕೆ:** ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿರವರು ಸಿದ್ದಾಪುರ, ವೆಂಕಟಾಪುರ, ಹೊಸವಾಳ, ಗುಳೇದಕೊಪ್ಪ ಮದಿಕೊಪ್ಪ ಗ್ರಾಮಗಳಲ್ಲಿ 410.3 ಹೆಕ್ಟೇರ್ (1014.0 ಎಕರೆ) ಪ್ರದೇಶದಲ್ಲಿ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಪಡಿಸುವ ಕುರಿತು (ಬಿಎಂಐಸಿ ಧಾರವಾಡ ಕೈಗಾರಿಕಾ ವಿನ್ಯಾಸದ ಅಭಿವೃದ್ಧಿ ನೋಡ್–3)
4. **ಪರಿಸರ ಸಾರ್ವಜನಿಕ ಸಭೆಯ ಸ್ಥಳ, ದಿನಾಂಕ ಮತ್ತು ಸಮಯ: 24ನೇ ಏಪ್ರಿಲ್ 2025 ರಂದು ಗುರುವಾರ ದಂದು ಅಪರಾಹ್ನ 04.00 ಗಂಟೆಗೆ ಮದಿಕೊಪ್ಪ ಗ್ರಾಮದ ಸರ್ವೆ ನಂ:49, ಹೊಸವಾಳ ಹತ್ತಿರ, ಧಾರವಾಡ ತಾಲ್ಲೂಕು ಮತ್ತು ಜಿಲ್ಲೆ**
5. **ಯೋಜನೆಯ ವೆಚ್ಚ:** ರೂ. 855.36 ಕೋಟಿ (ಯೋಜನಾ ಮೊತ್ತ),
6. **ಪರಿಸರ ಸಾರ್ವಜನಿಕ ಕಾರ್ಯಕಾರಿ ಸಾರಾಂಶ ಸಾರ್ವಜನಿಕ ಪರಾಮರ್ಶೆಗೆ ಲಭ್ಯವಿರುವ ಸ್ಥಳ:** ಅ) ಜಿಲ್ಲಾಧಿಕಾರಿಗಳ ಕಛೇರಿ, ಬಳ್ಳಾರಿ ಜಿಲ್ಲೆ, ಬಳ್ಳಾರಿ. ಆ) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಕಛೇರಿ, ಜಿಲ್ಲಾ ಪಂಚಾಯತ್, ಬಳ್ಳಾರಿ ಜಿಲ್ಲೆ, ಬಳ್ಳಾರಿ. ಇ) ಜಿಲ್ಲಾ ಕೈಗಾರಿಕಾ ಕೇಂದ್ರ, ಬಳ್ಳಾರಿ ಜಿಲ್ಲೆ, ಬಳ್ಳಾರಿ. ಈ) ತಹಶೀಲ್ದಾರರ ಕಾರ್ಯಾಲಯ, ಸಂಡೂರು ತಾಲ್ಲೂಕು, ಬಳ್ಳಾರಿ ಜಿಲ್ಲೆ. ಉ) ಗ್ರಾಮ ಪಂಚಾಯತ್ ಕಾರ್ಯಾಲಯ, ಸುಶೀಲನಗರ ಗ್ರಾಮ ಪಂಚಾಯತ್, ಸಂಡೂರು ತಾಲ್ಲೂಕು. ಊ) ಪ್ರಾದೇಶಿಕ ಕಛೇರಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಬಳ್ಳಾರಿ. ಋ) ಕೇಂದ್ರ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯ, ದಕ್ಷಿಣ ವಲಯ ಕಛೇರಿ,ಇ–3/240, ಕೇಂದ್ರೀಯ ಸದನ, 4ನೇ ಮಹಡಿ, ಇ ಮತ್ತು ಎಫ್ ವಿಂಗ್, 17ನೇ ಮುಖ್ಯರಸ್ತೆ, 2ನೇ ಬ್ಲಾಕ್, ಕೋರಮಂಗಲ, ಬೆಂಗಳೂರು–560 034. ಎ) **ಸಹಾಯ ಕೇಂದ್ರ,** ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, “ಪರಿಸರ ಭವನ”, ನೆಲ ಮಹಡಿ, ನಂ. 49, ಚರ್ಚ್ ಸ್ಟ್ರೀಟ್, ಬೆಂಗಳೂರು–560001.

ಸೂಚನೆ: ಯೋಜನಾ ಸ್ಥಳದಲ್ಲಿ ವಾಸವಾಗಿರುವ ಆಸಕ್ತ ನಿವಾಸಿಗಳು, ಪರಿಸರಾಸಕ್ತ ಗುಂಪುಗಳು ಮತ್ತು ಈ ಯೋಜನೆಯಿಂದ ತೊಂದರೆಗೊಳಗಾಗಬಹುದಾದ ಸಾರ್ವಜನಿಕರು ತಮ್ಮ ಸಲಹೆಗಳು, ಅನಿಸಿಕೆಗಳು, ಟೀಕೆಟಿಪ್ಪಣಿಗಳು ಹಾಗು ಅಹವಾಲುಗಳನ್ನು ಮೌಖಿಕ/ಲಿಖಿತ/ಮಿಂಚಂಚೆ ಮುಖಾಂತರ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ/ಅಧ್ಯಕ್ಷರು, ಸಾರ್ವಜನಿಕ ಪರಿಸರ ಸಮಿತಿ **(ಜಿಲ್ಲಾಧಿಕಾರಿಗಳು, ಧಾರವಾಡ ಜಿಲ್ಲೆ)** ಇವರಿಗೆ ಈ ಅಧಿಸೂಚನೆ ಪ್ರಕಟವಾದ 30 ದಿನಗಳ ಒಳಗೆ ಸಲ್ಲಿಸತಕ್ಕದ್ದು. ಇಚ್ಛೆಯುಳ್ಳ ಸಾರ್ವಜನಿಕರು ಮೇಲೆ ತಿಳಿಸಿರುವ ದಿನದಂದು ಪರಿಸರ ಸಾರ್ವಜನಿಕ ಸಭೆಯಲ್ಲಿ ಪಾಲ್ಗೊಳ್ಳಬಹುದಾಗಿದೆ. **ಹೆಚ್ಚಿನ ವಿವರಗಳನ್ನು ಮಂಡಳಿಯ ಜಾಲತಾಣ:** https://kspcb.karnataka.gov.in ನಲ್ಲಿ ಪಡೆಯಬಹುದು.

ಸಹಿ/–
ಸದಸ್ಯ ಕಾರ್ಯದರ್ಶಿ

ನಮ್ಮೆಲ್ಲರ ಚಿತ್ತ, ನೈಸರ್ಗಿಕ ಸಂಪನ್ಮೂಲಗಳ ಮಿತ ಬಳಕೆಯತ್ತ: ತ್ಯಾಜ್ಯ ಉತ್ಪಾದನೆಯನ್ನು ತಗ್ಗಿಸಿ.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಸುಭಾಷಿತ

ಮಗುವಿನಲ್ಲಿ ಸಂತೋಷ ಹಾಗೂ ಶೀಲ ವೃದ್ಧಿಸುವಂತೆ ಮಾಡುವುದೇ ಶಿಕ್ಷಣ.

-ಅರವಿಂದ ಘೋಷ್

ಭೂಮಿಗೆ ಮರಳಿದ ಸುನಿತಾ ನಿಜಕ್ಕೂ ಸಂಭ್ರಮಿಸಬೇಕಾದ ಹೊತ್ತು

ಅಮೆರಿಕದ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯಾದ 'ನಾಸಾ'ದ ಗಗನಯಾತ್ರಿಗಳಾದ ಸುನಿತಾ ವಿಲಿಯಮ್ಸ್ ಮತ್ತು ಬುಚ್ ವಿಲ್ಮೋರ್ ಅವರು ಭೂಮಿಗೆ ಸುರಕ್ಷಿತವಾಗಿ ಮರಳಿರುವುದು ಸಂಭ್ರಮಿಸಬೇಕಾದ ಸಂಗತಿ. ಹಲವು ತಾಂತ್ರಿಕ ಅಡಚಣೆಗಳ ಕಾರಣದಿಂದಾಗಿ ಇವರಿಬ್ಬರೂ ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣದಲ್ಲಿ (ಐಎಸ್‌ಎಸ್) ಒಂಬತ್ತು ತಿಂಗಳು ಸಿಲುಕಿದ್ದರು. ಇವರನ್ನು ಹಾಗೂ ಇನ್ನೂ ಇಬ್ಬರು ಗಗನಯಾತ್ರಿಗಳನ್ನು ಹೊತ್ತಿದ್ದ ಬಾಹ್ಯಾಕಾಶ ಕೋಶವು (ಕ್ಯಾಪ್ಸೂಲ್) ಅಮೆರಿಕದ ಫ್ಲಾರಿಡಾ ರಾಜ್ಯದ ಕಡಲ ತೀರದ ಸನಿಹದಲ್ಲಿ ಜಲಸ್ಪರ್ಶ ಮಾಡಿರುವುದು ಸುದೀರ್ಘ ಅವಧಿಯಿಂದ ಮನೆಮಾಡಿದ್ದ ಅನಿಶ್ಚಿತತೆಯೊಂದನ್ನು ಕೊನೆಗೊಳಿಸಿದೆ. ಈ ಅನಿಶ್ಚಿತತೆಯ ಅವಧಿಯು ವಿಶ್ವದ ಮುಂಚೂಣಿ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯ ಸಾಮರ್ಥ್ಯವನ್ನು ಪರೀಕ್ಷೆಗೆ ಒಳಪಡಿಸಿತ್ತು, ಅನಿರೀಕ್ಷಿತ ಸಂದರ್ಭವನ್ನು ನಿರ್ವಹಿಸುವ ಸಾಮರ್ಥ್ಯ ತನಗೆ ಇದೆ ಎಂಬುದನ್ನು ಸಾಬೀತು ಮಾಡಲು ಅದಕ್ಕೆ ಅವಕಾಶ ಒದಗಿಸಿತು. ಬೋಯಿಂಗ್ ಸ್ಟಾರ್‌ಲೈನರ್ ಗಗನಯಾತ್ರಿಗಳನ್ನು ಹೊತ್ತು 2024ರ ಜೂನ್‌ನಲ್ಲಿ ಐಎಸ್‌ಎಸ್ ಕಡೆ ಹಾರಿತ್ತು. ಸುನಿತಾ ಮತ್ತು ವಿಲ್ಮೋರ್ ಅವರು ಐಎಸ್‌ಎಸ್‌ನಲ್ಲಿ ಎಂಟು ದಿನ ಇರುವ ಯೋಜನೆ ಹೊಂದಿದ್ದರು. ಆದರೆ ಅವರಿಬ್ಬರನ್ನು ವಾಪಸ್ ಕರೆತರಬೇಕಿದ್ದ ಬಾಹ್ಯಾಕಾಶ ಕೋಶದಲ್ಲಿನ ತಾಂತ್ರಿಕ ಸಮಸ್ಯೆಗಳು ಹಾಗೂ ಅದರಿಂದ ಸೃಷ್ಟಿಯಾದ ಸುರಕ್ಷತೆಗೆ ಸಂಬಂಧಿಸಿದ ಆತಂಕದ ಕಾರಣದಿಂದಾಗಿ ಇಬ್ಬರೂ ಐಎಸ್‌ಎಸ್‌ನಲ್ಲಿ ಹೆಚ್ಚಿನ ಅವಧಿಗೆ ಉಳಿಯಬೇಕಾಯಿತು. ಇದು ಬಾಹ್ಯಾಕಾಶ ಯಾನಗಳು ಒಡ್ಡುವ ಅಪಾಯಗಳನ್ನು ಹೇಳುವಂತೆ ಇದೆ. ಬಾಹ್ಯಾಕಾಶ ಯಾನಗಳ ಸಂದರ್ಭದಲ್ಲಿ ಗಗನಯಾತ್ರಿಗಳು ಪ್ರಾಣ ಕಳೆದುಕೊಂಡ ನಿದರ್ಶನಗಳು ಇವೆ, ಕೆಲವು ಅನಿರೀಕ್ಷಿತ ಸವಾಲುಗಳು ಎದುರಾದ ಉದಾಹರಣೆಗಳೂ ಇವೆ. ಮುನ್ನೆಚ್ಚರಿಕೆಯ ಕ್ರಮವಾಗಿ ಕೈಗೊಂಡ ಕೆಲವು ತೀರ್ಮಾನಗಳು ಅಪಘಾತಗಳನ್ನು ತಡೆದಿರುವ ಉದಾಹರಣೆಗಳು ಕೂಡ ಇವೆ. ಸುನಿತಾ ಮತ್ತು ವಿಲ್ಮೋರ್ ಅವರನ್ನು ಐಎಸ್‌ಎಸ್‌ನಿಂದ ವಾಪಸ್ ಕರೆತರಲು ಮತ್ತೆ ಮತ್ತೆ ನಡೆಸಿದ ಯತ್ನಗಳು ಯಶಸ್ಸು ಕಾಣದೇ ಇದ್ದುದು ಕೂಡ ಅವರ ಯಾನದ ಬಗ್ಗೆ ಇಡೀ ಜಗತ್ತಿನ ಗಮನ ಹರಿಯಲು ಕಾರಣವಾಯಿತು.

ಸುನಿತಾ ಮತ್ತು ವಿಲ್ಮೋರ್ ಅವರ ಮೇಲೆ ನಡೆಸಿರುವ ವೈದ್ಯಕೀಯ ಪರೀಕ್ಷೆಗಳು ಬಾಹ್ಯಾಕಾಶ ನಿಲ್ದಾಣದಲ್ಲಿನ ಪರಿಸ್ಥಿತಿಯ ಬಗ್ಗೆ ಇನ್ನಷ್ಟು ಹೆಚ್ಚು ತಿಳಿದುಕೊಳ್ಳಲು ನೆರವಾಗಬಹುದು

ಸ್ಪೇಸ್‌ಎಕ್ಸ್‌ನ 'ಡ್ರ್ಯಾಗನ್' ಬಾಹ್ಯಾಕಾಶ ಕೋಶದಲ್ಲಿ ಗಗನಯಾತ್ರಿಗಳು ಮರಳಿ ಬಂದಿರುವುದನ್ನು ಬಾಹ್ಯಾಕಾಶ ವಿಜ್ಞಾನ ಕುತೂಹಲಿಗರು ಎಲ್ಲೆಡೆ ಸಂಭ್ರಮಿಸಿದ್ದಾರೆ. ಇಡೀ ಜಗತ್ತು ಹಲವು ಕಾರಣಗಳಿಂದಾಗಿ ಈ ಗಗನಯಾತ್ರಿಗಳ ಕಡೆ ದೃಷ್ಟಿ ಹಾಯಿಸಿತ್ತು. ಅವರನ್ನು ವಾಪಸ್ ಕರೆತರುವಲ್ಲಿ ಎದುರಾದ ತಾಂತ್ರಿಕ ಸಮಸ್ಯೆಗಳು ವ್ಯಾಪಕವಾಗಿ ಚರ್ಚೆಗೊಳಗಾದವು. ಐಎಸ್‌ಎಸ್ ಮತ್ತು ಭೂಮಿಯ ನಡುವಿನ ಸಂವಹನಕ್ಕೆ ಧಕ್ಕೆ ಆಗಿಲ್ಲದಿದ್ದರೂ ಗಗನ ಯಾತ್ರಿಗಳ ಮಾನಸಿಕ ಮತ್ತು ದೈಹಿಕ ಆರೋಗ್ಯದ ಬಗ್ಗೆ ಕಳವಳ ಮೂಡಿತ್ತು. ಸುನಿತಾ ಅವರು ಭಾರತ ಮೂಲದವರಾದ ಕಾರಣಕ್ಕೆ ಪರಿಸ್ಥಿತಿಯ ಬಗ್ಗೆ ಭಾರತವು ವಿಶೇಷವಾಗಿ ಗಮನ ಹರಿಸಿತ್ತು. ಪ್ರಧಾನಿ ನರೇಂದ್ರ ಮೋದಿ ಅವರು ಸುನಿತಾ ಮತ್ತು ವಿಲ್ಮೋರ್ ಅವರು ಸುರಕ್ಷಿತವಾಗಿ ಮರಳಿದ ಸಂದರ್ಭದಲ್ಲಿ 'ಭೂಮಿಗೆ ಸ್ವಾಗತ' ಎಂದು ಅಭಿನಂದಿಸಿದ್ದಾರೆ. ಅಲ್ಲದೆ, ಅವರು ಐಎಸ್‌ಎಸ್‌ನಲ್ಲಿ ದೀರ್ಘಕಾಲ ಉಳಿದುಕೊಂಡಿದ್ದ ಅವಧಿಯನ್ನು ಮೋದಿ ಅವರು 'ವ್ಯಕ್ತಿತ್ವದ ತಾಕತ್ತು, ಧೈರ್ಯ ಮತ್ತು ಮನುಷ್ಯನ ಅಸೀಮ ಉತ್ಸಾಹಕ್ಕೆ ಎದುರಾಗಿದ್ದ ಪರೀಕ್ಷೆ' ಎಂದು ಬಣ್ಣಿಸಿದ್ದಾರೆ. ಸುನಿತಾ ಅವರನ್ನು ಪ್ರಧಾನಿಯವರು ಭಾರತಕ್ಕೆ ಆಹ್ವಾನಿಸಿದ್ದಾರೆ.

ಬಾಹ್ಯಾಕಾಶದಲ್ಲಿ ಅತಿಹೆಚ್ಚಿನ ಅವಧಿಯನ್ನು ಕಳೆದ ಅಮೆರಿಕದ ಗಗನಯಾತ್ರಿಗಳ ಪೈಕಿ ಸುನಿತಾ ಅವರು ಎರಡನೆಯ ಸ್ಥಾನದಲ್ಲಿದ್ದಾರೆ. ಮೂರು ಬಾರಿ ಐಎಸ್‌ಎಸ್‌ಗೆ ಭೇಟಿ ನೀಡಿರುವ ಸುನಿತಾ ಅವರು ಒಟ್ಟು 608 ದಿನಗಳನ್ನು ಬಾಹ್ಯಾಕಾಶದಲ್ಲಿ ಕಳೆದಿದ್ದಾರೆ. ಗಗನಯಾತ್ರಿಗಳು ಈಗ ಸುರಕ್ಷಿತವಾಗಿ ಮರಳಿ ಬಂದಿದ್ದಾರಾದರೂ ಅವರು ದೈಹಿಕವಾಗಿ ಸಂಪೂರ್ಣವಾಗಿ ಸುಧಾರಿಸಿಕೊಳ್ಳುವುದಕ್ಕೆ ಇನ್ನೂ ಬಹಳ ಕಾಲ ಬೇಕಾಗುತ್ತದೆ. ಬಹುಶಃ ಅದಕ್ಕೆ ತಿಂಗಳುಗಳೇ ಬೇಕಾಗಬಹುದು. ಬಾಹ್ಯಾಕಾಶದಲ್ಲಿ ಬಹಳ ಕಾಲ ವಾಸ ಮಾಡಿದ್ದರಿಂದ ಅವರ ಮೇಲೆ ಆಗಿರಬಹುದಾದ ಪರಿಣಾಮಗಳನ್ನು ತಿಳಿದುಕೊಳ್ಳುವ ಉದ್ದೇಶದಿಂದ ಅವರನ್ನು ಹಲವು ವೈದ್ಯಕೀಯ ಪರೀಕ್ಷೆಗಳಿಗೆ ಗುರಿಪಡಿಸಲಾಗಿದೆ. ಈ ವೈದ್ಯಕೀಯ ಪರೀಕ್ಷೆಗಳು ಬಾಹ್ಯಾಕಾಶ ನಿಲ್ದಾಣದಲ್ಲಿನ ಪರಿಸ್ಥಿತಿಯ ಬಗ್ಗೆ ಇನ್ನಷ್ಟು ಹೆಚ್ಚು ತಿಳಿದುಕೊಳ್ಳಲು, ಮುಂದೆ ಇಂಥದ್ದೇ ಪರಿಸ್ಥಿತಿ ಸೃಷ್ಟಿಯಾದಲ್ಲಿ ಅದಕ್ಕೆ ಅಗತ್ಯವಾದ ಪರಿಹಾರ ಕ್ರಮಗಳನ್ನು ಕೈಗೊಳ್ಳಲು ನೆರವಾಗಬಹುದು. ಈಗ ಐಎಸ್‌ಎಸ್‌ನಲ್ಲಿ ಬೇರೆ ಬೇರೆ ದೇಶಗಳ ಸಿಬ್ಬಂದಿ ಆರು ತಿಂಗಳ ಅವಧಿಗೆ ಕರ್ತವ್ಯ ನಿರ್ವಹಿಸಲಿದ್ದಾರೆ. ಐಎಸ್‌ಎಸ್‌ನಲ್ಲಿನ ಚಟುವಟಿಕೆಗಳು ಅಂತರರಾಷ್ಟ್ರೀಯ ಮಟ್ಟದಲ್ಲಿನ ಸಹಕಾರದ ದ್ಯೋತಕವೂ ಹೌದು. ಗಗನಯಾತ್ರಿಗಳು ಸುರಕ್ಷಿತವಾಗಿ ಭೂಮಿಗೆ ಮರಳಿದ ಸಂದರ್ಭದಲ್ಲಿ ಒಂದಿಷ್ಟು ರಾಜಕೀಯ ಮಾತುಗಳು ಕೂಡ ಬಂದವು. ಗಗನಯಾತ್ರಿಗಳು ಐಎಸ್‌ಎಸ್‌ನಲ್ಲಿ ಬಹುಕಾಲ ಉಳಿಯುವಂತೆ ಆಗಿದ್ದಕ್ಕೆ ಕಾರಣ ಯಾರು ಎಂಬುದಕ್ಕೆ ಸಂಬಂಧಿಸಿದ, ಅಷ್ಟೇನೂ ವಿಶೇಷವಲ್ಲದ ಆರೋಪ, ಪ್ರತ್ಯಾರೋಪಗಳು ಅವು.

ದಿನದ ಟ್ವೀಟ್

ಸಮಸ್ಯೆ ಪರಿಹಾರಕ್ಕೆ ಬೇಕಾಗಿರುವುದೇನು?

ಇಂಥ ಸಮಸ್ಯೆಗಳನ್ನು ಬಗೆಹರಿಸಲು ಬಿಬಿಎಂಪಿಗೆ ಪೂರ್ಣಾವಧಿಯ ಮೇಯರ್, ಸಬಲ ವಾರ್ಡ್ ಸಮಿತಿಗಳು, ಆರ್ಥಿಕ ಸಂಪನ್ಮೂಲ, ಹೊಣೆಗಾರಿಕೆ ಹಾಗೂ ಕಾರ್ಯರೂಪಕ್ಕೆ ತರುವ ಸಿಬ್ಬಂದಿಯ ಅಗತ್ಯ ಇದೆ. ಗ್ರೇಟರ್ ಬೆಂಗಳೂರು ಆಡಳಿತ ಮಸೂದೆಯು ಈ ಸಮಸ್ಯೆಗಳನ್ನು ಬಗೆಹರಿಸದು!

(ಬೆಂಗಳೂರಿನ ರಸ್ತೆಗಳು ಹದಗೆಟ್ಟಿವೆ ಎಂಬ ನೆಟ್ಟಿಗರ ಆಕ್ರೋಶಕ್ಕೆ ಪ್ರತಿಕ್ರಿಯೆ)

ಎ.ಕೃಷ್ಣ ಪ್ರಶಾಂತ್, ಡೇಟಾ ಸೈಂಟಿಸ್ಟ್

ಕಿಡಿನುಡಿ

ಈ ವ್ಯಕ್ತಿಗಳು ಮಾನಸಿಕವಾಗಿ ಅತ್ಯಂತ ದುರ್ಬಲರಾಗಿದ್ದು, ವಿವೇಚನೆಯ ಕೊರತೆಯಿಂದ ಟ್ರ್ಯಾಪ್‌ಗೆ ಒಳಗಾಗಿದ್ದಾರೆಯೇ? ದುಃಖಕರ. ಇದಕ್ಕೆ ಪಕ್ಷಭೇದ ಇಲ್ಲ. ಇವರನ್ನು ಚುನಾಯಿಸಿದ ನಾವು ಈಗ ತಮಾಷೆಯ ವಸ್ತುವಾಗಿದ್ದೇವೆ.

(ರಾಜ್ಯ ರಾಜಕಾರಣದಲ್ಲಿ ಕೇಳಿಬಂದಿರುವ ಹನಿಟ್ರ್ಯಾಪ್ ಪ್ರಕರಣಗಳ ಬಗ್ಗೆ ಪ್ರತಿಕ್ರಿಯೆ)

ಗೌರೇಶ್ ಮೆಹ್ರಾ

25 ವರ್ಷಗಳ ಹಿಂದೆ

ಬುಧವಾರ, 22-3-2000

● **ಐತಿಹಾಸಿಕ ಒಪ್ಪಂದಕ್ಕೆ ಸಹಿ ಹೊಸ ಶಕೆಗೆ ನಾಂದಿ**

ನವದೆಹಲಿ, ಮಾರ್ಚ್ 21– ಭಾರತ ಮತ್ತು ಅಮೆರಿಕ ಇಂದು ಪರಸ್ಪರ ಸಹಕಾರ ಕುರಿತ ಐತಿಹಾಸಿಕ ಒಪ್ಪಂದವೊಂದಕ್ಕೆ ಸಹಿ ಹಾಕುವ ಮೂಲಕ ಉಭಯ ರಾಷ್ಟ್ರಗಳು ಇಪ್ಪತ್ತೊಂದನೇ ಶತಮಾನದ ಆರಂಭದಲ್ಲಿ ಹೊಸ ಶಕೆಗೆ ನಾಂದಿ ಹಾಡಿದವು.

ಭಯೋತ್ಪಾದನೆ ನಿಗ್ರಹ, ಅಣ್ವಸ್ತ್ರ ಬಳಕೆ ತಡೆ, ವಿಶ್ವಸಂಸ್ಥೆ ಮತ್ತು ಅದರ ಶಾಂತಿ ಪ್ರಯತ್ನಗಳನ್ನು ಬೆಂಬಲಿಸುವ ಮೂಲಕ ಅಂತರರಾಷ್ಟ್ರೀಯ ಭದ್ರತೆಯ ಬಲಪಡಿಸುವಿಕೆ ಮತ್ತು ದಕ್ಷಿಣ ಏಷ್ಯಾದಲ್ಲಿ ಪ್ರಕ್ಷುಬ್ಧ ವಾತಾವರಣವನ್ನು ನಿವಾರಿಸಲು ಪರಸ್ಪರ ಮಾತುಕತೆ ನಡೆಸಲು ಒಪ್ಪಲಾಗಿದೆ.

● **'ಪವಿತ್ರ ಸ್ಥಳ ರಕ್ಷಣೆಗೆ ಕೃತಜ್ಞತೆ' ರಾಷ್ಟ್ರಪಿತನಿಗೆ ಕ್ಲಿಂಟನ್ ನಮನ**

ನವದೆಹಲಿ, ಮಾರ್ಚ್ 21– 'ಈ ಪವಿತ್ರ ಸ್ಥಳವನ್ನು ಕಾಯ್ದುಕೊಂಡು ಬಂದಿರುವುದಕ್ಕೆ ನನ್ನ ಕೃತಜ್ಞತೆಗಳು.' ಇದು ಅಮೆರಿಕದ ಅಧ್ಯಕ್ಷ ಬಿಲ್ ಕ್ಲಿಂಟನ್ ಅವರು ರಾಜ್‌ಘಾಟ್‌ನ ಸಂದರ್ಶಕರ ಪುಸ್ತಕದಲ್ಲಿ ರಾಷ್ಟ್ರಪಿತನಿಗೆ ದಾಖಲಿಸಿದ ಗೌರವಾರ್ಪಣೆ. ಬಿಲ್ ಕ್ಲಿಂಟನ್ ಅವರು ತಮ್ಮ ಪುತ್ರಿ ಚೆಲ್ಸಿ ಜತೆಗೆ ಇಂದು ರಾಜ್‌ಘಾಟ್‌ಗೆ ತೆರಳಿ ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ಅವರಿಗೆ ತಮ್ಮ ನಮನ ಸಲ್ಲಿಸಿದರು.

50 ವರ್ಷಗಳ ಹಿಂದೆ

ಶನಿವಾರ, 22-3-1975

● **ವಿದ್ಯಾರ್ಥಿಗಳ ಚಳವಳಿ ವಿಧಾನದ ವಿರುದ್ಧ ದೃಢ ಕ್ರಮ**

ನವದೆಹಲಿ, ಮಾರ್ಚ್ 21– ಚುನಾಯಿತ ಸರ್ಕಾರಗಳ ಪದಚ್ಯುತಿ ಅಥವಾ ವಿಧಾನ ಸಭೆಗಳ ವಿಸರ್ಜನೆಗಾಗಿ ವಿದ್ಯಾರ್ಥಿಗಳ ಸಂಘಸಂಸ್ಥೆಗಳು ವಿಧಾಯಕವಲ್ಲದ ಇತರ ಮಾರ್ಗಗಳನ್ನು ಹೆಚ್ಚುಹೆಚ್ಚಾಗಿ ಬಳಸುತ್ತಿರುವುದರ ವಿರುದ್ಧ ದೃಢವಾಗಿ ಕ್ರಮ ತೆಗೆದುಕೊಳ್ಳಬೇಕೆಂದು ಗೃಹ ಸಚಿವ ಕೆ. ಬ್ರಹ್ಮಾನಂದ ರೆಡ್ಡಿ ಅವರು ಪೊಲೀಸ್ ದಳಗಳಿಗೆ ಇಂದು ಕರೆ ಕೊಟ್ಟರು.

ಐ.ಜಿ.ಪಿ.ಗಳ ಸಮ್ಮೇಳನ ಉದ್ಘಾಟಿಸಿದ ಅವರು, ಭ್ರಷ್ಟಾಚಾರ ಮೂಲೋತ್ಪಾಟನೆಯಂತಹ ಶ್ಲಾಘನೀಯ ಉದ್ದೇಶಗಳಿಗಾಗಿ ಪ್ರಾರಂಭವಾದ ಇಂತಹ ಚಳವಳಿಗಳು ಬಹಳ ಬೇಗ ಪ್ರಜಾತಂತ್ರ ಬುಡಮೇಲುಗೊಳಿಸಬಯಸುವ ರಾಜಕೀಯ ಶಕ್ತಿಗಳ ಹತೋಟಿಗೆ ಬೀಳುತ್ತವೆ ಎಂದರು.

● **ಹೇಮಾವತಿ: ಜೂನ್‌ನಲ್ಲಿ ಸಮೀಕ್ಷೆ ಅಂತ್ಯ**

ಬೆಂಗಳೂರು, ಮಾರ್ಚ್ 21– ಹೇಮಾವತಿ ನದಿಯಿಂದ ತುಮಕೂರು ಜಿಲ್ಲೆಗೆ ನೀರನ್ನು ಒದಗಿಸುವ ಬಗ್ಗೆ ನಡೆಸಲಾಗುತ್ತಿರುವ ಸಮೀಕ್ಷೆಯನ್ನು ಜೂನ್ ವೇಳೆಗೆ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ ಎಂದು ಕಂದಾಯ ಸಚಿವ ಎನ್. ಹುಚ್ಚಮಾಸ್ತಿ ಗೌಡ ವಿಧಾನ ಪರಿಷತ್ತಿನಲ್ಲಿ ತಿಳಿಸಿದರು.

ಈ ಯೋಜನೆ ಪ್ರಕಾರ ತುಮಕೂರು, ತಿಪಟೂರು, ಗುಬ್ಬಿ, ತುರುವೇಕೆರೆ, ಕುಣಿಗಲ್ ತಾಲ್ಲೂಕುಗಳ 2.37 ಲಕ್ಷ ಎಕರೆ ಜಮೀನಿಗೆ ನೀರಾವರಿ ಸೌಲಭ್ಯ ದೊರೆಯಲಿದೆ ಎಂದರು.

ಜನಸಂಖ್ಯೆ ಆಧಾರದಲ್ಲಿ ಈ ಪ್ರಸ್ತಾವವನ್ನು ವಿರೋಧಿಸುವುದು ಸೀಮಿತವಾದ ವಾದ

ಕ್ಷೇತ್ರ ಮರುವಿಂಗಡಣೆಯ ಅಪಾಯ

ವಿಶ್ಲೇಷಣೆ

ಯೋಗೇಂದ್ರ ಯಾದವ್

ಭಾರತ ಒಕ್ಕೂಟಕ್ಕೆ ಬೇಕೇ ಇಲ್ಲದ ಒಂದು ವಿಚಾರ ಕ್ಷೇತ್ರ ಮರುವಿಂಗಡಣೆ. ಈ ಪ್ರಸ್ತಾವವನ್ನು 30 ವರ್ಷ ಮುಂದಕ್ಕೆ ಹಾಕಿ ಎಂದು ತಮಿಳುನಾಡಿನಲ್ಲಿ ನಡೆದ ಸರ್ವ ಪಕ್ಷಗಳ ಸಭೆ ನಿರ್ಣಯ ಅಂಗೀಕರಿಸಿದೆ. ಒಂದು ರಾಜ್ಯ ಅಥವಾ ಪ್ರದೇಶದ ಹಿತಾಸಕ್ತಿಯನ್ನು ರಕ್ಷಿಸುವುದಷ್ಟೇ ಇದರ ಹಿಂದಿನ ಗುರಿ ಅಲ್ಲ. ರಾಷ್ಟ್ರೀಯ ಏಕತೆಯನ್ನು ಇನ್ನಷ್ಟು ಬಲಪಡಿಸುವ ಉದ್ದೇಶವೂ ಇದೆ. ಕ್ಷೇತ್ರ ಮರುವಿಂಗಡಣೆ ಪ್ರಸ್ತಾವವನ್ನು ಶಾಶ್ವತವಾಗಿ ಸ್ಥಗಿತಗೊಳಿಸಿದರೆ, ಭಾರತ ಒಕ್ಕೂಟವು ಎದುರಿಸಬಹುದಾದ ಕೆಲವು ಸವಾಲುಗಳಿಂದ ರಕ್ಷಣೆ ಪಡೆಯಬಹುದು. 'ಗಣರಾಜ್ಯ ಕರಾರು'ವಿಗೆ ಗೌರವ ನೀಡುವ ಅತ್ಯುತ್ತಮ ದಾರಿ ಎಂದರೆ, ಪ್ರಸಕ್ತ ಲೋಕಸಭಾ ಕ್ಷೇತ್ರ ಹಂಚಿಕೆಯನ್ನು 'ಕಲ್ಲಿನಲ್ಲಿ ಕೆತ್ತಲಾಗಿದೆ', ಸಂವಿಧಾನ ರಚನೆಕಾರರು ಮಾಡಿರುವ ಈ ಪವಿತ್ರವಾದ ಅಧಿಕಾರ ಹಂಚಿಕೆಯನ್ನು ಪರಿಷ್ಕರಿಸಲು ಎಂದಿಗೂ ಅವಕಾಶ ಇಲ್ಲ ಎಂದು ಭಾವಿಸುವುದು.

ಇದು ಬಹಳ ಪ್ರಬಲವಾದ ಮತ್ತು ಅಸಾಮಾನ್ಯವಾದ ಪ್ರಸ್ತಾವ. ಕ್ಷೇತ್ರ ಮರುವಿಂಗಡಣೆಯನ್ನು ವಿರೋಧಿಸುವವರು ಈ ಪ್ರಕ್ರಿಯೆಯನ್ನು ಶಾಶ್ವತವಾಗಿ ಸ್ಥಗಿತಗೊಳಿಸಿ ಎಂಬ ಬೇಡಿಕೆಯನ್ನು ಮುಂದಿಟ್ಟಿಲ್ಲ. ಜನಸಂಖ್ಯೆ ಆಧಾರದಲ್ಲಿ ಕ್ಷೇತ್ರ ಮರುವಿಂಗಡಣೆ ಮಾಡುವುದರಿಂದ 'ಜನಸಂಖ್ಯೆ ನಿಯಂತ್ರಣ'ದಲ್ಲಿ ಯಶಸ್ವಿಯಾದ ಕೆಲವು ರಾಜ್ಯಗಳಿಗೆ ಅನ್ಯಾಯ ಆಗುತ್ತದೆ ಎಂಬುದು ಸೀಮಿತವಾದ ಮತ್ತು ಲೋಪಗಳಿಂದ ಕೂಡಿದ ವಾದವಾಗಿದೆ. ಇಂಗಿತ ರೂಪದಲ್ಲಿರುವ ಆದರೆ ಉಲ್ಲಂಘಿಸಲು ಅವಕಾಶವೇ ಇಲ್ಲದ 'ಗಣರಾಜ್ಯ ಕರಾರು'ವಿನ ವಿಚಾರ ಇಲ್ಲಿನ ಚರ್ಚೆಗಳಲ್ಲಿ ಪ್ರಸ್ತಾಪವೇ ಆಗುತ್ತಿಲ್ಲ. ಈ ವಿಚಾರವು ಸಹಜವಾಗಿಯೇ ಗಂಭೀರವಾದ ಪ್ರಶ್ನೆಗಳು ಮತ್ತು ಆಕ್ಷೇಪಗಳಿಗೆ ಕಾರಣ ಆಗಬಹುದು.

ಯಾವುದೇ ರಾಜ್ಯದಲ್ಲಿ ವಿಧಾನಸಭೆ ಕ್ಷೇತ್ರಗಳ ಸಂಖ್ಯೆ ಏರಿಕೆ ಮಾಡುವುದನ್ನು ಯಾರೂ ಆಕ್ಷೇಪಿಸುವುದಿಲ್ಲ. ಇದು ಗಣರಾಜ್ಯದ ಸಮತೋಲನವನ್ನು ತಪ್ಪಿಸುವುದಿಲ್ಲ. ಆದರೆ ಲೋಕಸಭಾ ಕ್ಷೇತ್ರಗಳನ್ನು ಮರು ಹಂಚಿಕೆ ಮಾಡುವುದು ಇಲ್ಲಿನ ನಿಜವಾದ ಸಮಸ್ಯೆ. ಪ್ರತಿ ಸಂಸದನೂ ಹೆಚ್ಚು ಕಡಿಮೆ ಒಂದೇ ಸಂಖ್ಯೆಯ ಜನರನ್ನು ಪ್ರತಿನಿಧಿಸಬೇಕು ಎಂದು ಪ್ರಜಾಸತ್ತಾತ್ಮಕ ತತ್ವವು ಹೇಳುತ್ತದೆ. ಇದು ಪಾಲನೆ ಆಗದೇ ಇದ್ದರೆ, ದೊಡ್ಡ ಕ್ಷೇತ್ರದ ಜನರ ಮತಕ್ಕೆ ಸಣ್ಣ ಕ್ಷೇತ್ರದ ಜನರ ಮತಕ್ಕಿಂತ ಕಡಿಮೆ ಮೌಲ್ಯ ಬರುತ್ತದೆ. ಉದಾಹರಣೆಗೆ, ಮಧ್ಯಪ್ರದೇಶದ ಒಬ್ಬ ಸಂಸದ 32 ಲಕ್ಷ ಜನರನ್ನು ಪ್ರತಿನಿಧಿಸುತ್ತಾನೆ. ಆದರೆ, ಕೇರಳದ ಸಂಸದ ಪ್ರತಿನಿಧಿಸುವ ಜನರ ಸಂಖ್ಯೆ 18 ಲಕ್ಷಕ್ಕಿಂತ ಕಡಿಮೆ ಇದೆ. ಹೀಗಾದಾಗ, ಕೇರಳದ ಮತದಾರರ ಮತದ ಮೌಲ್ಯವು ಮಧ್ಯಪ್ರದೇಶದ ಮತದಾರನ ಮತ ಮೌಲ್ಯಕ್ಕಿಂತ ದುಪ್ಪಟ್ಟು. ಈ ತಾರತಮ್ಯವನ್ನು ನಿವಾರಿಸಲೇಬೇಕಿದೆ. ಇಲ್ಲದೇ ಇದ್ದರೆ, ಇದಕ್ಕಿಂತ ಹೆಚ್ಚು ಬಲವಾದ ಮಾನದಂಡಗಳನ್ನು ರೂಪಿಸಿಕೊಳ್ಳಬೇಕು. ಸಣ್ಣ ರಾಜ್ಯಗಳ ವಿಚಾರದಲ್ಲಿ ಈ ತತ್ವದ ಉಲ್ಲಂಘನೆಗೂ ಸಂವಿಧಾನವು ಅವಕಾಶ ಕೊಟ್ಟಿದೆ (ಗೋವಾ, ಅರುಣಾಚಲ ಪ್ರದೇಶದಲ್ಲಿ 8 ಲಕ್ಷಕ್ಕೂ ಕಡಿಮೆ ಜನರಿಗೆ ಒಂದು ಕ್ಷೇತ್ರ ಸೃಷ್ಟಿಸಲಾಗಿದೆ). ಈ ರಾಜ್ಯಗಳ ಜನಸಂಖ್ಯೆ ಕಡಿಮೆ ಇದ್ದರೂ ಲೋಕಸಭೆಯಲ್ಲಿ ಹೆಚ್ಚಿನ ಪ್ರಾತಿನಿಧ್ಯ ಸಿಕ್ಕಿದೆ. ಇಲ್ಲಿ 'ಅಸಮರೂಪಿ ಗಣತಂತ್ರ' ತತ್ವವನ್ನು ಅನುಸರಿಸಲಾಗಿದೆ. ಒಕ್ಕೂಟದ ವಿವಿಧ ರೀತಿಯ ಘಟಕಗಳಿಗೆ ಸಾಂವಿಧಾನಿಕವಾದ ವಿಶೇಷ ರಕ್ಷಣೆಯನ್ನು ಒದಗಿಸುವ ಮೂಲಕ ಸಾಮಾನ್ಯ ಪ್ರಜಾಸತ್ತಾತ್ಮಕ ತತ್ವವನ್ನು ಉಲ್ಲಂಘಿಸಲಾಗಿದೆ.

ಸಂವಿಧಾನ ರಚನೆಕಾರರು ಆಗ ಕಂಡಿಲ್ಲದ ಮತ್ತು ಕಾಣಲು ಸಾಧ್ಯವೂ ಇಲ್ಲದ ವಾಸ್ತವವನ್ನು ಗಣನೆಗೆ ತೆಗೆದುಕೊಂಡು ಈ ವಿಶೇಷ ರಕ್ಷಣೆಯನ್ನು 'ಸಾರ್ವತ್ರಿಕ'ಗೊಳಿಸಬೇಕು ಎಂಬುದು ನನ್ನ ವಾದ. ಇದು ಜನಸಂಖ್ಯಾ ನಿಯಂತ್ರಣ ನೀತಿಯ ಅನುಷ್ಠಾನದಲ್ಲಿ ಸಿಕ್ಕ ಯಶಸ್ಸು ಅಥವಾ ವೈಫಲ್ಯದ ಪ್ರಶ್ನೆ ಅಲ್ಲವೇ ಅಲ್ಲ. ಹೆಚ್ಚು ಸಮೃದ್ಧವಾದ ರಾಜ್ಯಗಳು ಮತ್ತು ಸಾಮಾಜಿಕ ಗುಂಪುಗಳಲ್ಲಿ ಜನಸಂಖ್ಯೆಯು ಬೇಗನೆ ಕುಸಿಯುತ್ತದೆ. ಇದರ ಹಿರಿಮೆಯನ್ನು ಸರ್ಕಾರಗಳು ತೆಗೆದುಕೊಳ್ಳುವುದು ಸರಿಯಲ್ಲ.

ಭಾರತವು ಸಾಂಸ್ಕೃತಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ ಎದುರಿಸುತ್ತಾ ಬಂದಿರುವ ಬಿಕ್ಕಟ್ಟುಗಳು ಈ ಮೂರು ದಶಕಗಳಲ್ಲಿ ಇನ್ನಷ್ಟು ಹರಿತವಾಗಿವೆ. ಕ್ಷೇತ್ರ ಮರುವಿಂಗಡಣೆ ಸೃಷ್ಟಿಸಬಹುದಾದ ಹೊಸ ಬಿಕ್ಕಟ್ಟು ಈ ಬಿಕ್ಕಟ್ಟುಗಳನ್ನು ಇನ್ನಷ್ಟು ಸಕ್ರಿಯಗೊಳಿಸಬಹುದು. ಹಾಗಾಗಿಯೇ ಶಾಶ್ವತ ಸ್ಥಗಿತವು ಮುಖ್ಯವಾಗುತ್ತದೆ.

ಮೊದಲನೆಯದಾಗಿ, ಸಾಂಸ್ಕೃತಿಕ ಬಿಕ್ಕಟ್ಟು. ಹಿಂದಿ ಮಾತನಾಡುವ ಉತ್ತರ ಭಾರತದ ರಾಜ್ಯಗಳು, ಹಿಂದಿ ಮಾತನಾಡದ ದಕ್ಷಿಣ, ಪೂರ್ವ ಮತ್ತು ಪಶ್ಚಿಮದ ರಾಜ್ಯಗಳ ನಡುವೆ ಮೊದಲಿನಿಂದಲೂ ವ್ಯತ್ಯಾಸಗಳಿವೆ. ಭಾಷಿಕ ರಾಜ್ಯ ರಚನೆ ಮತ್ತು ಒಂದೇ ಅಧಿಕೃತ ಭಾಷೆಯಾಗಿ ಹಿಂದಿಯನ್ನು ಹೇರದಿರುವ ಮೂಲಕ ಈ ಬಿಕ್ಕಟ್ಟು ಇನ್ನಷ್ಟು ಗಾಢವಾಗದಂತೆ ನಮ್ಮ ರಾಜಕೀಯ ನಾಯಕತ್ವವು ನೋಡಿಕೊಂಡಿತು. ಎರಡನೆಯದಾಗಿ, ಕಳೆದ ಮೂರು ದಶಕಗಳಲ್ಲಿನ ಆರ್ಥಿಕ ಅಭಿವೃದ್ಧಿಯು ದಕ್ಷಿಣ-ಪಶ್ಚಿಮ ಭಾರತ ಮತ್ತು ಉತ್ತರ-ಪೂರ್ವ ಭಾರತದ ರಾಜ್ಯಗಳ ನಡುವೆ ಕಣ್ಣಿಗೆ ಕುಕ್ಕುವಂತಹ ಅಸಮಾನತೆ ಸೃಷ್ಟಿಸಿದೆ. ಆಸಕ್ತಿಕರವೆಂದರೆ, ಭಾಷಿಕವಾಗಿ ಅನ್ಯಾಯಕ್ಕೆ ಒಳಗಾಗಿರುವ ಪ್ರದೇಶಗಳು ಆರ್ಥಿಕವಾಗಿ ಮೇಲುಗೈ ಪಡೆದಿವೆ.

ಮೂರನೆಯದಾಗಿ, ಬಿಜೆಪಿಯು ಮುಂಚೂಣಿಗೆ ಬರುವುದರೊಂದಿಗೆ ರಾಜಕೀಯವಾಗಿ ಮತ್ತೊಂದು ಬಿಕ್ಕಟ್ಟು ಮುನ್ನೆಲೆಗೆ ಬಂದಿದೆ. ಬಿಜೆಪಿ ಪ್ರಾಬಲ್ಯದ ಉತ್ತರ ಭಾರತದ ರಾಜ್ಯಗಳು ಮತ್ತು ಬಿಜೆಪಿಗೆ ಪ್ರಬಲ ಪ್ರತಿಸ್ಪರ್ಧಿ ಪಕ್ಷಗಳಿರುವ ಇತರ ರಾಜ್ಯಗಳು (ಕರ್ನಾಟಕ, ಒಡಿಶಾ, ಪಶ್ಚಿಮ ಬಂಗಾಳ, ತೆಲಂಗಾಣ), ಬಿಜೆಪಿಗೆ ಹೆಚ್ಚಿನ ಅಸ್ತಿತ್ವ ಇಲ್ಲದ ರಾಜ್ಯಗಳ (ಆಂಧ್ರಪ್ರದೇಶ, ತಮಿಳುನಾಡು, ಕೇರಳ) ನಡುವೆ ಇನ್ನೊಂದು ಬಿಕ್ಕಟ್ಟು ಸೃಷ್ಟಿಯಾಗಿದೆ. ಈ ಮೂರೂ ಬಿಕ್ಕಟ್ಟುಗಳು ಒಮ್ಮೆಗೇ ಪೂರ್ಣವಾಗಿ ಎದುರಾಗಬೇಕಾಗಿಲ್ಲ. ಆದರೆ, ಹಿಂದಿ ಭಾಷಿಕ ಪ್ರದೇಶ ಮತ್ತು ದಕ್ಷಿಣ ಭಾರತದ ರಾಜ್ಯಗಳು ಈ ಬಿಕ್ಕಟ್ಟುಗಳ ವಿಚಾರದಲ್ಲಿ ವಿರುದ್ಧ ದಿಕ್ಕಿನಲ್ಲಿ ಇವೆ. ಕ್ಷೇತ್ರ ಮರುವಿಂಗಡಣೆಯ ನಿಜವಾದ ಅಪಾಯವೆಂದರೆ, ಅದು ಇದೇ ಮಾದರಿಯಲ್ಲಿ ಇನ್ನೊಂದು ಬಿಕ್ಕಟ್ಟಿಗೆ ಅವಕಾಶ ಮಾಡಿಕೊಡುತ್ತದೆ.

2026ರಲ್ಲಿ ಇರಬಹುದಾದ ಜನಸಂಖ್ಯೆಯ ಆಧಾರದಲ್ಲಿ ಲೋಕಸಭಾ ಕ್ಷೇತ್ರಗಳನ್ನು ಮರುವಿಂಗಡಣೆ ಮಾಡಿದರೆ ಏನಾಗಬಹುದು ಎಂಬುದನ್ನು ಮಿಲನ್ ವೈಷ್ಣವ್ ಮತ್ತು ಜೇಮಿ ಹಿನ್‌ಸ್ಟನ್ ವಿಶ್ಲೇಷಿಸಿದ್ದಾರೆ. ದಕ್ಷಿಣ ಭಾರತದ ಎಲ್ಲ ರಾಜ್ಯಗಳು, ಅಂದರೆ ಕೇರಳ (8), ತಮಿಳುನಾಡು (8), ಆಂಧ್ರಪ್ರದೇಶ ಮತ್ತು ತೆಲಂಗಾಣ (8), ಕರ್ನಾಟಕ (2) ಕ್ಷೇತ್ರಗಳನ್ನು ಕಳೆದುಕೊಳ್ಳಲಿವೆ. ಕ್ಷೇತ್ರಗಳನ್ನು ಕಳೆದುಕೊಳ್ಳಲಿರುವ ಇತರ ರಾಜ್ಯಗಳು ಕೂಡ ಹಿಂದಿ ಭಾಷಿಕವಲ್ಲದವೇ ಆಗಿವೆ. ಅವೆಂದರೆ, ಪಶ್ಚಿಮ ಬಂಗಾಳ (4), ಒಡಿಶಾ (3) ಮತ್ತು ಪಂಜಾಬ್ (1). ತಲಾ ಎರಡು ಕ್ಷೇತ್ರಗಳನ್ನು ಕಳೆದುಕೊಳ್ಳಲಿರುವ ಹಿಮಾಚಲ ಪ್ರದೇಶ, ಉತ್ತರಾಖಂಡವನ್ನು ಬಿಟ್ಟರೆ ಉತ್ತರ ಭಾರತದ ಎಲ್ಲ ಹಿಂದಿ ಭಾಷಿಕ ರಾಜ್ಯಗಳಿಗೆ ಲಾಭ ಆಗಲಿದೆ. ಉತ್ತರ ಪ್ರದೇಶ (11), ಬಿಹಾರ (10), ರಾಜಸ್ಥಾನ (6), ಮಧ್ಯಪ್ರದೇಶದಲ್ಲಿ (4) ಕ್ಷೇತ್ರಗಳು ಹೆಚ್ಚಾಗಲಿವೆ. ಲೋಕಸಭೆಯ 543 ಕ್ಷೇತ್ರಗಳ ಪೈಕಿ 226 ಈಗ ಹಿಂದಿ ಭಾಷಿಕ ರಾಜ್ಯಗಳಲ್ಲಿವೆ. ಅವು 259ಕ್ಕೆ ಏರಲಿವೆ. ಸರಳ ಬಹುಮತಕ್ಕೆ ಬಹಳ ಹತ್ತಿರವಾದ ಸಂಖ್ಯೆ ಇದು. ದಕ್ಷಿಣ ಭಾರತದಲ್ಲಿ ಈಗ 132 ಕ್ಷೇತ್ರಗಳಿದ್ದು, ಪೂರ್ವ ಅಥವಾ ಪಶ್ಚಿಮ ರಾಜ್ಯಗಳ ಜೊತೆಗೂಡಿ ಸಂವಿಧಾನ ತಿದ್ದುಪಡಿಯಂತಹ ಸಂದರ್ಭದಲ್ಲಿ ಅದನ್ನು ತಡೆಯುವ ಶಕ್ತಿಯನ್ನು ಹೊಂದಿವೆ. ಆದರೆ, ಕ್ಷೇತ್ರ ಮರುವಿಂಗಡಣೆ ಆದರೆ, ಈ ಶಕ್ತಿಯೇ ಕೈತಪ್ಪಲಿದೆ.

ವೈವಿಧ್ಯದಲ್ಲಿ ಏಕತೆಯ ಚಿಂತನೆ, ಅತಿ ಪ್ರಾಬಲ್ಯ ಯಾರಿಗೂ ಇಲ್ಲ ಎಂಬ ಸ್ಫೂರ್ತಿಯು ಭಾರತ ಒಕ್ಕೂಟದ ಅಡಿಪಾಯವಾಗಿದೆ. ಆದರೆ, ಕ್ಷೇತ್ರ ಮರುವಿಂಗಡಣೆಯು ಈ ಸ್ಫೂರ್ತಿಗೆ ವಿರುದ್ಧವಾಗಿದೆ. ಭಾರತವು ರಾಜ್ಯಗಳೆಲ್ಲ ಒಟ್ಟಾಗಿ ರೂಪಿಸಿಕೊಂಡ ಸಾಂಪ್ರದಾಯಿಕವಾದ ಒಕ್ಕೂಟ ಆಗಿದ್ದರೆ ಅಲ್ಲಿ ಎಲ್ಲವೂ ಲಿಖಿತವಾಗಿಯೇ ಇರುತ್ತಿತ್ತು. ಅದು, ರಾಜ್ಯಗಳು 'ಪರಸ್ಪರ ಜೊತೆ'ಯಾದ ಒಕ್ಕೂಟ. ಹಾಗಾಗಿ, ಇಲ್ಲಿ ಕರಾರು ಎಂಬುದು ಅಂತರ್ಗತ ಮತ್ತು ಅದುವೇ ತಳಪಾಯ. ಇಂತಹುದೊಂದು ಕರಾರಿಗೆ ಮನ್ನಣೆ ಕೊಟ್ಟರೆ ಎರಡು ವಿಚಾರಗಳನ್ನು ಶಾಶ್ವತವಾಗಿ ಮುಚ್ಚಿಬಿಡಬಹುದು: ಅವೆಂದರೆ, ಜನಸಂಖ್ಯೆ ಆಧಾರಿತವಾದ ರಾಜಕೀಯ ಪ್ರಾತಿನಿಧ್ಯ ಮತ್ತು ಒಕ್ಕೂಟದ ಸಂಪನ್ಮೂಲದಲ್ಲಿ ತೆರಿಗೆ ಪಾಲು ಆಧಾರಿತ ಹಂಚಿಕೆ. ಹೀಗೆ ಆದರೆ, ಹಿಂದಿ ಭಾಷಿಕ ಮತ್ತು ಹಿಂದಿಯೇತರ ಭಾಷಿಕ ರಾಜ್ಯಗಳಿಗೆ ಒಂದೆಡೆ ಲಾಭವೂ ಮತ್ತೊಂದೆಡೆ ನಷ್ಟವೂ ಉಂಟಾಗುತ್ತದೆ. ಅಲ್ಪಾವಧಿಯ ಚುನಾವಣಾ ಲಾಭ-ನಷ್ಟದ ಲೆಕ್ಕಾಚಾರಗಳನ್ನು ಬದಿಗೊತ್ತಿ ಇಂತಹ ಕರಾರಿನ ಕುರಿತು ರಾಷ್ಟ್ರೀಯ ಸಹಮತ ಏರ್ಪಡಬೇಕು. ಆಗ, ಪಾರ್ಥ ಚಟರ್ಜಿ ಹೇಳಿದಂತೆ, ಭಾರತವು 'ನ್ಯಾಯಯುತ ಗಣರಾಜ್ಯ'ವಾಗುತ್ತದೆ. ಇದುವೇ ಭಾರತ ಗಣರಾಜ್ಯದ ಸ್ಥಾಪಿತ ತತ್ವ.

ಚುರುಮುರಿ



ಎನ್‌ಕ್ರೋಚ್ ಕಾಕ್ರೋಚ್!

● ತುರುವೇಕೆರೆ ಪ್ರಸಾದ್

'ಏಯ್, ಮಾರಪ್ಪನೋರು ತೋಟ ಎನ್‌ಕ್ರೋಚ್ ಮಾಡ್ಕಂಡವ್ರೆ ಅಂತ ಭಾರಿ ಭಾರಿ ಸುದ್ದಿಯಾಗೈತಲ್ಲ' ಎಂದ ಗುದ್ಲಿಂಗ ಹರಟೆಕಟ್ಟೇಲಿ.

'ಅದೆಲ್ಲಾ ಸೇಡಿನ್ ರಾಜಕೀಯ ಅನ್ನೋದು ಮುಖಕ್ಕೇ ರಾಚೋ ಅಂಗೆ ಕಾಣ್ತಿದೆ ಅಂತ ಮಾರಪ್ಪನೋರೇ ಯೋಳಿಲ್ವಾ?' ಕೇಳಿದ ಮಾಲಿಂಗ.

'ಅದೂ ನಿಜಾನೇಯ! ಈಗ ದೊಡ್ ದೊಡ್ ಮೈದಾನದಾಗೆ ಸಮಾವೇಶ ಮಾಡಕಿಲ್ವಾ? ಅಂಗೇ ಯಾವ್ದೋ ಸರ್ಕಾರಿ ಜಮೀನಾಗೆ ಸಮಾವೇಶನೋ ವಿಜಯೋತ್ಸವನೋ ಮಾಡಿರ್ತಾರೆ. ಆಗ ಅಭಿಮಾನಿಗಳು ಬೇಲಿ ಹಾಕಿ ಫ್ಲೆಕ್ಸ್ ಕಟ್ಟಿ ಓಗಿರ್ತಾರೆ. ಕಾರ್ಯಕರ್ತರು ನೊಂದ್ಕತಾರೆ ಅಂತ ಅಂಗೇ ಬುಟ್ಟಿರ್ತಾರಪ್ಪ, ಅದ್ನೇ ಎನ್‌ಕ್ರೋಚ್ ಅನ್ನಕ್ಕಾಯ್ತದಾ?'

'ಕರೆಕ್ಟಾಗಿ ಯೋಳ್ದೆ ಕಣ್ಲಾ. ಅವರ್ ಎಲೆನಾಗೇ ಹನಿಟ್ರಾಪ್ ಜೇನ್ನೊಣ ಬಿದ್ದದೆ, ಇಲ್ಲಿ ಗೆದ್ದಲು ಹುಡುಕಕ್ಕೆ ಬಂದವ್ರೆ!' ಎಂದ ಕಲ್ಲೇಶಿ.

'ಅದಕ್ಕೂ ಇದಕ್ಕೂ ಏನ್ಲಾ ಸಂಬಂಧ?'

'ಅದೂ ಒಂಥರಾ ಎನ್‌ಕ್ರೋಚೇ ಕಣ್ಲಾ. ಸಿನಿಮಾದೋರ ಕಾಸ್ಟಿಂಗ್ ಕೌಚ್ ತರ ಇದೊಂದು ಊಸ್ಟಿಂಗ್ ಕೌಚ್! ಅಂದ್ರೆ ಮುಖಕ್ಕೆ ಹನಿಟ್ರಾಪ್ ಮುಖವಾಡ ಕವುಚಿ ಅಧಿಕಾರದಿಂದ ಕೆಳಗಿಳಿಸೋ ಪ್ಲಾನು, ಇದು ಪೊಲಿಟಿಕಲ್ ಎನ್‌ಕ್ರೋಚ್. ಇದು ಪಕ್ಷದೊಳಗಿನೋರೇ ಕ್ಯಾಚ್ ಹಾಕಕ್ಕೆ ನೋಡಿದ್ದಾ ಇಲ್ಲ ಆಚೆ ಕಡೆಯೋರು ಮ್ಯಾಚ್ ಆಡಕ್ಕೆ ನೋಡಿದ್ದಾ ಅಂತ ಗೊತ್ತಾಯ್ತಿಲ್ಲ'.

'ರಾಜಕೀಯದೋರೇ ಅಂಗೆ! ತಮ್ಮ ಬುಡಕ್ಕೆ ಬಂದಾಗ ಒಳಗೊಳಗೇ ಪ್ಯಾಚ್ ಅಕ್ಕಂಬುಡ್ತಾರೆ'.

'ಇದೆಲ್ಲಾ ಬಿಡಿ, ಕಾಲ ಕಾಲೆಳೀತೈತೆ ಅಂತಿದ್ರು. ಈಗ ನೋಡು ಪ್ರೋಟೋಕಾಲೂ ಕಾಲ್ ಎಳೀತೈತೆ'.

'ಊ ಕಣ್ಲಾ! ಡಿಜಿಪಿ ಸಾಹೇಬ್ರ ಕುತ್ತಿಗೆಗೂ ಬಂದದೆ. ಅದ್ನೇ ಹೇಳೋದು ಕೆಟ್ರೆ ಪ್ರೋಟೋಕಾಲು, ಮಕ್ಕಳ ಪಾಪದಲ್ಲಿ ದೊಡ್ಡವರಿಗೂ ಇರುತ್ತೆ ಪಾಲು ಅಂತ'.

'ಇದೂ ಒಂತರಾ ಪವರ್ ಎನ್‌ಕ್ರೋಚೇ ಕಣ್ರಲಾ. ತಮಗಿದ್ದ ಅಧಿಕಾರನ ಒತ್ತುವರಿ ಮಾಡ್ಕಂಡಿರಾದು. ಈಗ ದೊಡ್ ಮನುಸ್ಯರಿಗೂ ಚೆಕಿಂಗ್ ಪೇಚು!'

'ಏನೇ ಮಾಡುದ್ರೂ ಮತ್ತೆ ಮತ್ತೆ ಬೌಂಡರಿ ಎನ್‌ಕ್ರೋಚ್ ಮಾಡ್ಕಂಡು ನುಸುಳೋ ಕಾಕ್ರೋಚ್‌ಗಳು ಇದ್ದೇ ಇರುತ್ವೆ' ಎಂದ ಪರ್ಮೇಶಿ. ಎಲ್ಲಾ ಹೌದೌದು ಎಂದು ತಲೆಯಾಡಿಸಿ ನಕ್ಕರು.

ಸಂಗತ

ಮಾನವತೆಗೆ ಮಿಡಿಯಲಿ ಹೃದಯ

ಒಬ್ಬರ ಜಾತಿ, ಧರ್ಮವನ್ನು ಪರಿಗಣಿಸಿ, ಅವರಿಗೆ ಒದಗಿದ ಸಂಕಷ್ಟವನ್ನು ಕಂಡು ಖುಷಿ ಪಡುವುದು ಮಾನಸಿಕ ವಿಕೃತಿ ಮತ್ತು ಅದು ಮಾನವಧರ್ಮಕ್ಕೆ ಎಸಗುವ ದ್ರೋಹ

● ಪ.ರಾಮಕೃಷ್ಣ ಶಾಸ್ತ್ರಿ

ಉತ್ತರಪ್ರದೇಶದ್ದು ಎನ್ನಲಾದ ವಿಡಿಯೊ ತುಣುಕೊಂದು ಜಾಲತಾಣಗಳಲ್ಲಿ ಹರಿದಾಡುತ್ತಿತ್ತು. ಒಂದು ಧರ್ಮದ ವ್ಯಕ್ತಿಯೊಬ್ಬನ ಮನೆಗೆ ಬೆಂಕಿ ಬಿದ್ದು ಮೂವರು ಸಜೀವ ದಹನವಾಗಿದ್ದರು. ಇಂಥ ಪ್ರಕರಣಗಳು ಇನ್ನಷ್ಟು ಸಂಭವಿಸಬೇಕು ಎನ್ನುವ ಭಾವವನ್ನು ಮತ್ತೊಂದು ಧರ್ಮಕ್ಕೆ ಸೇರಿದ ಅದಾರೋ ಪುಣ್ಯಾತ್ಮರು ಗೀಚಿ, 'ಈ ಅಭಿಪ್ರಾಯ ಸರಿ ಎನ್ನುವವರು ಇದನ್ನು ಹಂಚಿಕೊಳ್ಳಿ' ಎಂದು ಹೇಳಿದ್ದರು.

ಮಾನವನ ಬದುಕಿನಲ್ಲಿ ಅವಘಡಗಳು, ದುರ್ಘಟನೆಗಳು ಸಂಭವಿಸುವುದು ನಿರೀಕ್ಷಿತವಲ್ಲ, ಆದರೂ ಅಸಹಜವಲ್ಲ. ಯಾರ ಬದುಕಿನಲ್ಲಿ ಯಾವಾಗ ಏನು ಬರಬಹುದೋ ಹೇಳಲಾಗದು. ಆದರೆ ಒಬ್ಬ ಮನುಷ್ಯ ಬೇರೆಯವರಿಗೆ ಕಷ್ಟ ಬಂದಾಗ ಅವರ ಜಾತಿ ಅಥವಾ ಧರ್ಮವನ್ನು ಪರಿಗಣಿಸಿ ಅದನ್ನು ಸ್ವಾಗತಿಸುವ ಕಟು ಹೃದಯಿಯಾಗುವುದು ಮಾತ್ರ ಮಾನವಧರ್ಮಕ್ಕೆ ಅಪಚಾರ ತರುವ ವಿಚಾರ.

ರಸ್ತೆ ಅಪಘಾತಗಳು ಸಂಭವಿಸಿದಾಗ ಮನುಷ್ಯ ಧರ್ಮ ಪಾಲಿಸುತ್ತಾ ಗಾಯಾಳುಗಳನ್ನು ಚಿಕಿತ್ಸೆಗೆ ಕರೆದೊಯ್ಯುವ ಹೃದಯವಂತಿಕೆಯ ಸಂದರ್ಭಗಳು ಇರುತ್ತವೆ. ಆಗಲೂ ಗಾಯಗೊಂಡವರ ಬಳಿ ಇರುವ ನಗ, ನಾಣ್ಯಗಳನ್ನು ದೋಚಿದ ಬಳಿಕ ಆಸ್ಪತ್ರೆಗೆ ಸಾಗಿಸುತ್ತಾರೆ ಎಂಬ ವ್ಯಂಗ್ಯ ಭಾವವನ್ನು ಕೆಲವರು ಪ್ರಕಟಿಸುವುದುಂಟು.

ಧರ್ಮ, ಶಾಸ್ತ್ರ, ಜಾತಿ ಎಲ್ಲವನ್ನೂ ಮೀರಿ ಸಂಕಷ್ಟ ಕಾಲದಲ್ಲಿ ನೆರವಾಗುವ ಮನೋಧರ್ಮವನ್ನು ಮೆಚ್ಚುವ ಬಸವಣ್ಣನವರು 'ದಯೆಯಿಲ್ಲದ ಧರ್ಮ ಯಾವುದಯ್ಯಾ?' ಎಂದು ಪ್ರಶ್ನಿಸಿದರು. ಧರ್ಮ ಎಂಬುದು ದಯೆಯ ತಿರುಳಿನಿಂದ ಕೂಡಿದೆ ಎಂದು ಸಿದ್ಧಗಂಗಾ ಮಠದ ಶಿವಕುಮಾರ ಸ್ವಾಮೀಜಿ ಹೇಳುತ್ತಿದ್ದರು. ಬೇರೆಯವರ ಕಷ್ಟದಲ್ಲಿ ನೆರವಾಗುವ ವ್ಯಕ್ತಿಯ ಜಾತಿ, ಧರ್ಮ ಅವಹೇಳನೆಗೆ ಪಾತ್ರವಾಗುವ ಬದಲು, ಬೆಂಕಿ ಬಿದ್ದಾಗ ಮನೆಗೆ ನೀರು ಹೊತ್ತು ತರುವ ಹೃದಯವಂತಿಕೆ ಮೇರು ಶಿಖರವಾಗಿ ಕಾಣಬೇಕು. ಅಂತಹ ಸಮಯದಲ್ಲೂ ಕ್ಷುಲ್ಲಕವಾಗಿ ಮಾತನಾಡುವುದು ಮಾನವೀಯತೆಗೆ ಬಗೆಯುವ ದ್ರೋಹವಾದೀತು.

ನಾವು ನಮ್ಮ ಧರ್ಮದ ಬಗೆಗೆ ಓದಿಕೊಳ್ಳುವುದು ವಿಶೇಷವಲ್ಲ, ಬೇರೆಯವರ ಧರ್ಮದ ಬಗೆಗೂ ತಿಳಿದುಕೊಳ್ಳಬೇಕು ಎನ್ನುವುದು ಬಲ್ಲವರ ಮಾತು. ಜಾತಿ ಮತ್ತು ಧರ್ಮವನ್ನು ಸಂಕುಚಿತ ನೆಲೆಯಲ್ಲಿ ಪರಿಭಾವಿಸಿದರೆ ಅದು ಎಂದಿಗೂ ಮಾನವೀಯ ಗುಣಗಳ ಉದ್ದೀಪನೆಗೆ ನೆರವಾಗುವುದಿಲ್ಲ. ಪ್ರಕೃತಿಯ ಸೃಷ್ಟಿಯು ನಾಶವಾಗುವ ಸಂದರ್ಭ ಎದುರಾದ ಕಾಲದಲ್ಲಿ ಭೇದ ಮಾಡದೆ ಸಹಾಯಕ್ಕೆ ಮುಂದಾಗುವ ಹೃದಯವಂತಿಕೆ ಯಾವ ಧರ್ಮದಲ್ಲೂ ನಿಷೇಧವಲ್ಲ.

ಔರಂಗಜೇಬನು ದೊಡ್ಡ ಯುದ್ಧವನ್ನು ಮಾಡಿ ಮುಗಿಸಿದ. ಸಹಸ್ರಾರು ಜನರ ಶವಗಳು ನೆಲದಲ್ಲಿ ಬಿದ್ದಿದ್ದಾಗ ಅವನಿಗೆ ದಾಹವುಂಟಾಯಿತು. ಕುಡಿಯಲು ನೀರು ಸಿಗಲಿಲ್ಲ. ನೀರು ಹುಡುಕಿಕೊಂಡು ಹೋದಾಗ ಸನ್ಯಾಸಿಯೊಬ್ಬ ಕುಳಿತಿದ್ದುದು ಕಾಣಿಸಿತು. ಅವನ ಬಳಿ ಹೋಗಿ ನೀರು ಕೇಳಿದ. ಔರಂಗಜೇಬನಿಗೆ ಸನ್ಯಾಸಿ ನೀರು ಕೊಟ್ಟು ದಾಹ ತಣಿಸಿದ. ಆಗ ಜೊತೆಗಿದ್ದ ಶಿಷ್ಯ, 'ನೀವು ಅವನಿಗೆ ನೀರು ಕೊಟ್ಟಿರಾ? ಅವನು ಧರ್ಮವಿರೋಧಿ, ಕೊಲೆಪಾತಕ' ಎಂದ. ಸನ್ಯಾಸಿ ಮುಗುಳ್ನಕ್ಕ. 'ನನಗದು ಗೊತ್ತಿತ್ತು. ಆದರೆ ಇಂಥ ಸಮಯದಲ್ಲಿ ನಾನು ಅವನಿಗೆ ನೀರು ನೀಡದೆ ಸಾಯಲು ಕಾರಣನಾಗಿದ್ದರೆ, ಅವನಿಗಿಂತ ದೊಡ್ಡ ಪಾತಕಿಯಾಗುತ್ತಿದ್ದೆ. ಉರಿಯುವ ಬೆಂಕಿಗೆ, ಸುರಿಯುವ ಮಳೆಗೆ ಜಾತಿ ಭೇದವಿಲ್ಲ. ಪುಣ್ಯಶೀಲ ಅಥವಾ ಪಾತಕಿ ಎನ್ನುವ ತಾರತಮ್ಯವಿಲ್ಲ. ಕಷ್ಟ ಬಂದಾಗ ನಾನು ಅವನಿಗೆ ನೆರವು ನಿರಾಕರಿಸುವುದು ಮಾನವಧರ್ಮಕ್ಕೆ ಎಸಗುವ ಅಪಚಾರ' ಎಂದ.

ನಾವು ಇಂತಹ ಎಷ್ಟೋ ಕತೆಗಳನ್ನು ಓದಿದ್ದೇವೆ. ಸಮಾನತೆ ಸಾರಿದ ನಾರಾಯಣ ಗುರುಗಳು, ವಿವೇಕಾನಂದರಂತಹ ಅನೇಕರ ತತ್ವೋಪದೇಶಗಳನ್ನು ಅರಿತುಕೊಂಡಿದ್ದೇವೆ. ಆದರೂ ಇತ್ತೀಚೆಗೆ ಪರ ಧರ್ಮದ ಬಗೆಗೆ ಒಂದು ವಿಧದ ಅಸಹಿಷ್ಣುತೆ ನಮ್ಮನ್ನು ಬಾಧಿಸುತ್ತಿದೆ. ಧರ್ಮದ ನಿಯಮಗಳನ್ನು ಬೇರೆಯವರ ಮೇಲೆ ಬಲವಂತವಾಗಿ ಹೇರುವ ಬದಲು ಧರ್ಮದ ನ್ಯೂನತೆಗಳ ನಿವಾರಣೆಗೆ ಗಮನ ಹರಿಸುವ ಅಗತ್ಯವಿದೆ.

ಹೀಗಾಗಿ ಮತಾಂತರಗಳು, ಪ್ರೇಮ ಪ್ರಸಂಗಗಳು ಇವ್ಯಾವುವೂ ಒಂದು ಜಾತಿ ಅಥವಾ ಧರ್ಮದ ಬಗೆಗೆ ಸಾರಾಸಗಟಾಗಿ ಅಂತಿಮ ತೀರ್ಮಾನಕ್ಕೆ ಬರುವುದಕ್ಕೆ ಕಾರಣವಾಗಬಾರದು. ಕಷ್ಟ ಬಂದಾಗ ಅಲ್ಲಿ ಬಳಲುತ್ತಿರುವ ಜೀವಗಳು ಕಾಣಿಸಬೇಕೇ ವಿನಾ ವ್ಯಕ್ತಿಗತವಾದ ಜಾತಿ, ಧರ್ಮದ ಹೆಸರಿನಲ್ಲಿ ಅದು ಸಹಜ ಎಂದು ನಿರ್ಧರಿಸುವ ವಿಕೃತ ಮನಸ್ಸು ನಮ್ಮದಾಗಬಾರದು. 'ಮನುಷ್ಯ ಜಾತಿ ತಾನೊಂದೆ ವಲಂ' ಎನ್ನುವುದು ವೇದಿಕೆಗಷ್ಟೇ ಮೀಸಲಾಗಬಾರದು. ಕಷ್ಟದ ಸಂದರ್ಭದಲ್ಲಿ ಬೇರೆಯವರಿಗೆ ನಾವು ನೀಡುವ ನೆರವು ಅವರ ವ್ಯಕ್ತಿಗತ ದುರ್ಗುಣಗಳ ಬದಲಾವಣೆಗೂ ಕಾರಣವಾಗಬಹುದು. ಸಾಯುತ್ತಿರುವ ವ್ಯಕ್ತಿಗೆ ನೆರವಿನ ಹಸ್ತ ಚಾಚಲು ನಮ್ಮಿಂದ ಆಗದೇ ಇರಬಹುದು. ಆದರೆ ಆತನ ಯಾತನೆಯನ್ನು ಕಂಡು ಖುಷಿ ಪಡುವ ಕಲ್ಲುಹೃದಯಿಗಳು ಮಾತ್ರ ನಾವಾಗಬಾರದು.

ಜಗತ್ತಿನ ಕೆಲವು ರಾಷ್ಟ್ರಗಳು ಹಿಂಸೆಯ ಕಡೆಗೆ ವಾಲುತ್ತಿವೆ, ಮಾನವೀಯತೆ ಅಧಃಪತನಗೊಳ್ಳುತ್ತಿದೆ, ಯುದ್ಧಗಳು ಜಗತ್ತನ್ನು ತಲ್ಲಣಗೊಳಿಸುತ್ತಿವೆ. ಇಂತಹ ಸಂದಿಗ್ಧ ಕಾಲದಲ್ಲಿ, ಸುಂದರವಾದ ಪ್ರಪಂಚದ ಸುಖಮಯ ಕನಸು ಹೊತ್ತ ಅವೆಷ್ಟೋ ಜೀವಗಳಿವೆ. ಪ್ರಪಂಚ ಉಳಿಯಬೇಕಿದ್ದರೆ ಮಾನವೀಯ ಹೃದಯಕ್ಕೆ ಪುರಸ್ಕಾರ, ಕಷ್ಟಕ್ಕೆ ಮರುಗುವ ಗುಣ ಸಾರ್ವತ್ರಿಕ ಆಗಬೇಕು.

ವಾಚಕರ ವಾಣಿ

ಬಂದ್‌ನಿಂದ ಉದ್ದೇಶ ಸಾಧನೆಯಾಗದು

ಕನ್ನಡಪರವಾದ ಕೆಲವು ಸಂಘಟನೆಗಳು ಇಂದು (ಶನಿವಾರ) ಕರ್ನಾಟಕ ಬಂದ್‌ಗಾಗಿ ಕರೆ ನೀಡಿರುವುದು ತೀರಾ ಶೋಚನೀಯ ಮತ್ತು ವಿವೇಚನಾರಹಿತವಾದ ನಡೆ. ಎಸ್‌ಎಸ್‌ಎಲ್‌ಸಿ ಪರೀಕ್ಷೆ ಆರಂಭವಾಗಿದೆ. ಬಂದ್‌ನಿಂದ ಅಮಾಯಕ ವಿದ್ಯಾರ್ಥಿಗಳಿಗೆ ಹೇಳತೀರದಷ್ಟು ತೊಂದರೆ ಆಗುತ್ತದೆ. ಸಾವಿರಾರು ವೃದ್ಧರು, ಮಹಿಳೆಯರು ಮತ್ತು ರೋಗಿಗಳು ಅನೇಕ ರೀತಿಯಲ್ಲಿ ಸಂಕಷ್ಟಕ್ಕೆ ಒಳಗಾಗುತ್ತಾರೆ.

ನಾನೂ ಕನ್ನಡಿಗನೇ. ಕನ್ನಡ ನನ್ನ ಹೆಮ್ಮೆಯ ಮಾತೃಭಾಷೆ. ನನ್ನ ಮಾತೃಭಾಷೆಯ ಅಸ್ಮಿತೆಗೆ ಧಕ್ಕೆಯಾದಲ್ಲಿ ಪ್ರತಿಭಟಿಸುವುದು ನನ್ನ ಕರ್ತವ್ಯ. ಆದರೆ ನಮ್ಮ ತಂದೆ- ತಾಯಿ, ಅಕ್ಕತಂಗಿಯರು, ಮಕ್ಕಳನ್ನು ತೊಂದರೆಗೆ ಈಡುಮಾಡಿ ಬಂದ್ ಆಚರಿಸುವುದರಿಂದ ಯಾವುದೇ ಘನ ಉದ್ದೇಶವನ್ನೂ ಸಾಧಿಸಿದಂತೆ ಆಗುವುದಿಲ್ಲ. ಕನ್ನಡ ಭಾಷೆಯ ಅಸ್ತಿತ್ವಕ್ಕೆ ಧಕ್ಕೆ ತರುವವರ ವಿರುದ್ಧ ಯಾರಿಗೂ ತೊಂದರೆಯಾಗದ ರೀತಿಯಲ್ಲಿ ಹೋರಾಡಲು ಕನ್ನಡಪರ ಸಂಘಟನೆಗಳು ಮುಂದಾಗಲಿ.

ಶಾಂತವೀರ ಎಸ್., ಚಿತ್ರದುರ್ಗ

ಜೀವಬೆದರಿಕೆ: ಸಾಂಸ್ಕೃತಿಕ ಲೋಕದ ವಿಪರ್ಯಾಸ

ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಹೇಶ್ ಜೋಶಿ ಅವರಿಗೆ ಜೀವ ಬೆದರಿಕೆ ಇರುವ ಕುರಿತು ಪರಿಶೀಲಿಸಿ ವರದಿ ನೀಡಲು ಸರ್ಕಾರಕ್ಕೆ ಹೈಕೋರ್ಟ್ ಸೂಚಿಸಿರುವುದು ತುಂಬಾ ಆತಂಕದ ಬೆಳವಣಿಗೆ. ದೀರ್ಘ ಇತಿಹಾಸವುಳ್ಳ ಪರಿಷತ್ತಿನ ಅಧ್ಯಕ್ಷ ಮತ್ತು ಪದಾಧಿಕಾರಿಗಳ ಸ್ಥಾನವನ್ನು ಕನ್ನಡ ಸಾಹಿತ್ಯದ ಅನೇಕ ದಿಗ್ಗಜರು ಅಲಂಕರಿಸಿದ್ದುಂಟು. ಅಂತಹ ಸಂಸ್ಥೆಯ ಅಧ್ಯಕ್ಷರಿಗೆ ಜೀವ ಬೆದರಿಕೆ ಹಾಕುವುದು ಸಾಹಿತ್ಯ, ಸಾಂಸ್ಕೃತಿಕ ಲೋಕದಲ್ಲಿನ ವಿಪರ್ಯಾಸದ ಬೆಳವಣಿಗೆಯೇ ಸರಿ.

ವೆಂಕಟೇಶ ಮಾಚಕನೂರ, ಧಾರವಾಡ

ಇರಲಿ ಪರ್ಯಾಯ ಪದ ಬಳಕೆ

ಮಹಾಭಾರತದಲ್ಲಿ ದುರ್ಯೋಧನನ ಆಣತಿಯಂತೆ ದುಶ್ಯಾಸನನು ದ್ರೌಪದಿಯ ಸೀರೆ 'ಸೆಳೆದ' ಎಂಬ ಪ್ರಸಂಗ ಹಾಗೂ ನದಿಯಲ್ಲಿ 'ಸೆಳೆತ' ಹೆಚ್ಚಾಗಿತ್ತು ಎಂಬ ವಾಕ್ಯ, ಈ ಎರಡನ್ನೂ ಅವಲೋಕಿಸಿದಾಗ 'ಸೆಳೆ' ಎಂಬಲ್ಲಿ ಬಲ ಪ್ರಯೋಗ ಅಥವಾ ವೇಗ ಎಂಬ ಭಾವಾರ್ಥ ಲಭಿಸುತ್ತದೆ ಎಂದು ಅರ್ಥೈಸಿಕೊಳ್ಳಬಹುದು. ಆದರೆ, ಈ 'ಸೆಳೆ', 'ಸೆಳೆಯುವುದು' ಎಂಬ ಪದಗಳನ್ನು ಸರ್ಕಾರಿ ಆದೇಶಗಳಲ್ಲಿ ವ್ಯಾಪಕವಾಗಿ ಬಳಸಲಾಗುತ್ತಿದೆ. ಉದಾಹರಣೆಗೆ, 'ಶ್ರೀ... ಇವರ ವೇತನವನ್ನು ಸರ್ಕಾರಿ ಖಜಾನೆಯಿಂದ ಸೆಳೆಯಲು ಅನುಮತಿಸಲಾಗಿದೆ' ಎಂದು ನಮೂದಾಗಿರುತ್ತದೆ. ಈ ಪದಗಳ ಪ್ರಯೋಗವು ಅರ್ಥದಲ್ಲಿ ಸರಿ ಇರಬಹುದು. ಆದರೆ, ಸರ್ಕಾರಿ ಆದೇಶಗಳಲ್ಲಿ ಇವುಗಳ ಬದಲಿಗೆ ಪರ್ಯಾಯ ಪದಗಳನ್ನು ಉಪಯೋಗಿಸುವುದು ಒಳಿತು.

ವೆಂಕಟೇಶ್ ಮುದಗಲ್, ಕಲಬುರಗಿ

ಸುಸಂಸ್ಕೃತ ಕರುನಾಡಿನ ಮಹಾನ್ ನಾಯಕರು!

ಸಚಿವ ರಾಜಣ್ಣಗೆ 'ಮಧುಬಲೆ' ಎಂಬ ಸುದ್ದಿಯನ್ನು (ಪ್ರ.ವಾ., ಮಾರ್ಚ್ 21) ಓದಿ, ಕೆಟ್ಟದ್ದನ್ನು ಆಡುವುದಿಲ್ಲ, ನೋಡುವುದಿಲ್ಲ, ಕೇಳುವುದಿಲ್ಲ ಎಂದು ಸಂಕೇತಿಸುವ ಗಾಂಧೀಜಿಯ ಮೂರು ಮಂಗಗಳು ನೆನಪಾದವು. ನಾಡಿನ ಜನರ ಕಷ್ಟಕಾರ್ಪಣ್ಯ, ನಾಡು-ನುಡಿ, ಶಿಕ್ಷಣ, ಆರೋಗ್ಯ, ಶಾಸನಗಳ ರೂಪಿಸುವಿಕೆ, ವಿತ್ತೀಯ ವಿಷಯಗಳ ಚರ್ಚೆಗೆಂದು ನಿರ್ಮಿಸಿದ ವಿಧಾನಸೌಧ ಇಂದು ಊರ ಮುಂದಿನ ಹರಟೆ ಕಟ್ಟೆಗಿಂತಲೂ ಕಡೆಯಾಯಿತಲ್ಲಾ ಕೆಂಗಲ್ ಹನುಮಂತಯ್ಯನವರೇ ಎಂದು ರಾಜ್ಯದ ಜನ ಮಮ್ಮಲ ಮರುಗುವಂತೆ ಆಗಿರುವುದು ದುರದೃಷ್ಟಕರ ಸಂಗತಿ. ಇತ್ತೀಚೆಗಂತೂ ಇಲ್ಲಿ ಜನರ ಸಮಸ್ಯೆಗಳು ಚರ್ಚೆಗೆ ಒಳಗಾಗುತ್ತಿರುವುದು ಅಪರೂಪವೇ ಆಗಿದೆ. ಅಧಿಕಾರದ ದರ್ಪ, ಧಿಮಾಕು, ಸ್ವಪ್ರತಿಷ್ಠೆಯ ಪ್ರದರ್ಶನ ಅತಿಯಾಗಿದೆ. ತೋಳು ತಟ್ಟುವುದು, ತೊಡೆ ಬಡಿದುಕೊಳ್ಳುವುದು, ಮೇಜು ಏರಿ ಚೀರಾಡುವುದು, ತೂಕಡಿಸುವ ಶಾಸಕರಿಗೆ ಆರಾಮದಾಯಕ ಕುರ್ಚಿ ಸೌಲಭ್ಯ ಒದಗಿಸುವುದು, ಕಮಿಷನ್, ಲಂಚ ಪಡೆದ ಬಗ್ಗೆ, ಪೆನ್‌ಡ್ರೈವ್, ಸಿ.ಡಿ. ಇದೆ ಎಂದು ಹೇಳುವ ಮೂಲಕ ಬ್ಲ್ಯಾಕ್‌ಮೇಲ್ ಮಾಡುವುದು, ಈ ಸಂಬಂಧದ ಆರೋಪ, ಪ್ರತ್ಯಾರೋಪ, ಜನರಿಗೆ ಮದ್ಯವನ್ನು ಉಚಿತವಾಗಿ ನೀಡಿ ಎಂಬ ಸಲಹೆ, ಹನಿಟ್ರ್ಯಾಪ್ ಪ್ರಕರಣ.... ಇವರೆಲ್ಲ ನಮ್ಮ ಸುಸಂಸ್ಕೃತ ಕರುನಾಡಿನ ಮಹಾನ್ ನಾಯಕರು!

ಇದೇ ಸ್ಥಳದಲ್ಲಿ ಎಸ್.ಆರ್.ಕಂಠಿ, ಎಸ್.ನಿಜಲಿಂಗಪ್ಪ, ಕೆಂಗಲ್ ಹನುಮಂತಯ್ಯ, ದೇವರಾಜ ಅರಸು, ಶಾಂತವೇರಿ ಗೋಪಾಲಗೌಡ, ಕೆ.ಕೆಂಚಪ್ಪ, ಕಡಿದಾಳ್ ಮಂಜಪ್ಪ, ಯಶೋಧರಾ ದಾಸಪ್ಪ, ವೀರೇಂದ್ರ ಪಾಟೀಲ್, ನಜೀರ್ ಸಾಬ್ ಅವರಂತಹ ಮಹನೀಯರು ಕುಂತುಹೋದರು ಎಂದು ನೆನೆದಾಗ, ಸಂವಿಧಾನದ ಆಶಯಗಳ ಕುರಿತು ಚರ್ಚಿಸಬೇಕಾದ ಪುಣ್ಯಭೂಮಿಯಾದ ವಿಧಾನಸೌಧವು ಎಂಥ ವಿಷಯಗಳ ಚರ್ಚೆಯ ತಾಣವಾಯಿತಲ್ಲಾ ಎಂದು ದುಃಖವಾಗುತ್ತದೆ. ಅಧಿಕಾರ ದಾಹ ಎಂಬುದು ಎಷ್ಟು ಕ್ರೂರಿ ಅಲ್ಲವೇ?

ಎಂ.ಜಿ.ರಂಗಸ್ವಾಮಿ, ಹಿರಿಯೂರು

ಹಗರಣಗಳಿಗೆ ಮರೆವಿನ ಶ್ರೀರಕ್ಷೆ!

ಜೆಡಿಎಸ್– ಕಾಂಗ್ರೆಸ್ ನೇತೃತ್ವದ ಈ ಹಿಂದಿನ ಸಮ್ಮಿಶ್ರ ಸರ್ಕಾರ ಮತ್ತು ಬಿಜೆಪಿ ನೇತೃತ್ವದ ಸರ್ಕಾರದ ಅವಧಿಯಲ್ಲಿ ಕಿಯೋನಿಕ್ಸ್ ಸಂಸ್ಥೆಯಲ್ಲಿ ನಡೆದ ಖರೀದಿ ವಹಿವಾಟಿನಲ್ಲಿ ₹ 450 ಕೋಟಿಗೂ ಹೆಚ್ಚು ಮೊತ್ತದ ಅಕ್ರಮ ನಡೆದಿದೆ ಎಂದು ಮಹಾಲೇಖಪಾಲರ ವರದಿ ಹೇಳಿರುವುದಾಗಿ ಮಾಧ್ಯಮ ವರದಿಗಳು ತಿಳಿಸಿವೆ. ಆದರೆ ವರ್ಷಗಳ ಹಿಂದಿನ ಪ್ರಕರಣ ಇದಾಗಿರುವುದರಿಂದ ಇದೊಂದು ಹಳತಾದ ಸುದ್ದಿ ಎನ್ನಲಡ್ಡಿಯಿಲ್ಲ.

ಇಂತಹ ಪ್ರಕರಣ ಕೇಳಿಬಂದಾಗಲೆಲ್ಲ, ತನಿಖೆ ಮಾಡುತ್ತೇವೆ, ಅಕ್ರಮದ ರೂವಾರಿಗಳನ್ನು ಬಯಲಿಗೆಳೆಯುತ್ತೇವೆ, ಶಿಕ್ಷೆಯಾಗುವಂತೆ ನೋಡಿಕೊಳ್ಳುತ್ತೇವೆ ಎಂದು ಆಡಳಿತಾರೂಢರು ಹೇಳಿಕೆಗಳನ್ನು ನೀಡುತ್ತಾರೆ. ಸಾರ್ವಜನಿಕರ ತೆರಿಗೆ ಹಣ ಹೀಗೆ ವ್ಯರ್ಥವಾಗುತ್ತಾ ಹೋದ ನಿದರ್ಶನಗಳೇ ಬಹಳ. ದುರುಪಯೋಗವಾದ ಹಣ ಮರಳಿದ ಉದಾಹರಣೆಗಳು ವಿರಳ. ಒಂದು ವೃದ್ಧಾಪ್ಯವೇತನ ಮಂಜೂರಿಗೆ ಮೂವತ್ತೆಂಟು ಪ್ರಶ್ನೆ ಕೇಳಿ ಸತಾಯಿಸುವ ವ್ಯವಸ್ಥೆ ನಮ್ಮಲ್ಲಿರುವಾಗ, ಕೋಟ್ಯಂತರ ರೂಪಾಯಿಯ ಇಂತಹ ಹಗರಣಗಳು ಮಾತ್ರ ಸುಲಲಿತವಾಗಿ ನಡೆದುಹೋಗುತ್ತವೆ ಎಂಬುದೇ ಅಚ್ಚರಿಯ ಸಂಗತಿ. ಸಾರ್ವಜನಿಕ ಮರೆವಿನ ಶ್ರೀರಕ್ಷೆಯಿಂದ ಇಂಥ ಪ್ರಕರಣಗಳು ಮರುಕಳಿಸುತ್ತವೆ. ಬೆಕ್ಕಿಗೆ ಗಂಟೆ ಕಟ್ಟುವವರು ಯಾರು?

ಚನ್ನು ಹಿರೇಮಠ, ರಾಣೆಬೆನ್ನೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಐಪಿಎಲ್

ಕರ್ನಾಟಕದ ಕಲಿಗಳಿಗೆ ಸತ್ವಪರೀಕ್ಷೆ

ಇಂಡಿಯನ್ ಪ್ರೀಮಿಯರ್ ಲೀಗ್ ಟಿ20 ಕ್ರಿಕೆಟ್ ಉತ್ಸವ ಶನಿವಾರ ಆರಂಭವಾಗಲಿದೆ. ಹತ್ತು ತಂಡಗಳು ಪ್ರಶಸ್ತಿಗಾಗಿ ಸೆಣಸಲು ಸಿದ್ಧವಾಗಿವೆ. ಭಾರತ ಮತ್ತು ವಿದೇಶಗಳ ಖ್ಯಾತನಾಮ ಆಟಗಾರರೂ ಕಣಕ್ಕಿಳಿಯಲಿದ್ದಾರೆ. ಇವರೆಲ್ಲರ ಪೈಪೋಟಿಯ ನಡುವೆ ತಮ್ಮ ಹೆಜ್ಜೆಗುರುತು ಮೂಡಿಸಲು ಕರ್ನಾಟಕದ ಕ್ರಿಕೆಟಿಗರು ಕೂಡ ತುದಿಗಾಲಿನಲ್ಲಿ ನಿಂತಿದ್ದಾರೆ. ಅದರಲ್ಲಿ ಕೆಲವರು ಸದ್ಯ ಭಾರತ ತಂಡದಲ್ಲಿದ್ದಾರೆ. ಇನ್ನು ಕೆಲವರು ರಾಷ್ಟ್ರೀಯ ತಂಡಕ್ಕೆ ಮರಳುವ ಗುರಿ ಇಟ್ಟುಕೊಂಡವರೂ ಇದ್ದಾರೆ. ಒಂದಿಷ್ಟು ಪ್ರತಿಭಾನ್ವಿತರು ಪದಾರ್ಪಣೆಯ ಅವಕಾಶಕ್ಕಾಗಿ ಕಾದು ನಿಂತಿದ್ದಾರೆ

● ಗಿರೀಶ ದೊಡ್ಡಮನಿ

ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಟಿ20 ಕ್ರಿಕೆಟ್ ಟೂರ್ನಿಗೆ ಈಗ 18ರ ಹರೆಯ. ಈ ಟೂರ್ನಿಯು ಅಗಾಧವಾಗಿ ಬೆಳೆಯುವಲ್ಲಿ ಕರ್ನಾಟಕದ ಆಟಗಾರರ ಕಾಣಿಕೆಯೂ ದೊಡ್ಡದು. ಅದರಲ್ಲೂ ಐಪಿಎಲ್ ಆರಂಭದ ವರ್ಷಗಳಲ್ಲಿ ಭಾರತ ಕ್ರಿಕೆಟ್ ತಂಡದ ದಿಗ್ಗಜ ಕನ್ನಡಿಗರು ಇದರಲ್ಲಿ ಆಡಿದ್ದರು. ಅವರ ವರ್ಚಸ್ಸು ಕೂಡ ಐಪಿಎಲ್ ಬೆಳವಣಿಗೆಗೆ ಮೆಟ್ಟಿಲುಗಳಾಗಿದ್ದವು ಎಂದರೆ ಅತಿಶಯೋಕ್ತಿಯಲ್ಲ.

ಅಂತರರಾಷ್ಟ್ರೀಯ ಪಂದ್ಯಗಳಲ್ಲಿ ತಮ್ಮ ತಾಳ್ಮೆಯ ಆಟದಿಂದ 'ಗೋಡೆ' ಎಂದೇ ಖ್ಯಾತರಾಗಿದ್ದ ರಾಹುಲ್ ದ್ರಾವಿಡ್ ಐಪಿಎಲ್ ಪಂದ್ಯದಲ್ಲಿ ಸಿಕ್ಸರ್ ಹೊಡೆದು ಬೆರಗು ಮೂಡಿಸಿದ್ದರು. ಟಿ20 ಮಾದರಿ ಬೌಲರ್‌ಗಳಿಗೆ ಕಂಟಕ ಎಂಬ ಆತಂಕ ಮೂಡಿದ್ದ ಕಾಲದಲ್ಲಿ ಸ್ಪಿನ್ನರ್ ಅನಿಲ್ ಕುಂಬ್ಳೆ ಮೋಡಿಯೂ ನಡೆದಿತ್ತು. ಆಗಿನ್ನೂ ದೇಶಿ ಕ್ರಿಕೆಟ್‌ನಲ್ಲಿ ಹೆಜ್ಜೆ ಗುರುತು ಮೂಡಿಸಲು ಆರಂಭಿಸಿದ್ದ ಮನೀಷ್ ಪಾಂಡೆ ಐಪಿಎಲ್‌ನಲ್ಲಿ ಮೊದಲ ಶತಕ ಹೊಡೆದ ಭಾರತೀಯ ಆಟಗಾರನೆಂಬ ಹೆಗ್ಗಳಿಕೆಗೂ ಪಾತ್ರರಾದರು.

2008ರಿಂದ ಇಲ್ಲಿಯವರೆಗೆ ಕರ್ನಾಟಕದ ಆಟಗಾರರು ಐಪಿಎಲ್‌ನಲ್ಲಿ ತಮ್ಮ ಹೆಜ್ಜೆಗುರುತು ಮೂಡಿಸುವಲ್ಲಿ ಹಿಂದೆ ಬಿದ್ದಿಲ್ಲ. ಈ ಬಾರಿಯ ಐಪಿಎಲ್ ಟೂರ್ನಿಯಲ್ಲಿ 13 ಆಟಗಾರರು ಕಣದಲ್ಲಿದ್ದಾರೆ.

ಅವಕಾಶದ ನಿರೀಕ್ಷೆಯಲ್ಲಿ ಪಾಂಡೆ

2008ರಿಂದಲೂ ಐಪಿಎಲ್‌ನಲ್ಲಿ ಆಡುತ್ತಿರುವ ಆಟಗಾರ ಮನೀಷ್ ಪಾಂಡೆ. ದೇಶಿ ಕ್ರಿಕೆಟ್‌ನಲ್ಲಿ ಛಾಪು ಮೂಡಿಸಿದ ಪ್ರತಿಭಾವಂತ ಐಪಿಎಲ್‌ನಲ್ಲಿ ಶತಕ ಬಾರಿಸಿ ಸೈ ಎನಿಸಿಕೊಂಡವರು. ಆರ್‌ಸಿಬಿಯಿಂದ ಆರಂಭವಾದ ಅವರ ಐಪಿಎಲ್ ಪಯಣ ಈಗ ಕೋಲ್ಕತ್ತ ನೈಟ್ ರೈಡರ್ಸ್‌ವರೆಗೆ ಬಂದಿದೆ. ಆದರೆ ಅವರು ಈಗ ಮೊದಲಿನಂತೆ ಉತ್ತಮ ಲಯದಲ್ಲಿ ಇಲ್ಲ. ಕಳೆದ ರಣಜಿ ಟ್ರೋಫಿ, ವಿಜಯ್ ಹಜಾರೆ ಟ್ರೋಫಿ ಟೂರ್ನಿಗಳಲ್ಲಿಯೂ ಅವರಿಗೆ ಸ್ಥಾನ ಲಭಿಸಿರಲಿಲ್ಲ.

ಡೆಲ್ಲಿಗೆ ರಾಹುಲ್

ಹೋದ ವರ್ಷ ಲಖನೌ ಸೂಪರ್ ಜೈಂಟ್ಸ್ ತಂಡದ ನಾಯಕರಾಗಿದ್ದ ಕೆ.ಎಲ್.ರಾಹುಲ್ ಈ ಬಾರಿ ಡೆಲ್ಲಿ ಕ್ಯಾಪಿಟಲ್ಸ್ ತಂಡಕ್ಕೆ ಬಂದಿದ್ದಾರೆ. ಆದರೆ ಈ ತಂಡಕ್ಕೆ ಅವರು ನಾಯಕರಲ್ಲ. ಅಕ್ಷರ್ ಪಟೇಲ್ ನಾಯಕತ್ವದಲ್ಲಿ ರಾಹುಲ್ ಆಡಲಿದ್ದಾರೆ.

ಈಚೆಗೆ ಮುಗಿದ ಚಾಂಪಿಯನ್ಸ್ ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ ರಾಹುಲ್ ಕೆಳ ಮಧ್ಯಮ ಕ್ರಮಾಂಕದಲ್ಲಿ ಬ್ಯಾಟಿಂಗ್ ಮಾಡಿದ್ದರು. ಅದರಲ್ಲೂ ಸೆಮಿಫೈನಲ್ ಮತ್ತು ಫೈನಲ್ ಪಂದ್ಯಗಳಲ್ಲಿ ಅವರ ಬ್ಯಾಟಿಂಗ್‌ನಿಂದಾಗಿ ತಂಡವು ಗೆಲುವಿನ ದಡ ಸೇರಿತ್ತು. ಅಲ್ಲದೇ ವಿಕೆಟ್ ಕೀಪಿಂಗ್‌ನಲ್ಲಿ ಮಿಂಚಿದ್ದರು. ಇದರಿಂದಾಗಿ ಡೆಲ್ಲಿ ತಂಡಕ್ಕೆ ರಾಹುಲ್ ಅವರಿಂದ ಅಪಾರ ನಿರೀಕ್ಷೆ ಮೂಡಿದೆ.

ವೈಶಾಖ ವಿಶ್ವಾಸ

ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದಲ್ಲಿ ಎರಡು ವರ್ಷ ಆಡಿದ್ದ ವೇಗಿ ವೈಶಾಖ ವಿಜಯಕುಮಾರ್ ಈ ಸಲ ಪಂಜಾಬ್ ಕಿಂಗ್ಸ್‌ನಲ್ಲಿ ಆಡಲಿದ್ದಾರೆ. ಈಚೆಗೆ ದಕ್ಷಿಣ ಆಫ್ರಿಕಾ ಪ್ರವಾಸಕ್ಕೆ ತೆರಳಿದ್ದ ಭಾರತ ತಂಡದಲ್ಲಿಯೂ ಅವರು ಸ್ಥಾನ ಪಡೆದಿದ್ದರು. ಆದರೆ, ಅವರಿಗೆ ದೇಶಿ ಕ್ರಿಕೆಟ್‌ನಲ್ಲಿ ಫಾರ್ಮ್ ಕೊರತೆ ಮತ್ತು ಗಾಯದ ಸಮಸ್ಯೆ ಕಾಡಿತ್ತು.

ಮನೋಹರ ಬ್ಯಾಟಿಂಗ್



ಹೋದ ವರ್ಷ ಗುಜರಾತ್ ಟೈಟನ್ಸ್‌ನಲ್ಲಿದ್ದ ಮನೋಹರ್ ಈ ಸಲ ಸನ್‌ರೈಸರ್ಸ್ ಹೈದರಾಬಾದ್ ಜರ್ಸಿ ತೊಡಲಿದ್ದಾರೆ. ಬೀಸಾಟಕ್ಕೆ ಹೆಸರಾಗಿರುವ 30 ವರ್ಷ ವಯಸ್ಸಿನ ಆಟಗಾರ ಮನೋಹರ್ ಅವರಿಗೆ ಕಣಕ್ಕಿಳಿಯುವ ಅವಕಾಶಗಳು ಸಿಗಬಹುದೇ ಎಂಬುದೇ ಕುತೂಹಲ. ಏಕೆಂದರೆ, ಸನ್‌ರೈಸರ್ಸ್ ತಂಡದಲ್ಲಿ ಸಿಡಿಲಬ್ಬರದ ಬ್ಯಾಟರ್‌ಗಳು ಇದ್ದಾರೆ. ಅದರಿಂದಾಗಿ ತಮಗೆ ಸಿಕ್ಕ ಅವಕಾಶಗಳಲ್ಲಿ ಮನೋಹರ್ ಭುಜಬಲ ಮೆರೆಯಬೇಕಿದೆ. ಟ್ರಾವಿಸ್ ಹೆಡ್, ಹೆನ್ರಿಚ್ ಕ್ಲಾಸೆನ್, ಪ್ಯಾಟ್ ಕಮಿನ್ಸ್ ಅವರೊಂದಿಗೆ ಆಡುವ ಅನುಭವವೂ ಅವರದ್ದಾಗಲಿದೆ.

ಕರುಣ್ ಅಮೋಘ ಲಯ



ಭಾರತ ತಂಡಕ್ಕೆ ಮರಳುವ ಛಲದಲ್ಲಿರುವ ಕರುಣ್ ನಾಯರ್ ಐಪಿಎಲ್‌ನಲ್ಲಿಯೂ ರನ್ ಹೊಳೆ ಹರಿಸುವ ವಿಶ್ವಾಸದಲ್ಲಿದ್ದಾರೆ. ವಿಜಯ್ ಹಜಾರೆ ಟ್ರೋಫಿ ಹಾಗೂ ರಣಜಿ ಟ್ರೋಫಿ ಟೂರ್ನಿಗಳಲ್ಲಿ ಅವರು ವಿದರ್ಭ ತಂಡದ ಪರವಾಗಿ ಕ್ರಮವಾಗಿ 779 ಮತ್ತು 863 ರನ್‌ಗಳನ್ನು ಪೇರಿಸಿದ್ದರು. ವಿಜಯ್ ಹಜಾರೆ ಟೂರ್ನಿಯಲ್ಲಿ ವಿದರ್ಭ ರನ್ನರ್ ಅಪ್ ಮತ್ತು ರಣಜಿ ಚಾಂಪಿಯನ್ ಆಗಿತ್ತು.

ಶ್ರೇಯಸ್ ತವಕ

ಸ್ಪಿನ್ನರ್–ಆಲ್‌ರೌಂಡರ್ ಶ್ರೇಯಸ್ ಗೋಪಾಲ್ ಈ ಸಲ ಚೆನ್ನೈ ಸೂಪರ್ ಕಿಂಗ್ಸ್‌ನಲ್ಲಿ ಆಡುವರು. ಈ ಹಿಂದೆ ಮುಂಬೈ ಇಂಡಿಯನ್ಸ್, ರಾಜಸ್ಥಾನ ರಾಯಲ್ಸ್ ತಂಡಗಳಲ್ಲಿ ಆಡಿದ್ದರು. ವಿರಾಟ್ ಕೊಹ್ಲಿ, ಎಬಿ ಡಿವಿಯರ್ಸ್ ಸೇರಿದಂತೆ ಹಲವು ದಿಗ್ಗಜ ಬ್ಯಾಟರ್‌ಗಳಿಗೆ ತಮ್ಮ ಲೆಗ್‌ಸ್ಪಿನ್ ರುಚಿ ತೋರಿಸಿದ್ದರು. 52 ಪಂದ್ಯಗಳನ್ನು ಆಡಿದ ಅನುಭವ ಅವರಿಗಿದೆ. ಇನ್ನುಳಿದಂತೆ ಬೌಲಿಂಗ್ ಆಲ್‌ರೌಂಡರ್ ಮನ್ವಂತ್ ಕುಮಾರ್, ಶ್ರೀಜಿತ್ ಕೃಷ್ಣನ್, ಲವ್‌ನೀತ್ ಸಿಸೊಡಿಯಾ, ಮನೋಜ್ ಭಾಂಡಗೆ ಮತ್ತು ಪ್ರವೀಣ ದುಬೆ ಅವರು ಕಣಕ್ಕಿಳಿಯುವ ಅವಕಾಶಕ್ಕಾಗಿ ಕಾಯುತ್ತಿದ್ದಾರೆ. ತಮ್ಮ ಸಾಮರ್ಥ್ಯ ತೋರಿಸುವ ಕನಸು ಕಾಣುತ್ತಿದ್ದಾರೆ.

ಆರ್‌ಸಿಬಿಗೆ ಮರಳಿದ ದೇವದತ್ತ

ಎಡಗೈ ಬ್ಯಾಟರ್ ದೇವದತ್ತ ಪಡಿಕ್ಕಲ್ ಮತ್ತೆ ರಾಯಲ್ ಚಾಲೆಂಜರ್ಸ್ ಬೆಂಗಳೂರಿಗೆ ಮರಳಿದ್ದಾರೆ. ಒಂದು ವರ್ಷದಲ್ಲಿ ಮೂರು ಮಾದರಿಗಳ ಕ್ರಿಕೆಟ್‌ನಲ್ಲಿ ಅವರು ಭರವಸೆಯ ಆಟವಾಡಿದ್ದಾರೆ. ಆಸ್ಟ್ರೇಲಿಯಾ ಪ್ರವಾಸ ಮಾಡಿದ್ದ ಭಾರತ 'ಎ' ಮತ್ತು ಭಾರತ ಟೆಸ್ಟ್ ತಂಡಗಳಲ್ಲಿ ಆಡಿದ್ದಾರೆ. ಆರ್‌ಸಿಬಿಯ ಮೂಲಕವೇ ಐಪಿಎಲ್ ಪದಾರ್ಪಣೆ ಮಾಡಿದ್ದ ದೇವದತ್ತ, 2022-23ರಲ್ಲಿ ರಾಜಸ್ಥಾನ ರಾಯಲ್ಸ್ ತಂಡಕ್ಕೆ ₹7.75 ಕೋಟಿಗೆ ಸೇರ್ಪಡೆಯಾಗಿದ್ದರು. ಆದರೆ ಅಲ್ಲಿ ಅವರು ಹೆಚ್ಚು ರನ್ ಗಳಿಸಲಿಲ್ಲ. ಹೋದ ವರ್ಷ ಲಖನೌ ಸೂಪರ್ ಜೈಂಟ್ಸ್ ತಂಡದಲ್ಲಿದ್ದರು. ಆದರೆ ಆರ್‌ಸಿಬಿಯಲ್ಲಿದ್ದಾಗ ಅವರು ಶತಕ ಗಳಿಸಿದ್ದರು. ವಿರಾಟ್ ಕೊಹ್ಲಿ ಅವರೊಂದಿಗಿನ ಜೊತೆಯಾಟಗಳ ಮೂಲಕ ತಂಡಕ್ಕೆ ಜಯದ ಕಾಣಿಕೆ ನೀಡಿದ್ದರು.

ಪ್ರಸಿದ್ಧ ವಿಕೆಟ್ ಬೇಟೆ...

ವೇಗಿ ಪ್ರಸಿದ್ಧ ಕೃಷ್ಣ ಈ ಬಾರಿ ಗುಜರಾತ್ ಟೈಟನ್ಸ್‌ನಲ್ಲಿ ಆಡಲಿದ್ದಾರೆ. ಈ ಹಿಂದೆ ಅವರು ರಾಜಸ್ಥಾನ ರಾಯಲ್ಸ್ ಮತ್ತು ಕೋಲ್ಕತ್ತ ನೈಟ್ ರೈಡರ್ಸ್‌ನಲ್ಲಿ ಆಡಿದ್ದರು. 51 ಪಂದ್ಯಗಳಿಂದ 49 ವಿಕೆಟ್ ಗಳಿಸಿದ್ದಾರೆ. ಈ ಅವಧಿಯಲ್ಲಿ ಅವರು ಗಾಯದ ಸಮಸ್ಯೆಯಿಂದಾಗಿ ಬಳಲಿದರೂ ಮತ್ತೆ ಮರಳಿ ಬಂದು ತಮ್ಮ ಸ್ವಿಂಗ್ ಅಸ್ತ್ರಗಳನ್ನು ಪ್ರಯೋಗಿಸಿದ್ದಾರೆ. ಈಚೆಗೆ ಭಾರತ ತಂಡದಲ್ಲಿಯೂ ಆಡಿದ್ದರು.

ನಿಯಮಗಳಲ್ಲಿ ಬದಲಾವಣೆ

ಈ ಬಾರಿಯ ಐಪಿಎಲ್‌ನಲ್ಲಿ ಹೊಸ ನಿಯಮಗಳನ್ನು ಅನ್ವಯಿಸಲಾಗುತ್ತಿದೆ.

ಬದಲಾದ ನಿಯಮಗಳಲ್ಲಿ ಪ್ರಮುಖವಾಗಿರುವುದು ಚೆಂಡಿಗೆ ಹೊಳಪು ನೀಡಲು ಬೌಲರ್‌ಗಳಿಗೆ ಎಂಜಲು ಬಳಕೆಗೆ ಇದ್ದ ನಿಷೇಧ ತೆಗೆದುಹಾಕಿರುವುದು. ಕೋವಿಡ್ ಸಾಂಕ್ರಾಮಿಕದ ವೇಳೆ ಈ ನಿಷೇಧ ಹೇರಲಾಗಿತ್ತು. 2022ರಲ್ಲಿ ಐಸಿಸಿ ಈ ನಿಯಮವನ್ನು ಕಾಯಂಗೊಳಿಸಿತ್ತು. ಐಪಿಎಲ್ ನಾಯಕರ ಸಭೆಯಲ್ಲಿ ಹೊಸ ನಿಯಮಕ್ಕೆ ಒಪ್ಪಿಗೆ ನೀಡಲಾಗಿದೆ.

ಇಬ್ಬನಿಯು ಫಲಿತಾಂಶದ ಮೇಲೆ ಪರಿಣಾಮ ಬೀರುವುದನ್ನು ತಡೆಯಲು, ಎರಡನೇ ಇನಿಂಗ್ಸ್‌ನ 11ನೇ ಓವರಿನಲ್ಲಿ ಆನ್‌ಫೀಲ್ಡ್ ಅಂಪೈರ್ ವಿವೇಚನೆಗೆ ಒಳಪಟ್ಟು ಚೆಂಡು ಬದಲಾಯಿಸಲು ಅವಕಾಶ ನೀಡಲಾಗಿದೆ. ಮಧ್ಯಾಹ್ನದ ಪಂದ್ಯಗಳಿಗೆ ಇದು ಅನ್ವಯಿಸುವುದಿಲ್ಲ. ಚೆಂಡು ಪುಟಿತದ ಎತ್ತರಕ್ಕೆ, ಆಫ್‌ಸೈಡ್ ವೈಡ್ ಘೋಷಣೆ ವೇಳೆ ತೀರ್ಪು ಮರುಪರಿಶೀಲನೆ (ಡಿಆರ್‌ಎಸ್) ಅನ್ವಯಿಸಲು ಈ ಐಪಿಎಲ್‌ನಲ್ಲಿ ಅವಕಾಶ ನೀಡಲಾಗಿದೆ.

ನಾಯಕರಿಗೆ ನಿಷೇಧ ಇಲ್ಲ: ಪಂದ್ಯದ ವೇಳೆ, ಯಾವುದೇ ತಂಡವು ನಿಧಾನಗತಿ ಬೌಲಿಂಗ್ ಮಾಡಿದರೆ ಇನ್ನು ಮುಂದೆ ನಾಯಕನಿಗೆ ಪಂದ್ಯದಿಂದ ನಿಷೇಧ ಹೇರಲಾಗುವುದಿಲ್ಲ. ಬದಲಾಗಿ ಡೀಮೆರಿಟ್ ಪಾಯಿಂಟ್ ವಿಧಿಸಲಾಗುತ್ತದೆ.

ಮುಂಬೈ ಇಂಡಿಯನ್ಸ್ ಹಾಗೂ ಡೆಲ್ಲಿ ಕ್ಯಾಪಿಟಲ್ಸ್ ತಂಡಗಳು ಕಳೆದ ಆವೃತ್ತಿಯಲ್ಲಿ ಮೂರು ಬಾರಿ ನಿಧಾನಗತಿ ಬೌಲಿಂಗ್ ಮಾಡಿದ್ದವು. ನಾಯಕರಾದ ಹಾರ್ದಿಕ್ ಪಾಂಡ್ಯ ಮತ್ತು ರಿಷಭ್ ಪಂತ್ ಅವರಿಗೆ ಒಂದು ಪಂದ್ಯದ ನಿಷೇಧ ಹೇರಲಾಗಿತ್ತು. ಪಂತ್, 2024ರಲ್ಲೇ ಒಂದು ಪಂದ್ಯದಿಂದ ಹೊರಗುಳಿದಿದ್ದರು. ಹಾರ್ದಿಕ್, ಈ ಬಾರಿ ಮುಂಬೈನ ಮೊದಲ ಪಂದ್ಯದಲ್ಲಿ ಆಡುತ್ತಿಲ್ಲ. ಸೂರ್ಯಕುಮಾರ್ ಯಾದವ್ ತಂಡ ಮುನ್ನಡೆಸಲಿದ್ದಾರೆ.

ಸಾಕಷ್ಟು ಚರ್ಚೆಗೊಳಗಾದರೂ ಇಂಪ್ಯಾಕ್ಟ್ ಪ್ಲೇಯರ್ ನಿಯಮ ಉಳಿದುಕೊಂಡಿದೆ.

ಐಪಿಎಲ್: ಈತನಕ ಪ್ರಶಸ್ತಿ ಗೆದ್ದ ತಂಡಗಳು

ವರ್ಷ	ಚಾಂಪಿಯನ್	ರನ್ನರ್ಸ್ ಅಪ್
2008	ರಾಜಸ್ಥಾನ ರಾಯಲ್ಸ್	ಚೆನ್ನೈ ಸೂಪರ್ ಕಿಂಗ್ಸ್
2009	ಡೆಕ್ಕನ್ ಚಾರ್ಜರ್ಸ್	ರಾಯಲ್ ಚಾಲೆಂಜರ್ಸ್ ಬೆಂಗಳೂರು
2010	ಚೆನ್ನೈ ಸೂಪರ್ ಕಿಂಗ್ಸ್	ಮುಂಬೈ ಇಂಡಿಯನ್ಸ್
2011	ಚೆನ್ನೈ ಸೂಪರ್ ಕಿಂಗ್ಸ್	ರಾಯಲ್ ಚಾಲೆಂಜರ್ಸ್ ಬೆಂಗಳೂರು
2012	ಕೋಲ್ಕತ್ತ ನೈಟ್ ರೈಡರ್ಸ್	ಚೆನ್ನೈ ಸೂಪರ್ ಕಿಂಗ್ಸ್
2013	ಮುಂಬೈ ಇಂಡಿಯನ್ಸ್	ಚೆನ್ನೈ ಸೂಪರ್ ಕಿಂಗ್ಸ್
2014	ಕೋಲ್ಕತ್ತ ನೈಟ್ ರೈಡರ್ಸ್	ಕಿಂಗ್ಸ್ ಇಲೆವೆನ್ ಪಂಜಾಬ್
2015	ಮುಂಬೈ ಇಂಡಿಯನ್ಸ್	ಚೆನ್ನೈ ಸೂಪರ್ ಕಿಂಗ್ಸ್
2016	ಸನ್‌ರೈಸರ್ಸ್ ಹೈದರಾಬಾದ್	ರಾಯಲ್ ಚಾಲೆಂಜರ್ಸ್ ಬೆಂಗಳೂರು
2017	ಮುಂಬೈ ಇಂಡಿಯನ್ಸ್	ರೈಸಿಂಗ್ ಪುಣೆ ಸೂಪರ್‌ಜೈಂಟ್ಸ್
2018	ಚೆನ್ನೈ ಸೂಪರ್ ಕಿಂಗ್ಸ್	ಸನ್‌ರೈಸರ್ಸ್ ಹೈದರಾಬಾದ್
2019	ಮುಂಬೈ ಇಂಡಿಯನ್ಸ್	ಚೆನ್ನೈ ಸೂಪರ್ ಕಿಂಗ್ಸ್
2020	ಮುಂಬೈ ಇಂಡಿಯನ್ಸ್	ಡೆಲ್ಲಿ ಕ್ಯಾಪಿಟಲ್ಸ್
2021	ಚೆನ್ನೈ ಸೂಪರ್ ಕಿಂಗ್ಸ್	ಕೋಲ್ಕತ್ತ ನೈಟ್ ರೈಡರ್ಸ್
2022	ಗುಜರಾತ್ ಟೈಟನ್ಸ್	ರಾಜಸ್ಥಾನ ರಾಯಲ್ಸ್
2023	ಚೆನ್ನೈ ಸೂಪರ್ ಕಿಂಗ್ಸ್	ಗುಜರಾತ್ ಟೈಟನ್ಸ್
2024	ಕೋಲ್ಕತ್ತ ನೈಟ್ ರೈಡರ್ಸ್	ಸನ್‌ರೈಸರ್ಸ್ ಹೈದರಾಬಾದ್

ಶ್ರೇಯಾ ಹಾಡು, ದಿಶಾ ನೃತ್ಯ

ದಿಶಾ ಪಾಟನಿ

ಕೋಲ್ಕತ್ತದ ಈಡನ್ ಗಾರ್ಡನ್‌ನಲ್ಲಿ ಐಪಿಎಲ್ ಕ್ರಿಕೆಟ್ ಟೂರ್ನಿಯ 18ನೇ ಆವೃತ್ತಿಗೆ ಶನಿವಾರ ಅದ್ದೂರಿ ಚಾಲನೆ ದೊರೆಯಲಿದೆ. ಉದ್ಘಾಟನಾ ಸಮಾರಂಭದಲ್ಲಿ ಹಿನ್ನೆಲೆ ಗಾಯಕಿ ಶ್ರೇಯಾ ಘೋಷಾಲ್, ಗಾಯಕರಾದ ಅರಿಜಿತ್ ಸಿಂಗ್ ಮತ್ತು ಕರಣ್ ಔಜ್ಲಾ ಅವರು ಹಾಡಲಿದ್ದಾರೆ. ನಟಿ ದಿಶಾ ಪಾಟನಿ, ಶ್ರದ್ಧಾ ಕಪೂರ್ ಮತ್ತು ನಟ ವರುಣ್ ಧವನ್ ಅವರ ನೃತ್ಯ ಕಾರ್ಯಕ್ರಮ ನಡೆಯಲಿದೆ. ಸಮಾರಂಭ ಸಂಜೆ 6 ಗಂಟೆಗೆ ಆರಂಭವಾಗಲಿದೆ.

ರಾಜ್ಯದ ಆಟಗಾರರ ಮೌಲ್ಯ

- **ಕೆ.ಎಲ್.ರಾಹುಲ್** (ಡೆಲ್ಲಿ ಕ್ಯಾಪಿಟಲ್ಸ್) ₹14 ಕೋಟಿ
- **ಪ್ರಸಿದ್ಧ ಕೃಷ್ಣ** (ಗುಜರಾತ್ ಟೈಟನ್ಸ್) ₹9.50 ಕೋಟಿ
- **ಅಭಿನವ್ ಮನೋಹರ್** (ಸನ್‌ರೈಸರ್ಸ್ ಹೈದರಾಬಾದ್) ₹3.20 ಕೋಟಿ
- **ದೇವದತ್ತ ಪಡಿಕ್ಕಲ್** (ರಾಯಲ್ ಚಾಲೆಂಜರ್ಸ್ ಬೆಂಗಳೂರು) ₹2 ಕೋಟಿ
- **ವೈಶಾಖ ವಿಜಯಕುಮಾರ್** (ಪಂಜಾಬ್ ಕಿಂಗ್ಸ್) ₹1.80 ಕೋಟಿ
- ● ಮನೀಶ್ ಪಾಂಡೆ (ಕೋಲ್ಕತ್ತ ನೈಟ್ ರೈಡರ್ಸ್) ₹75 ಲಕ್ಷ
- ● ಕರುಣ್ ನಾಯರ್ (ಡೆಲ್ಲಿ ಕ್ಯಾಪಿಟಲ್ಸ್) ₹50 ಲಕ್ಷ
- ● ಮನ್ವಂತ್ ಕುಮಾರ್ (ಡೆಲ್ಲಿ ಕ್ಯಾಪಿಟಲ್ಸ್) ₹30 ಲಕ್ಷ
- ● ಶ್ರೇಯಸ್ ಗೋಪಾಲ್ (ಚೆನ್ನೈ ಸೂಪರ್ ಕಿಂಗ್ಸ್) ₹30 ಲಕ್ಷ
- ● ಶ್ರೀಜಿತ್ ಕೃಷ್ಣನ್ (ಮುಂಬೈ ಇಂಡಿಯನ್ಸ್) ₹30 ಲಕ್ಷ
- ● ಲವ್‌ನೀತ್ ಸಿಸೋಡಿಯಾ (ಕೋಲ್ಕತ್ತ ನೈಟ್ ರೈಡರ್ಸ್ ₹30 ಲಕ್ಷ
- ● ಮನೋಜ್ ಭಾಂಡಗೆ (ಆರ್‌ಸಿಬಿ) ₹30 ಲಕ್ಷ
- ● ಪ್ರವೀಣ್ ದುಬೆ (ಪಂಜಾಬ್ ಕಿಂಗ್ಸ್) ₹30 ಲಕ್ಷ

ಹೊಸ ಚಿಗುರು

ವೈಭವ್ ಸೂರ್ಯವಂಶಿ

ತಂಡ: ರಾಜಸ್ಥಾನ ರಾಯಲ್ಸ್
ವಯಸ್ಸು: 13

ಬಿಹಾರದ ಎಡಗೈ ಬ್ಯಾಟರ್ ಐಪಿಎಲ್ ತಂಡದಲ್ಲಿ ಸ್ಥಾನ ಪಡೆದಿರುವ ಅತಿ ಕಿರಿಯ ವಯಸ್ಸಿನ ಆಟಗಾರ. ಕಳೆದ ಮೆಗಾ ಹರಾಜು ಪ್ರಕ್ರಿಯೆಯಲ್ಲಿ ರಾಜಸ್ಥಾನ ರಾಯಲ್ಸ್ ತಂಡವು ₹ 1.1 ಕೋಟಿಗೆ ಖರೀದಿಸಿತ್ತು. 5 ಪ್ರಥಮ ದರ್ಜೆ ಪಂದ್ಯಗಳಲ್ಲಿ 100 ರನ್ ಗಳಿಸಿದ್ದಾರೆ. 1 ಟಿ20 ಮತ್ತು 6 ಲಿಸ್ಟ್ 'ಎ' ಪಂದ್ಯಗಳಲ್ಲಿ ಆಡಿದ್ದಾರೆ.

ರಾಬಿನ್ ಮಿಂಜ್

ತಂಡ: ಮುಂಬೈ ಇಂಡಿಯನ್ಸ್
ವಯಸ್ಸು: 22

ಜಾರ್ಖಂಡ್ ತಂಡದ 'ಕ್ರಿಸ್ ಗೇಲ್' ಎಂದೇ ಚಿರಪರಿಚಿತರಾಗಿರುವ ರಾಬಿನ್ ಅವರು ಈ ಬಾರಿ ಮುಂಬೈ ಇಂಡಿಯನ್ಸ್ ತಂಡದಲ್ಲಿ ಸ್ಥಾನ ಪಡೆದಿದ್ದಾರೆ. ಮಾಜಿ ಸೈನಿಕ ಫ್ರಾನ್ಸಿಸ್ ಝೇವಿಯರ್ ಮಿಂಜ್ ಹಾಗೂ ಎಲಿಸ್ ಮಿಂಜ್ ದಂಪತಿಯ ಮಗ. ಫ್ರಾನ್ಸಿಸ್ ಅವರು ಈಗ ರಾಂಚಿ ವಿಮಾನ ನಿಲ್ದಾಣದಲ್ಲಿ ಭದ್ರತಾ ಸಿಬ್ಬಂದಿಯಾಗಿದ್ದಾರೆ.

ಸುಯಶ್ ಶೆಡ್ಗೆ

ತಂಡ: ಪಂಜಾಬ್ ಕಿಂಗ್ಸ್
ವಯಸ್ಸು: 22

ಮುಂಬೈನ ಸುಯಶ್ ಭರವಸೆಯ ಆಲ್‌ರೌಂಡರ್ ಆಗಿದ್ದಾರೆ. ಈ ಸಲದ ಸೈಯದ್ ಮುಷ್ತಾಕ್ ಅಲಿ ಟಿ20 ಟೂರ್ನಿಯಲ್ಲಿ ಮುಂಬೈ ತಂಡದ ಜಯದಲ್ಲಿ ಸುಯಶ್ ಪ್ರಮುಖ ಪಾತ್ರ ವಹಿಸಿದ್ದರು. ಅವರು 7 ಪ್ರಥಮ ದರ್ಜೆ ಪಂದ್ಯಗಳಿಂದ 404 ರನ್ ಗಳಿಸಿದ್ದಾರೆ.

ರಿಯಾನ್ ರಿಕೆಲ್ಟನ್

ತಂಡ: ಮುಂಬೈ ಇಂಡಿಯನ್ಸ್
ವಯಸ್ಸು: 28

ದಕ್ಷಿಣ ಆಫ್ರಿಕಾದ ವಿಕೆಟ್‌ಕೀಪರ್–ಬ್ಯಾಟರ್. ಬೀಸುಹೊಡೆತಗಳಿಂದಾಗಿ ಗಮನ ಸೆಳೆದಿದ್ದಾರೆ. ವಿದ್ಯಾರ್ಥಿ ದೆಸೆಯಲ್ಲಿ ರಗ್ಬಿ ಆಟಗಾರನಾಗಿದ್ದ ರಿಯಾನ್ ಅವರು ಉತ್ತಮ ಫಿಟ್‌ನೆಸ್ ಹೊಂದಿದ್ದಾರೆ. ಚುರುಕಾದ ಕೀಪಿಂಗ್ ಅವರ ವಿಶೇಷತೆ.

ಕಾರ್ಬಿನ್ ಬಾಷ್

ತಂಡ: ಮುಂಬೈ ಇಂಡಿಯನ್ಸ್ **ವಯಸ್ಸು:** 30

ಕಾರ್ಬಿನ್ ಬಾಷ್, ದಕ್ಷಿಣ ಆಫ್ರಿಕಾದ ವೇಗದ ಬೌಲಿಂಗ್ ಆಲ್‌ರೌಂಡರ್. ಮುಂಬೈ ತಂಡದ ಲಿಝಾರ್ಡ್ ವಿಲಿಯಮ್ಸ್ ಅವರು ಗಾಯಗೊಂಡು ಹೊರನಡೆದ ಕಾರಣ ಬಾಷ್ ಅವರು ವೈಲ್ಡ್ ಕಾರ್ಡ್ ಎಂಟ್ರಿ ಪಡೆದರು. ಹಾರ್ದಿಕ್ ಪಾಂಡ್ಯ ನಾಯಕತ್ವದಲ್ಲಿ ಆಡಲಿದ್ದಾರೆ.

ವಿಪ್ರಜ್ ನಿಗಮ್

ತಂಡ: ಡೆಲ್ಲಿ ಕ್ಯಾಪಿಟಲ್ಸ್ **ವಯಸ್ಸು:** 20

ಉತ್ತರಪ್ರದೇಶದ ಲೆಗ್‌ಸ್ಪಿನ್ ಬೌಲರ್. ಯುಪಿ ಟಿ20 ಟೂರ್ನಿಯಲ್ಲಿ 11 ಇನಿಂಗ್ಸ್‌ಗಳಿಂದ 20 ವಿಕೆಟ್ ಗಳಿಸಿದ್ದರು.

ಇಶಾನ್ ಮಾಲಿಂಗ

ತಂಡ: ಸನ್‌ರೈಸರ್ಸ್ ಹೈದರಾಬಾದ್
ವಯಸ್ಸು: 24

ಶ್ರೀಲಂಕಾ ತಂಡದ ವೇಗದ ಬೌಲರ್. 5 ಅಂತರರಾಷ್ಟ್ರೀಯ ಏಕದಿನ ಪಂದ್ಯಗಳಲ್ಲಿ ಅವರು ಆಡಿದ್ದಾರೆ. ಲಂಕಾ ಕ್ರಿಕೆಟ್ ದಿಗ್ಗಜ ಲಸಿತ್ ಮಾಲಿಂಗ ಅವರ ಮಾದರಿಯ ಬೌಲಿಂಗ್ ಶೈಲಿ ಇಶಾನ್ ಅವರದ್ದಲ್ಲ. ಆದರೆ ಪರಿಣಾಮಕಾರಿ ಸ್ವಿಂಗ್ ಅಸ್ತ್ರಗಳನ್ನು ಪ್ರಯೋಗಿಸುವ ಯುವ ಬೌಲರ್ ಅವರಾಗಿದ್ದಾರೆ.

ಪ್ರಿಯಾಂಶ್ ಆರ್ಯ

ತಂಡ: ಪಂಜಾಬ್ ಕಿಂಗ್ಸ್
ವಯಸ್ಸು: 24

ಡೆಲ್ಲಿ ಪ್ರೀಮಿಯರ್ ಲೀಗ್ ಟೂರ್ನಿಯ ಪಂದ್ಯದಲ್ಲಿ 50 ಎಸೆತಗಳಲ್ಲಿ 120 ರನ್ ಗಳಿಸಿದ್ದರು. ದೆಹಲಿಯ ಎಡಗೈ ಬ್ಯಾಟರ್ ಸೈಯದ್ ಮುಷ್ತಾಕ್ ಅಲಿ ಟೂರ್ನಿಯಲ್ಲಿಯೂ ಅವರು 325 ರನ್‌ಗಳನ್ನು ಪೇರಿಸಿದ್ದರು.

ಪೂರಕ ಮಾಹಿತಿ: ಪ್ರದೀಶ್

ಐಪಿಎಲ್ ಸುದ್ದಿಗಳು ಪುಟ 12

ಪದಬಂಧ 5989

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಇತರರನ್ನು ಅವಲಂಬಿಸದೇ ಇರುವುದು (5)
3.ಹರುಷದಿಂದಿರುವ ಗಂಡು ವ್ಯಕ್ತಿ (3)
5.ತೆಳುವಾಗಿ ಬಡಿದ ಲೋಹದ ಹಾಳೆ (3)
7.ಜಳಕ ಎಂದಿದ್ದಕ್ಕೇ ಈ ರೋಮಾಂಚನ! (3)
9.ಕಬ್ಬಿಣದ ಭಾರೀ ಪೆಟ್ಟಿಗೆ (3)
12.ಜಗಳಕ್ಕೊಂದು ಪರ್ಯಾಯ ಪದ (3)
14.ಸರಕ್ಕನೆ ಹೋಗಿ ತಂದಿರುವ ಸಾಮಾನು (3)
16.ಹಳೆಯ ಸಾಮಾನುಗಳನ್ನು ಮಾರುವ ಸ್ಥಳ (3)
17.ತೆನಾಲಿರಾಮನಿಗಿದ್ದ ಬಿರುದು (5)

ಮೇಲಿಂದ ಕೆಳಕ್ಕೆ

1.ಆದರದಿಂದ ಬರಮಾಡಿಕೊಳ್ಳುವುದು (3)
2.ಒನಪು ತೋರಿದಾಗ ಬಂದಿರುವ ಸ್ಮರಣೆ (3)
3.ಮಸ್ತಕದ ಹತ್ತಿರವಿರುವ ಹೊತ್ತಗೆ (3)
4.ಹೆಂಡತಿಯ ಸೋದರಿಯ ಗಂಡ (3)
6.ಗಟ್ಟಿಯಾದ ಕೂಗು (3)
8.ಕಳವಳದಿಂದ ತಿಂದಿರುವ ತುತ್ತು ಉಲ್ಟಾ ಆಗಿದೆ (3)
9.ಕುಲದ ಕೊನೆಗಿರುವ ಸಮೂಹ (3)
10. ಮಧುರವಾದ ತುಟಿ (3)
11.ಕತ್ತಿಯ ಅಂಚು (3)
12.ಕರಿಯಲ್ಲಿರುವ ಸುಗಂಧ ದ್ರವ್ಯ (3)
13.ಮಣ್ಣಿನ ಬಾನಿ (3)
15.ಕೂಸಿನ ತಲೆಗೆ ಕಟ್ಟುವ ಟೊಪ್ಪಿಗೆ (3)



5988ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಮಡುಗಟ್ಟು 3.ಅನುಮಾನ
5.ಮದನ 7.ನವರಂಗ
9.ತಿಲಾಂಜಲಿ 12.ಬೆರಕೆ
14.ರತ್ನಾಕರ 15.ರಾಣಿವಾಸ

ಮೇಲಿಂದ ಕೆಳಕ್ಕೆ:
1.ಮಧ್ಯಮ 2.ಗಹನ
3.ಅನುಭವ 4.ನಪಾಸು
6.ದಮಯಂತಿ 7.ನಕಲಿ
8.ಗಡಿಯಾರ 10.ಜನಿವಾರ
11.ದುಸ್ತರ 12.ಬೆರಣಿ
13.ಕೆಲಸ

ಸುಡೊಕು 6374

1		3	5		6		4	
				4			8	
7		4	9			5		3
9	1							8
		7		9			1	
	2							4
8		1		5			6	
	5		1		4	8		9
4		9		6			5	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6373 ಸುಡೊಕು

3	7	6	8	4	2	5	1	9
5	1	8	6	3	9	7	4	2
2	9	4	5	7	1	3	6	8
7	8	9	1	2	6	4	5	3
1	2	3	4	9	5	6	8	7
6	4	5	7	8	3	9	2	1
8	3	7	2	6	4	1	9	5
4	5	2	9	1	7	8	3	6
9	6	1	3	5	8	2	7	4

ಗುಂಡಣ್ಣ

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಶನಿವಾರ ಮಾರ್ಚ್ 22, 2025

ಶ್ರೀ ಕ್ರೋಧಿ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ: ಫಾಲ್ಗುಣ ಕೃಷ್ಣ ಅಷ್ಟಮಿ ಗಂ. 29-24 ನಕ್ಷತ್ರ: ಮೂಲ ಗಂ. 27-24 ಯೋಗ: ವ್ಯತೀಪಾತ ಗಂ. 18-36 ಕರಣ: ಬಾಲವ ಗಂ. 16-59, ಮೀನ ಮಾಸದ 08 ನೇ ದಿನ, ಮಳೆನಕ್ಷತ್ರ: ಉತ್ತರಾಭಾದ್ರ 2.
ರಾಹುಕಾಲ : ಬೆಳಿಗ್ಗೆ 09-00 – 10-30
ಸೂರ್ಯೋದಯ : 06-37 ಸೂರ್ಯಾಸ್ತ : 06-38
ಮುಸ್ಲಿಂ ದಿನಾಂಕ : 21 ರಂಜಾನ್ , ದಿನ ವಿಶೇಷ : ವಾರ್ಸಿತಾಪಾರಂಭ (ಜೈನ್), ಸೀತಾಲಾಷ್ಟಮಿ, ಅದೃಷ್ಟ ಸಂಖ್ಯೆ : 1, 5

ಮೇಷ: ಹೊಸ ರೀತಿಯ ಚಿಂತನೆಗಳು ಫಲಕಾರಿಯಾಗಲು ಸಮಯ ಹಿಡಿದರೂ ಫಲ ನಿಶ್ಚಿತ ಎಂಬುದು ಮನದಟ್ಟಾಗಲಿದೆ. ಉಪ ಆದಾಯದಿಂದ ಬಿಗಡಾಯಿಸಿರುವ ಮನೆಯ ಆರ್ಥಿಕ ಪರಿಸ್ಥಿತಿ ಸುಧಾರಿಸಲಿದೆ.

ವೃಷಭ: ಉದ್ವೇಗ ಹಾಗೂ ಕೆಲ ವೈಮನಸ್ಯಗಳು ತಂದೆಯ ತಿಳಿವಳಿಕೆ ನುಡಿಯಿಂದ ದೂರಾಗುವುದು. ವಿದೇಶಾಗಮನದ ತಯಾರಿಯನ್ನು ನಡೆಸುತ್ತಿರುವವರಿಗೆ ಆಕಸ್ಮಿಕ ಆಘಾತಕಾರಿ ಸುದ್ದಿ ಬರುವುದು.

ಮಿಥುನ: ಕಲಾವಿದರಿಗೆ ಮತ್ತು ಹಾಡುಗಾರರಿಗೆ ಒಳ್ಳೆಯ ದಿನಗಳು ಹಾಗೂ ಇತರ ಕಲೆಗಳಿಗೂ ಪ್ರೋತ್ಸಾಹ ಸಿಗಲಿದೆ. ಸಾಲಗಳಿಂದ ಮುಕ್ತರಾಗಿ ಆಪದ್ಧನವನ್ನು ಸಂಗ್ರಹಿಸಿಟ್ಟುಕೊಳ್ಳುವ ಯೋಗ ಬರಲಿದೆ. ಅನಗತ್ಯ ಅಲೆದಾಟಗಳು ತಪ್ಪಲಿದೆ.

ಕರ್ಕಾಟಕ: ರಾಜಕೀಯ ವ್ಯಕ್ತಿಗಳು ವಿಚಾರಗಳನ್ನು ವಿವಾದಕ್ಕೊಳಗಾಗದಂತೆ ಅರ್ಥ ಮಾಡಿಸುವಲ್ಲಿ ಯಶಸ್ವಿಯಾಗುವಿರಿ. ಕೃಷಿಕರಿಗೆ ಕೆಲಸದಲ್ಲಿ ತೊಡಕುಗಳು ಉಂಟಾಗಬಹುದು. ಹಸಿರು ಬಣ್ಣ ಶುಭ ತರಲಿದೆ.

ಸಿಂಹ: ಧರ್ಮ-ಕರ್ಮಗಳಲ್ಲಿ ಆಸಕ್ತಿ ತೋರಿದರೆ, ಕಾರ್ಯ ಕ್ಷೇತ್ರದಲ್ಲಿ ಹಾಗೂ ಜೀವನದಲ್ಲಿ ಅಭೀಷ್ಟಫಲವನ್ನು ಪಡೆಯಬಹುದು. ದಿನದಿಂದ ದಿನಕ್ಕೆ ತಾಯಿಯ ಆರೋಗ್ಯದಲ್ಲಿ ಸುಧಾರಣೆ ಕಾಣಬಹುದು.

ಕನ್ಯಾ: ಸಾಮರ್ಥ್ಯ, ದಕ್ಷತೆ ಹಾಗೂ ಸೇವಾ ಮನೋಭಾವಗಳಿಂದಾಗಿ ಸಂಘ ಸಂಸ್ಥೆಯಲ್ಲಿ ಜವಾಬ್ದಾರಿಯುತವಾಗಿರುವ ಹುದ್ದೆ ನಿಮ್ಮದಾಗಿಸಿಕೊಳ್ಳುವಿರಿ. ವಿದ್ಯಾರ್ಥಿಗಳಿಗೆ ಓದಿನಲ್ಲಿ ಅತೀವ ಆಸಕ್ತಿ ಇರುವುದು.

ತುಲಾ: ಆಫೀಸಿನಲ್ಲಿ ಯಾರೊಂದಿಗೂ ಸಲುಗೆ ಬೆಳೆಸದೆ ಬಿಗುವಾಗಿ ನಡೆದುಕೊಳ್ಳುವುದೇ ಸೂಕ್ತ. ಇಂದು ಆಗುವ ಹೊಸ ಗೆಳೆಯರ ಪರಿಚಯ ಮುಂದಿನ ಹೂಡಿಕೆಗಳಲ್ಲಿ ಹೆಚ್ಚಿನ ಲಾಭ ತರುವುದು.

ವೃಶ್ಚಿಕ: ಬಹಳ ದಿನಗಳಿಂದ ಉಳಿದುಕೊಂಡಿದ್ದ ಕೆಲಸವೊಂದನ್ನು ಮುಂದು ವರಿಸಲು ಮತ್ತೆ ಕಾಲ ಕೂಡಿಬರಲಿದೆ. ಬಟ್ಟೆ ವ್ಯಾಪಾರಿಗಳಿಗೆ ಉತ್ತಮ ಮಾರಾಟ ಹಾಗೂ ಲಾಭವಾಗುವುದು. ಜ್ಞಾನವನ್ನು ಹಂಚಿಕೊಳ್ಳಿ.

ಧನು: ಆದರ್ಶವಾದಿ ಗುಂಪಿನ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವುದರಿಂದ ವ್ಯಕ್ತಿತ್ವದಲ್ಲಿ ಒಳ್ಳೆಯ ಬದಲಾವಣೆಗಳಾಗುವುದು. ಈಗಿನದ್ದಕ್ಕಿಂತ ಹೆಚ್ಚಿನ ಬಂಡವಾಳ ಹೂಡುವಂತೆ ಮಗನಿಂದ ಒತ್ತಾಯ ಹೆಚ್ಚಲಿದೆ.

ಮಕರ: ಹಲವು ಅವಕಾಶಗಳು ಎದುರಾಗಿದ್ದರೂ ಗೊಂದಲಗೊಳ್ಳದೆ ಸರಿಯಾಗಿರುವುದನ್ನೇ ಆಯ್ಕೆ ಮಾಡಿಕೊಳ್ಳುವಿರಿ. ಗುಂಪು ಗುಂಪಾಗಿ ಅಥವಾ ಬೇರೆಯವರೊಂದಿಗೆ ಸೇರಿ ಮಾಡುವ ಕೆಲಸದಿಂದ ಯಶಸ್ಸು ಸಿಗುತ್ತದೆ.

ಕುಂಭ: ದಿನಸಿ ವರ್ತಕರು ವ್ಯಾಪಾರದಲ್ಲಿ ಮತ್ತು ಬಂಡವಾಳ ಹೂಡಿಕೆಯಲ್ಲಿ ಕಾಳಜಿ ವಹಿಸಬೇಕಾಗುವುದು. ಖಾಸಗಿ ಕಾಗದದ ಕಾರ್ಖಾನೆ ಮಾಲೀಕರಿಗೆ ಲಾಭ ದೊರೆಯುತ್ತದೆ. ಕನಸುಗಳು ನನಸಾಗಲಿವೆ.

ಮೀನ: ಹಿತೈಷಿಗಳು ಎಂದು ತಿಳಿದಿರುವಿರೋ ಅವರೇ ಬೆನ್ನ ಹಿಂದೆ ಚೂರಿ ಹಾಕುವ ಕೆಲಸವನ್ನು ಮಾಡುತ್ತಾರೆ. ಸಾಧಕರ ಉಪನ್ಯಾಸವು ಮನಸ್ಸಿಗೆ ಗಾಢ ಪರಿಣಾಮವನ್ನು ಉಂಟುಮಾಡಲಿದೆ.

ತಿರುಮಲ: ವಿವಾದಿತ ಭೂಮಿ ಹಂಚಿಕೆ ರದ್ದು

ಹೈದರಾಬಾದ್: 'ತಿರುಮಲದಲ್ಲಿರುವ ಏಳು ಬೆಟ್ಟಗಳು ವೆಂಕಟೇಶ್ವರನಿಗೆ ಸೇರಿದ್ದಾಗಿವೆ. ಹೀಗಾಗಿ, ಇಲ್ಲಿ ಅಪವಿತ್ರ ಚಟುವಟಿಕೆಗಳು, ವಾಣಿಜ್ಯ ಚಟುವಟಿಕೆಗಳಿಗೆ ಅವಕಾಶ ನೀಡುವುದಿಲ್ಲ' ಎಂದು ಆಂಧ್ರಪ್ರದೇಶ ಮುಖ್ಯಮಂತ್ರಿ ಎನ್. ಚಂದ್ರಬಾಬು ನಾಯ್ಡು ತಿಳಿಸಿದ್ದಾರೆ.

'ತಿರುಮಲ ದೇವಾಲಯದ ಕೆಲಸಗಳಿಗೆ ಹಿಂದೂಗಳನ್ನು ಮಾತ್ರ ನಿಯೋಜಿಸಲಾಗುವುದು. ಜನರ ಧಾರ್ಮಿಕ ನಂಬಿಕೆಗಳನ್ನು ಗೌರವಿಸುವ ನಿಟ್ಟಿನಲ್ಲಿ ಅಲ್ಲಿರುವ ಹಿಂದೂಯೇತರ ನೌಕರರನ್ನು ಬೇರೆಡೆಗೆ ವರ್ಗಾಯಿಸಲಾಗುವುದು' ಎಂದು ಹೇಳಿದ್ದಾರೆ.

'ಇಲ್ಲಿನ ಅಲಿಪಿರಿಯಲ್ಲಿ ಮುಮ್ತಾಜ್ ಹೋಟೆಲ್ ಪ್ರೈವೇಟ್ ಲಿಮಿಟೆಡ್, ಎಂಆರ್‌ಕೆಆರ್ ಹಾಗೂ ದೇವಲೋಕ್ ಪ್ರಾಜೆಕ್ಟ್‌ಗಳಿಗೆ ಮಂಜೂರಾಗಿದ್ದ ಭೂಮಿಯನ್ನು ರದ್ದುಗೊಳಿಸಿದ್ದೇನೆ' ಎಂದು ನಾಯ್ಡು ಶುಕ್ರವಾರ ಖಚಿತಪಡಿಸಿದರು. ಅಲಿಪಿರಿ ಶ್ರೀವಾರಿ ಪಾದಾಲುವಿನಲ್ಲಿ ಹೋಟೆಲ್, ರೆಸಾರ್ಟ್ ನಿರ್ಮಾಣದ ಯೋಜನೆಗಳಿಗೆ ಹಿಂದಿನ ಜಗನ್ ನೇತೃತ್ವದ ಸರ್ಕಾರವು ಭೂಮಿ ಮಂಜೂರು ಮಾಡಿತ್ತು. ಈ ನಿರ್ಧಾರಕ್ಕೆ ಧಾರ್ಮಿಕ ಮುಖಂಡರು, ಸಂತರು ತೀವ್ರ ವಿರೋಧ ವ್ಯಕ್ತಪಡಿಸಿದ್ದರು. ಇದರ ಬೆನ್ನಲ್ಲೇ, ನಾಯ್ಡು ಈ ಕ್ರಮ ಕೈಗೊಂಡಿದ್ದಾರೆ.

₹250 ಕೋಟಿ ವೆಚ್ಚದಲ್ಲಿ ಅಲಿಪಿರಿಯ 20 ಎಕರೆ ಪ್ರದೇಶದಲ್ಲಿ ರೆಸಾರ್ಟ್ ಹಾಗೂ 100 ಐಷಾರಾಮಿ ವಿಲ್ಲಾಗಳನ್ನು ನಿರ್ಮಿಸಲು ಮುಮ್ತಾಜ್ ಹೋಟೆಲ್ಸ್ ನಿರ್ಧರಿಸಿತ್ತು.

ರಾಜಕಾರಣಿ ಆಗಿದ್ದರೆ ತಕ್ಷಣವೇ 'ಗುರಿ'ಯಾಗುತ್ತಿದ್ದರು: ಸಭಾಪತಿ ಜಗದೀಪ್ ಧನಕರ್

ರಾಜ್ಯಸಭೆ: ಪ್ರತಿಧ್ವನಿಸಿದ 'ನಗದು ಪತ್ತೆ'

ನವದೆಹಲಿ (ಪಿಟಿಐ): ದೆಹಲಿ ಹೈಕೋರ್ಟ್ ನ್ಯಾಯಮೂರ್ತಿ ಯಶವಂತ್ ವರ್ಮಾ ಅವರ ನಿವಾಸದಲ್ಲಿ ಭಾರಿ ಪ್ರಮಾಣದ ನಗದು ಪತ್ತೆಯಾಗಿದೆ ಎನ್ನಲಾದ ಪ್ರಕರಣವು ಶುಕ್ರವಾರ ರಾಜ್ಯಸಭೆಯಲ್ಲೂ ಪ್ರತಿಧ್ವನಿಸಿತು.

ಆಡಳಿತ ಪಕ್ಷ ಮತ್ತು ವಿರೋಧ ಪಕ್ಷದ ನಾಯಕರ ಜತೆ ಸಮಾಲೋಚನೆ ನಡೆಸಿ ಈ ವಿಷಯದ ಬಗ್ಗೆ ರಚನಾತ್ಮಕ ಚರ್ಚೆ ನಡೆಸಲು ಕಾರ್ಯವಿಧಾನವೊಂದನ್ನು ಕಂಡುಕೊಳ್ಳುವುದಾಗಿ ರಾಜ್ಯಸಭಾ ಸಭಾಪತಿ ಜಗದೀಪ್ ಧನಕರ್ ಅವರು ಹೇಳಿದರು.

ಬೆಳಿಗ್ಗೆಯ ಕಲಾಪದಲ್ಲಿ ಈ ವಿಷಯ ಪ್ರಸ್ತಾಪಿಸಿದ ಕಾಂಗ್ರೆಸ್ ಸಂಸದ ಜೈರಾಮ್ ರಮೇಶ್, 'ದೆಹಲಿ ಹೈಕೋರ್ಟ್ ನ್ಯಾಯಮೂರ್ತಿಗಳ ನಿವಾಸದಲ್ಲಿ ಭಾರಿ ಪ್ರಮಾಣದ ನಗದು ಪತ್ತೆಯಾದ ಆಘಾತಕಾರಿ ಘಟನೆಯ ಬಗ್ಗೆ ನಾವು ಓದಿದ್ದೇವೆ' ಎಂದರು.



ಅಲಹಾಬಾದ್ ಹೈಕೋರ್ಟ್‌ನ ನ್ಯಾಯಮೂರ್ತಿಯೊಬ್ಬರು ನೀಡಿದ ಹೇಳಿಕೆಗಳಿಗೆ ಸಂಬಂಧಿಸಿದಂತೆ ಸಂಸತ್‌ನ 50 ಸದಸ್ಯರು ಈ ಹಿಂದೆ ಸಭಾಪತಿಗೆ ನೋಟಿಸ್ ಸಲ್ಲಿಸಿದ್ದರು ಎಂಬುದನ್ನೂ ಅವರು ನೆನಪಿಸಿದರು. ನ್ಯಾಯಾಂಗದ ಉತ್ತರದಾಯಿತ್ವದ ಬಗ್ಗೆ ಸಭಾಪತಿ ಈ ಹಿಂದೆ ಹಲವು ಸಲ ಮಾತನಾಡಿದ್ದಾರೆ ಎಂದರು.

'ದಯವಿಟ್ಟು ಈ ಬಗ್ಗೆ ನೀವು ಮಾತನಾಡಬೇಕು. ನ್ಯಾಯಾಂಗದ ಉತ್ತರದಾಯಿತ್ವ ಹೆಚ್ಚಿಸುವ ಕುರಿತ ಪ್ರಸ್ತಾಪವನ್ನು ಮಂಡಿಸಲು ಸರ್ಕಾರಕ್ಕೆ ಸೂಕ್ತ ನಿರ್ದೇಶನಗಳನ್ನು ನೀಡಬೇಕೆಂದು ವಿನಂತಿಸುತ್ತೇನೆ' ಎಂದರು.

ನಗದು ಪತ್ತೆಯಾಗಿದೆ ಎನ್ನಲಾದ ವಿಷಯದ ಬಗ್ಗೆ ಮಾತನಾಡಿದ ಧನಕರ್, ಘಟನೆ ನಡೆದಿದ್ದರೂ ಅದು ತಕ್ಷಣ ಬೆಳಕಿಗೆ ಬಾರದಿರುವುದು 'ಚಿಂತೆ' ಉಂಟುಮಾಡಿದೆ ಎಂದರು.

'ಅಂತಹ ಘಟನೆಯು ರಾಜಕಾರಣಿ, ಅಧಿಕಾರಿ ಅಥವಾ ಯಾವುದೋ ಉದ್ಯಮಿಗೆ ಸಂಬಂಧಿಸಿದ್ದಾಗಿದ್ದರೆ ಸಂಬಂಧಪಟ್ಟ ವ್ಯಕ್ತಿ ತಕ್ಷಣವೇ ಎಲ್ಲರ 'ಗುರಿ'ಯಾಗುತ್ತಿದ್ದರು' ಎಂದರು.

ಇ.ಡಿ ಗಿಂತಲೂ ಒಳ್ಳೆಯ ಕೆಲಸ: ಘಟನೆ ಬಗ್ಗೆ ಪ್ರತಿಕ್ರಿಯಿಸಿರುವ ಕಾಂಗ್ರೆಸ್‌ನ ಮಾಧ್ಯಮ ಮತ್ತು ಪ್ರಚಾರ ವಿಭಾಗದ ಮುಖ್ಯಸ್ಥ ಪವನ್ ಖೇರಾ, 'ಹಣ ಪತ್ತೆ ಮಾಡುವ ಮೂಲಕ ಅಗ್ನಿಶಾಮಕ ದಳವು ಜಾರಿ ನಿರ್ದೇಶನಾಲಯ (ಇ.ಡಿ) ಮತ್ತು ಸಿಬಿಐಗಿಂತ ಒಳ್ಳೆಯ ಕೆಲಸ ಮಾಡಿದೆ' ಎಂದಿದ್ದಾರೆ.

'ನ್ಯಾಯಮೂರ್ತಿ ವರ್ಮಾ ಅವರು ಉನ್ನಾವೊ ಅತ್ಯಾಚಾರ ಪ್ರಕರಣ ಮತ್ತು ಇತರ ಹಲವು ಗಂಭೀರ ಪ್ರಕರಣಗಳ ವಿಚಾರಣೆ ನಡೆಸುತ್ತಿದ್ದರು. ನ್ಯಾಯಾಂಗದ ಮೇಲಿನ ನಂಬಿಕೆಯನ್ನು ಉಳಿಸಿಕೊಳ್ಳಲು, ಅದು ಯಾರ ಹಣ ಮತ್ತು ಅದನ್ನು ನ್ಯಾಯಮೂರ್ತಿಗಳಿಗೆ ಏಕೆ ನೀಡಲಾಯಿತು ಎಂಬುದನ್ನು ಪತ್ತೆಹಚ್ಚುವುದು ಮುಖ್ಯ' ಎಂದು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

'ಇದು ನ್ಯಾಯಾಲಯಕ್ಕೆ ಸಂಬಂಧಿಸಿದ ವಿಚಾರವಾಗಿರುವುದರಿಂದ ಯಾವುದೇ ಪ್ರತಿಕ್ರಿಯೆ ನೀಡುವುದಿಲ್ಲ' ಎಂದು ಬಿಜೆಪಿ ವಕ್ತಾರ ಸಂಬಿತ್ ಪಾತ್ರಾ ಹೇಳಿದ್ದಾರೆ.

ಇದೊಂದು ಗಂಭೀರ ವಿಷಯ. ನ್ಯಾಯಮೂರ್ತಿಯ ವರ್ಗಾವಣೆಯಿಂದ ಈ ವಿವಾದವನ್ನು ಸುಲಭವಾಗಿ ಮುಚ್ಚಿಹಾಕಲು ಸಾಧ್ಯವಿಲ್ಲ

ಪವನ್ ಖೇರಾ
ಎಐಸಿಸಿ ಮಾಧ್ಯಮ ವಿಭಾಗದ ಮುಖ್ಯಸ್ಥ

ಆಘಾತ ವ್ಯಕ್ತಪಡಿಸಿದ ಮುಖ್ಯ ನ್ಯಾಯಮೂರ್ತಿ

ನೋಟು ಪತ್ತೆಯಾಗಿದೆ ಎನ್ನಲಾದ ಪ್ರಕರಣದ ಬಗ್ಗೆ ದೆಹಲಿ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಡಿ.ಕೆ.ಉಪಾಧ್ಯಾಯ ಅವರು ಆಘಾತ ವ್ಯಕ್ತಪಡಿಸಿದ್ದಾರೆ.

ಈ ಘಟನೆಯಿಂದ ತಾವು ಮತ್ತು ಇತರ ಹಲವು ವಕೀಲರು ಆಘಾತಕ್ಕೊಳಗಾಗಿರುವುದಾಗಿ ಹಿರಿಯ ವಕೀಲರೊಬ್ಬರು ಹೇಳಿದಾಗ ಮುಖ್ಯ ನ್ಯಾಯಮೂರ್ತಿ, 'ಎಲ್ಲರ ಹಾಗೆ ನಮಗೂ ಈ ಬಗ್ಗೆ ಅರಿವಿದೆ' ಎಂದು ಪ್ರತಿಕ್ರಿಯೆ ನೀಡಿದ್ದಾರೆ.

'ಈ ಘಟನೆಯು ನಮಗೆ ತುಂಬಾ ನೋವುಂಟು ಮಾಡಿದೆ. ಭವಿಷ್ಯದಲ್ಲಿ ಇಂತಹ ಘಟನೆಗಳು ಸಂಭವಿಸದಂತೆ ಮತ್ತು ನ್ಯಾಯಾಂಗ ವ್ಯವಸ್ಥೆಯ ಮೇಲಿನ ನಂಬಿಕೆಯನ್ನು ಕಾಪಾಡಿಕೊಳ್ಳಲು ದಯವಿಟ್ಟು ನಿಮ್ಮ ಕಡೆಯಿಂದ ಕೆಲವು ಕ್ರಮಗಳನ್ನು ತೆಗೆದುಕೊಳ್ಳಿ' ಎಂದು ಹಿರಿಯ ವಕೀಲ ಅರುಣ್ ಭಾರದ್ವಾಜ್ ಅವರು ಮುಖ್ಯ ನ್ಯಾಯಮೂರ್ತಿ ಉಪಾಧ್ಯಾಯ ಮತ್ತು ನ್ಯಾಯಮೂರ್ತಿ ತುಷಾರ್ ರಾವ್ ಗೆಡೆಲಾ ಅವರಿದ್ದ ಪೀಠಕ್ಕೆ ಮನವಿ ಮಾಡಿದರು.

'ಅಲಹಾಬಾದ್ ಹೈಕೋರ್ಟ್ ಕಸದ ಬುಟ್ಟಿ ಅಲ್ಲ'

ಪ್ರಯಾಗರಾಜ್: 'ನ್ಯಾಯಮೂರ್ತಿ ಯಶವಂತ್ ವರ್ಮಾ ಅವರನ್ನು ಅಲಹಾಬಾದ್ ಹೈಕೋರ್ಟ್‌ಗೆ ಮತ್ತೆ ವರ್ಗಾವಣೆ ಮಾಡಲು ಸುಪ್ರೀಂ ಕೋರ್ಟ್ ನಿರ್ಧರಿಸಿರುವುದು ನಮಗೆ ಅಚ್ಚರಿ ತಂದಿದೆ' ಎಂದು ಅಲಹಾಬಾದ್ ಹೈಕೋರ್ಟ್ ವಕೀಲರ ಸಂಘ ಪ್ರತಿಕ್ರಿಯಿಸಿದೆ.

ಯಶವಂತ್ ಅವರ ವರ್ಗಾವಣೆಯ ಸುದ್ದಿ ಹೊರಬಿದ್ದ ಬೆನ್ನಲ್ಲೇ ವಕೀಲರ ಸಂಘವು ನಿರ್ಣಯ ಹೊರಡಿಸಿದೆ. ಸಂಘದ ಅಧ್ಯಕ್ಷ ಮತ್ತು ಹಿರಿಯ ವಕೀಲ ಅನಿಲ್ ತಿವಾರಿ ಅವರು ಸಹಿ ಮಾಡಿರುವ ನಿರ್ಣಯದಲ್ಲಿ, 'ನ್ಯಾಯಮೂರ್ತಿಗಳ ಮನೆಯಲ್ಲಿ ಸಿಕ್ಕಿರುವ ಹಣ ₹15 ಕೋಟಿ' ಎಂಬ ಅಂಶವೂ ಇದೆ.

'ಈ ಘಟನೆಯ ಬೆನ್ನಲ್ಲೇ ವರ್ಮಾ ಅವರನ್ನು ಅಲಹಾಬಾದ್ ಹೈಕೋರ್ಟ್‌ಗೆ ವರ್ಗಾವಣೆ ಮಾಡಲು ಕೊಲಿಜಿಯಂ ಸರ್ವಾನುಮತದಿಂದ ನಿರ್ಧರಿಸಿದೆ. ಕೊಲಿಜಿಯಂ ನಿರ್ಧಾರವು ಅಲಹಾಬಾದ್ ಹೈಕೋರ್ಟ್ ಎಂದರೆ 'ಕಸದ ಬುಟ್ಟಿಯೇ' ಎಂಬ ಗಂಭೀರ ಪ್ರಶ್ನೆಯನ್ನು ಹುಟ್ಟುಹಾಕುತ್ತದೆ' ಎಂದಿದೆ.

ಸುದ್ದಿ 2 ನಿಮಿಷ

ಮಸೂದೆಗೆ ತಡೆ: ಶೋಭಾ ಪತ್ರ

ನವದೆಹಲಿ: ಕರ್ನಾಟಕ ಸರ್ಕಾರದ ಗುತ್ತಿಗೆಗಳಲ್ಲಿ ಮುಸ್ಲಿಮರಿಗೆ ಶೇ 4 ಮೀಸಲಾತಿ ನೀಡುವ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ (ಕೆಟಿಪಿಪಿ) ತಿದ್ದುಪಡಿ ಮಸೂದೆಯನ್ನು ತಡೆ ಹಿಡಿಯಬೇಕು ಎಂದು ಒತ್ತಾಯಿಸಿ ಸಣ್ಣ ಹಾಗೂ ಮಧ್ಯಮ ಕೈಗಾರಿಕಾ ಖಾತೆಯ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ ಅವರು ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರಿಗೆ ಶುಕ್ರವಾರ ಪತ್ರ ಬರೆದಿದ್ದಾರೆ.

'ಈ ಮಸೂದೆಯು ಅಸಾಂವಿಧಾನಿಕ ಹಾಗೂ ತಾರತಮ್ಯದಿಂದ ಕೂಡಿದೆ. ಇದು ಭಾರತದ ಸಂವಿಧಾನದ ಆಶಯಗಳಿಗೆ ವಿರುದ್ಧ. ಸಾಮಾಜಿಕ ಹಾಗೂ ಆರ್ಥಿಕ ಹಿಂದುಳಿದಿರುವಿಕೆ ಪರಿಗಣಿಸಿ ಮೀಸಲಾತಿ ನೀಡಬಹುದು. ಆದರೆ, ಧರ್ಮದ ಆಧಾರದಲ್ಲಿ ಮೀಸಲಾತಿ ನೀಡಲು ಅವಕಾಶ ಇಲ್ಲ. ಈ ಬಗ್ಗೆ ಸುಪ್ರೀಂ ಕೋರ್ಟ್ ಈ ಹಿಂದೆ ತೀರ್ಪು ನೀಡಿದೆ' ಎಂದು ಅವರು ಪತ್ರದಲ್ಲಿ ತಿಳಿಸಿದ್ದಾರೆ.

ಮುಸ್ಲಿಮರ ಓಲೈಕೆಯ ಭಾಗವಾಗಿ ಕೆಟಿಪಿಪಿ ಕಾಯ್ದೆಗೆ ಸರ್ಕಾರ ತಿದ್ದುಪಡಿ ತಂದಿದೆ. ಆರ್ಥಿಕವಾಗಿ ಹಿಂದುಳಿದವರನ್ನು ಸಬಲೀಕರಣ ಮಾಡುವ ಉದ್ದೇಶ ಇದರ ಹಿಂದಿಲ್ಲ. ಇದೊಂದು ಕೆಟ್ಟ ಪರಂಪರೆ ಹಾಗೂ ಅಪಾಯಕಾರಿ ಬೆಳವಣಿಗೆ. ಇದನ್ನು ವಿರೋಧಿಸಿ ನ್ಯಾಯಾಲಯದ ಮೊರೆ ಹೋಗುವ ಸಾಧ್ಯತೆ ಇದೆ. ಹಿರಿಯ ಕಾನೂನು ತಜ್ಞರ ಅಭಿಪ್ರಾಯ ಪಡೆದು ಭಾರತದ ಸಂವಿಧಾನದ ಆಶಯಕ್ಕೆ ತಕ್ಕಂತೆ ಮುಂದಿನ ತೀರ್ಮಾನ ತೆಗೆದುಕೊಳ್ಳಬೇಕು ಎಂದು ಅವರು ಮನವಿ ಮಾಡಿದ್ದಾರೆ.

ಗುತ್ತಿಗೆ ಜಿಹಾದ್- ಪಾತ್ರಾ ಆರೋಪ: ಈ ಮಸೂದೆಗೆ ವಿಧಾನಸಭೆಯಲ್ಲಿ ಅಂಗೀಕಾರ ಪಡೆಯುವ ಮೂಲಕ ಕಾಂಗ್ರೆಸ್ ಸರ್ಕಾರವು 'ಗುತ್ತಿಗೆ ಜಿಹಾದ್' ಅನುಸರಿಸುತ್ತಿದೆ ಎಂದು ಬಿಜೆಪಿ ರಾಷ್ಟ್ರೀಯ ವಕ್ತಾರ ಸಂಬಿತ್ ಪಾತ್ರಾ ಆರೋಪಿಸಿದರು.

ಶುಕ್ರವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಒತ್ತಡಕ್ಕೆ ಮಣಿದು ಸರ್ಕಾರ ಈ ತೀರ್ಮಾನ ತೆಗೆದುಕೊಂಡಿದೆ. ಇದು ತುಷ್ಟೀಕರಣದ ರಾಜಕೀಯದ ಉತ್ತುಂಗ' ಎಂದರು. ಕಾಂಗ್ರೆಸ್ ತುಷ್ಟೀಕರಣ ರಾಜಕೀಯ ನಡೆಸಿ ಅಲ್ಪಸಂಖ್ಯಾತ ಸಮುದಾಯಕ್ಕೆ ಶೇ 100ರಷ್ಟು ಕೋಟಾವನ್ನೂ ನೀಡಬಹುದು ಎಂದು ಅವರು ಹೇಳಿದರು.

ಎಎಪಿ: ಸೌರಭ್ ಭಾರದ್ವಾಜ್ ದೆಹಲಿ ರಾಜ್ಯ ಘಟಕದ ಅಧ್ಯಕ್ಷ

ನವದೆಹಲಿ (ಪಿಟಿಐ): ದೆಹಲಿ ವಿಧಾನಸಭಾ ಚುನಾವಣೆ ಸೋಲಿನ ಬಳಿಕ ಆಮ್ ಆದ್ಮಿ ಪಕ್ಷವು (ಎಎಪಿ) ಮಾಜಿ ಸಚಿವ ಸೌರಭ್ ಭಾರದ್ವಾಜ್ ಅವರನ್ನು ದೆಹಲಿ ರಾಜ್ಯ ಘಟಕದ ಅಧ್ಯಕ್ಷರನ್ನಾಗಿ ಶುಕ್ರವಾರ ನೇಮಿಸಿದೆ.

ಜಮ್ಮು ಮತ್ತು ಕಾಶ್ಮೀರಕ್ಕೆ ಮೆಹರಾಜ್ ಮಲಿಕ್ ಅವರನ್ನು ಪಕ್ಷದ ಅಧ್ಯಕ್ಷರನ್ನಾಗಿ ಘೋಷಿಸಿದೆ. ಪಂಜಾಬ್‌ನಲ್ಲಿ ಮಾತ್ರ ಅಧಿಕಾರ ಹೊಂದಿರುವ ಎಎಪಿ, ಅಲ್ಲಿ ಮನೀಷ್ ಸಿಸೋಡಿಯಾ ಅವರನ್ನು ರಾಜ್ಯ ಉಸ್ತುವಾರಿಯನ್ನಾಗಿ ನೇಮಿಸಿದೆ.

ಉಳಿದಂತೆ ಗುಜರಾತ್‌ನಲ್ಲಿ ಗೋಪಾಲ್ ರಾಯ್, ಛತ್ತೀಸಗಢಕ್ಕೆ ಸಂದೀಪ್ ಪಾಠಕ್, ಪಂಕಜ್ ಗುಪ್ತಾ ಅವರನ್ನು ಗೋವಾದಲ್ಲಿ ಉಸ್ತುವಾರಿಯನ್ನಾಗಿ ನೇಮಿಸಲಾಗಿದೆ.

ಅಲಹಾಬಾದ್ ಹೈಕೋರ್ಟ್ ತೀರ್ಪಿನ ವಿರುದ್ಧ ಆಕ್ರೋಶ

'ಸುಪ್ರೀಂ' ಮಧ್ಯಪ್ರವೇಶಿಸಲಿ: ಸಚಿವೆ

ನವದೆಹಲಿ (ಪಿಟಿಐ): ಸ್ತನಗಳನ್ನು ಹಿಡಿದುಕೊಳ್ಳುವುದು, ಪೈಜಾಮಾದ ದಾರವನ್ನು ಕಳಚುವುದು ಅತ್ಯಾಚಾರ ಅಥವಾ ಅತ್ಯಾಚಾರ ಯತ್ನದ ಅಪರಾಧ ಆಗುವುದಿಲ್ಲ ಎಂದಿರುವ ಅಲಹಾಬಾದ್ ಹೈಕೋರ್ಟ್ ತೀರ್ಪಿನ ವಿರುದ್ಧ ಸುಪ್ರೀಂ ಕೋರ್ಟ್ ಕೂಡಲೇ ಮಧ್ಯಪ್ರವೇಶಿಸಬೇಕು ಎಂದು ಕೇಂದ್ರ ಸಚಿವೆ ಅನ್ನಪೂರ್ಣ ದೇವಿ ಅವರು ಶುಕ್ರವಾರ ಒತ್ತಾಯಿಸಿದರು.

ಸಂಸತ್ತಿನ ಹೊರಗೆ ಸುದ್ದಿಗಾರರೊಂದಿಗೆ ಮಾತನಾಡಿದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ, 'ಅಲಹಾಬಾದ್ ಹೈಕೋರ್ಟ್ ತೀರ್ಪನ್ನು ಒಪ್ಪಲು ಸಾಧ್ಯವಿಲ್ಲ. ನಾಗರಿಕ ಸಮಾಜದಲ್ಲಿ ಇಂಥ ತೀರ್ಪಿಗೆ ಜಾಗವಿಲ್ಲ' ಎಂದು ಕಟುವಾಗಿ ಹೇಳಿದರು.

'ಇಂಥ ತೀರ್ಪಿನಿಂದ ಸಮಾಜಕ್ಕೆ ತಪ್ಪು ಸಂದೇಶ ರವಾನೆಯಾಗುತ್ತದೆ. ಸಮಾಜದಲ್ಲಿ ಋಣಾತ್ಮಕ ಪರಿಣಾಮ ಬೀರುತ್ತದೆ' ಎಂದು ಹೇಳಿದರು.

2021ರಲ್ಲಿ 11 ವರ್ಷದ ಬಾಲಕಿಯ ಮೇಲೆ ಇಬ್ಬರು ದಾಳಿ ನಡೆಸಿದ್ದರು. ಆದರೆ ಆರೋಪಿಗಳು ಸಂತ್ರಸ್ತೆಯ ಮೇಲೆ ಅತ್ಯಾಚಾರ ಎಸಗುವ ತೀರ್ಮಾನ ಮಾಡಿದ್ದರು ಎಂಬುದನ್ನು ಸೂಚಿಸುವ ಯಾವುದೇ ಅಂಶಗಳು ಇಲ್ಲ ಎಂದು ಹೈಕೋರ್ಟ್ ತೀರ್ಪು ನೀಡಿದೆ.

ಬೇಜವಾಬ್ದಾರಿಯುತ ನ್ಯಾಯಮೂರ್ತಿಗಳ ವಿಚಾರದಲ್ಲಿ ಸುಪ್ರೀಂ ಕೋರ್ಟ್ ಮೃದು ನಿಲುವು ಹೊಂದಿದೆ
ಕಪಿಲ್ ಸಿಬಲ್, ಸುಪ್ರೀಂ ಕೋರ್ಟ್ ಬಾರ್ ಅಸೋಸಿಯೇಷನ್ ಅಧ್ಯಕ್ಷ

ನ್ಯಾಯಮೂರ್ತಿಯ ವೈಯಕ್ತಿಕ ಅಭಿಪ್ರಾಯಕ್ಕೆ ನ್ಯಾಯಾಲಯದಲ್ಲಿ ಜಾಗವಿಲ್ಲ. ಅವರು ಕಾನೂನು ಮತ್ತು ನ್ಯಾಯಶಾಸ್ತ್ರವನ್ನು ಪಾಲಿಸಬೇಕು
ಪಿ.ಕೆ.ದುಬೆ, ಹಿರಿಯ ವಕೀಲ

ಅಲಹಾಬಾದ್ ಹೈಕೋರ್ಟ್ ತೀರ್ಪು ನಾಚಿಕೆಗೇಡು ಮತ್ತು ಅದನ್ನು ಒಪ್ಪಲು ಸಾಧ್ಯವೇ ಇಲ್ಲ. ಅವರು ಸಮಾಜಕ್ಕೆ ಯಾವ ಸಂದೇಶ ನೀಡುತ್ತಿದ್ದಾರೆ? ಬಾಲಕಿಯೊಬ್ಬಳು ಭೀಕರ ದೌರ್ಜನ್ಯಕ್ಕೆ ಒಳಗಾಗಿದ್ದಾಳೆ. ಆದರೂ ಅದನ್ನು ಅತ್ಯಾಚಾರ ಎಂದು ಪರಿಗಣಿಸುವುದಿಲ್ಲ ಎಂದರೆ ಏನರ್ಥ?
ಸ್ವಾತಿ ಮಾಲೀವಾಲ್, ರಾಜ್ಯಸಭಾ ಸದಸ್ಯೆ

'ಕಲಾವಾ' ಪ್ರಯಾಗರಾಜ್‌ನಿಂದ ಸುಮಾರು 40 ಕಿ.ಮೀ ದೂರದಲ್ಲಿರುವ ಲಾಲ್ ಗೋಪಾಲಗಂಜ್ ಗ್ರಾಮದಲ್ಲಿ ಕಾರ್ಮಿಕನೊಬ್ಬ ಹಿಂದೂಗಳು ಕೈಗೆ ಕಟ್ಟಿಕೊಳ್ಳುವ 'ಕಲಾವಾ' ದಾರವನ್ನು ಒಣಗಿಸುತ್ತಿರುವುದು. ಈ ಗ್ರಾಮದ ಮುಸ್ಲಿಮರು ತಲೆಮಾರುಗಳಿಂದ 'ಕಲಾವಾ' ದಾರ ಮತ್ತು 'ಚುನರಿ' ಬಟ್ಟೆಯನ್ನು ತಯಾರಿಸುವಲ್ಲಿ ತೊಡಗಿಸಿಕೊಂಡಿದ್ದಾರೆ ಪಿಟಿಐ ಚಿತ್ರ

ಸಂಕ್ಷಿಪ್ತ ಸುದ್ದಿ

'ಕೈಕೋಳ ಪ್ರಕರಣ: ಭಾರತ ಗಂಭೀರವಾಗಿ ಪರಿಗಣಿಸಿದೆ'

ನವದೆಹಲಿ (ಪಿಟಿಐ): ಗಡೀಪಾರಾದ ವಲಸಿಗ ಭಾರತೀಯರನ್ನು ವಿಮಾನದಲ್ಲಿ ಕರೆತರುವ ವೇಳೆ ಅಧಿಕಾರಿಗಳು ಅಮಾನವೀಯವಾಗಿ ನಡೆಸಿಕೊಂಡಿರುವುದಕ್ಕೆ ಭಾರತವು ಅಮೆರಿಕದ ಮುಂದೆ ತೀವ್ರ ಕಳವಳ ದಾಖಲಿಸಿದೆ. ಕೈ-ಕಾಲುಗಳಿಗೆ ಸರಪಳಿ ಹಾಕಿದ್ದು, ಮಹಿಳೆಯರನ್ನು

ನಡೆಸಿಕೊಂಡ ಬಗ್ಗೆ ಪ್ರಬಲ ಆಕ್ಷೇಪ ವ್ಯಕ್ತಪಡಿಸಿದೆ ಎಂದು ಕೇಂದ್ರ ಸರ್ಕಾರ ಸಂಸತ್ತಿಗೆ ಸ್ಪಷ್ಟಪಡಿಸಿದೆ.

ವಿದೇಶಾಂಗ ಸಚಿವಾಲಯದ ರಾಜ್ಯ ಸಚಿವರಾದ ಕೀರ್ತಿವರ್ಧನ್ ಸಿಂಗ್ ಲೋಕಸಭೆಯಲ್ಲಿ ಲಿಖಿತ ಪ್ರಶ್ನೆಗೆ ಉತ್ತರ ನೀಡಿದರು. ಗಡೀಪಾರಾದವರ ಧಾರ್ಮಿಕ ಸೂಕ್ಷ್ಮತೆ ಮತ್ತು ಆಹಾರ ಆದ್ಯತೆ ಬಗ್ಗೆ ನಮ್ಮ ಕಳಕಳಿ ವ್ಯಕ್ತಪಡಿಸಿದ್ದೆವು. ಅಮೆರಿಕ ವಿದೇಶಾಂಗ ವಿಭಾಗ ಪ್ರತಿಕ್ರಿಯಿಸಿದ್ದು, ' ಸಸ್ಯಾಹಾರದ ಊಟಕ್ಕೆ ಗಡೀಪಾರಾದವರನ್ನು ಮನವಿ ಮಾಡಿದ್ದು ಬಿಟ್ಟರೆ ಧರ್ಮಾಧಾರಿತ ಶಿರವಸ್ತ್ರಗಳನ್ನು ತೆಗೆಯಲು ಸೂಚಿಸಿರಲಿಲ್ಲ. ಅವರು ಯಾವುದೇ ಧಾರ್ಮಿಕ ಆಚರಣೆಗೆ ಅವಕಾಶ ಕೇಳಿರಲಿಲ್ಲ' ಎಂದು ತಿಳಿಸಿದೆ ಎಂದರು. ಮೂರು ವಿಮಾನಗಳಲ್ಲಿ (ಫೆಬ್ರುವರಿ 5, 15, 16ರಂದು) ಗಡೀಪಾರಾದ ನೂರಾರು ಮಂದಿಯನ್ನು ಅಮೆರಿಕದ ವಲಸೆ ಮತ್ತು ಕಸ್ಟಮ್ಸ್ ನಿರ್ದೇಶನಾಲಯ(ಐಸಿಇ) ಭಾರತಕ್ಕೆ ರವಾನಿಸಿತ್ತು.

ಔರಂಗಜೇಬ್ ಸಮಾಧಿ ಧ್ವಂಸ ಕೋರಿ ಪಿಐಎಲ್

ಮುಂಬೈ: ಛತ್ರಪತಿ ಸಂಭಾಜಿನಗರ ಜಿಲ್ಲೆಯ ಖುಲ್ತಾಬಾದ್‌ನಲ್ಲಿರುವ ಮೊಘಲ್ ದೊರೆ ಔರಂಗಜೇಬ್ ಸಮಾಧಿಯನ್ನು ಧ್ವಂಸಗೊಳಿಸುವಂತೆ ಕೋರಿ ಬಾಂಬೆ ಹೈಕೋರ್ಟ್‌ಗೆ ಸಾರ್ವಜನಿಕ ಹಿತಾಸಕ್ತಿ ಅರ್ಜಿ(ಪಿಐಎಲ್) ಸಲ್ಲಿಸಲಾಗಿದೆ.

ಪತ್ರಕರ್ತ ಹಾಗೂ ಹೋರಾಟಗಾರ ಕೇತನ್ ತಿರೋಡ್ಕರ್ ಈ ಅರ್ಜಿ ಸಲ್ಲಿಸಿದ್ದಾರೆ.'ರಾಷ್ಟ್ರೀಯ ಸ್ಮಾರಕಗಳ ಪಟ್ಟಿಯಿಂದ ಈ ಸಮಾಧಿ ಹೆಸರನ್ನು ಕೈಬಿಡುವಂತೆ ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಗೆ (ಎಎಸ್‌ಐ) ಆದೇಶಿಸಬೇಕು' ಎಂದೂ ಅವರು ಪಿಐಎಲ್‌ನಲ್ಲಿ ಕೋರಿದ್ದಾರೆ. ಈ ಅರ್ಜಿ ವಿಚಾರಣೆಯನ್ನು ಹೈಕೋರ್ಟ್ ಇನ್ನಷ್ಟೆ ಕೈಗೆತ್ತಿಕೊಳ್ಳಬೇಕಿದೆ.

ಅಮೃತ್‌ಪಾಲ್ ಸಹಚರರು ಮತ್ತೆ ಪೊಲೀಸ್ ವಶಕ್ಕೆ

ಚಂಡೀಗಢ (ಪಿಟಿಐ): ಸಿಖ್ ಬೋಧಕ ಅಮೃತ್‌ಪಾಲ್ ಸಿಂಗ್ ಅವರ ಏಳು ಮಂದಿ ಸಹಚರರನ್ನು ಅಮೃತಸರದ ಅಜನಾಲಾದಲ್ಲಿರುವ ನ್ಯಾಯಾಲಯದ ಮುಂದೆ ಶುಕ್ರವಾರ ಹಾಜರುಪಡಿಸಲಾಯಿತು. ಕೋರ್ಟ್ ಇವರನ್ನು ಮಾರ್ಚ್ 25ರವರೆಗೆ ಪೊಲೀಸ್ ವಶಕ್ಕೆ ನೀಡಿದೆ.

ಅಮೃತ್‌ಪಾಲ್ ಸಹಚರರನ್ನು ದಿಬ್ರುಗಢ ಕೇಂದ್ರ ಕಾರಾಗೃಹದಿಂದ ಬಿಡುಗಡೆ ಮಾಡಿ ಮತ್ತೊಂದು ಪ್ರಕರಣದಲ್ಲಿ ಪಂಜಾಬ್ ಪೊಲೀಸರು ಬಂಧಿಸಿದರು. 2023ರಲ್ಲಿ ಅಮೃತಸರ ಹೊರವಲಯದ ಪೊಲೀಸ್ ಠಾಣೆ ಮೇಲೆ ದಾಳಿ ನಡೆಸಿದ ಪ್ರಕರಣದಲ್ಲಿ ಮತ್ತೆ ಬಂಧಿಸಿದರು. ಸ್ಥಳಾಂತರ ಆದೇಶ ಪ್ರಕ್ರಿಯೆ ಪೂರ್ಣಗೊಂಡ ಕಾರಣ ಅವರನ್ನು ಅಜನಾಲಾಗೆ ಕರೆತಂದರು.

'ವಾರಿಸ್ ಪಂಜಾಬ್ ದೆ' ಸಂಘಟನೆಯ ಮುಖ್ಯಸ್ಥರಾದ ಅಮೃತ್‌ಪಾಲ್ ಸಿಂಗ್ ಮತ್ತು ಅವರ 9 ಸಹಚರರನ್ನು ರಾಷ್ಟ್ರೀಯ ಭದ್ರತಾ ಕಾಯ್ದೆಯ ಅಡಿ ಎರಡು ವರ್ಷಗಳಿಂದ ಅಸ್ಸಾಂನ ಜೈಲಿನಲ್ಲಿಡಲಾಗಿತ್ತು.

ಜನಗಣತಿ ವಿಳಂಬ ಕೇಂದ್ರದ ನಡೆಗೆ ಕಾಂಗ್ರೆಸ್ ಟೀಕೆ

ನವದೆಹಲಿ (ಪಿಟಿಐ): ಜನಗಣತಿ ಪ್ರಕ್ರಿಯೆ ವಿಳಂಬವಾಗುತ್ತಿದೆ ಹಾಗೂ ಇದಕ್ಕಾಗಿ ನಿಗದಿಯಾಗಿರುವ ಅನುದಾನವನ್ನು ಬಳಸಿಲ್ಲ ಎಂದು ಕಾಂಗ್ರೆಸ್ ಪಕ್ಷವು ಶುಕ್ರವಾರ ರಾಜ್ಯಸಭೆಯಲ್ಲಿ ಕೇಂದ್ರ ಸರ್ಕಾರದ ನಡೆಯನ್ನು ಕಟುವಾಗಿ ತರಾಟೆಗೆ ತೆಗೆದುಕೊಂಡಿತು.

ಪಕ್ಷದ ನಾಯಕ ಅಜಯ್ ಮಾಕನ್ ಅವರು, '2011ರಲ್ಲಿ ಜನಗಣತಿ ಆಗಿದ್ದು, ಜನಸಂಖ್ಯೆ 125 ಕೋಟಿ ಇತ್ತು. ಈಗ ಅಂದಾಜು 146 ಕೋಟಿ ಇರಬಹುದು. ಕಲ್ಯಾಣ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ ಜನಗಣತಿ ಕಾರ್ಯ ಮುಖ್ಯವಾದುದು' ಎಂದರು.

ರಾಷ್ಟ್ರೀಯ ಆಹಾರ ಭದ್ರತೆ ಕಾಯ್ದೆಯಡಿ ಸದ್ಯ ಗ್ರಾಮೀಣ ಭಾಗದ ಶೇ 70, ನಗರ ಪ್ರದೇಶದ ಶೇ 50ರಷ್ಟು ಜನರು ಸೌಲಭ್ಯ ಪಡೆಯುತ್ತಿದ್ದಾರೆ. ಗಣತಿ ಪ್ರಕ್ರಿಯೆ ನಡೆದರೆ ಹೆಚ್ಚುವರಿಯಾಗಿ 15 ಕೋಟಿ ಜನರಿಗೆ ಇದರ ಫಲ ಸಿಗಬಹುದು. ಆದಷ್ಟು ಶೀಘ್ರದಲ್ಲಿ ಗಣತಿ ಪ್ರಕ್ರಿಯೆಯನ್ನು ಶುರು ಮಾಡಬೇಕು ಎಂದು ಅವರು ಒತ್ತಾಯಿಸಿದರು.

ರೈತನ ಮಗಳಿಗೆ 15 ಚಿನ್ನದ ಪದಕ

ಚಿತ್ರದುರ್ಗ ಜಿಲ್ಲೆ ಹೊಸದುರ್ಗ ತಾಲ್ಲೂಕಿನ ನಾಗೇನಹಳ್ಳಿಯ ರವೀನಾ ಸಾಧನೆ

• ಶಶಿಕಾಂತ ಎಸ್. ಶೆಂಬೆಳ್ಳಿ

ಬೀದರ್: ಚಿತ್ರದುರ್ಗ ಜಿಲ್ಲೆ ಹೊಸದುರ್ಗ ತಾಲ್ಲೂಕಿನ ನಾಗೇನಹಳ್ಳಿ ಗ್ರಾಮದ ರೈತನ ಮಗಳಾದ ರವೀನಾ ಅವರು 'ಬ್ಯಾಚುಲರ್ ಆಫ್ ವೆಟರ್ನರಿ ಸೈನ್ಸ್ ಅಂಡ್ ಅನಿಮಲ್ ಹಸ್ಬೆಂಡ್ರಿ' (ಬಿವಿಎಸ್‌ಸಿ ಅಂಡ್ ಎಎಚ್) ಸ್ನಾತಕ ಪದವಿಯಲ್ಲಿ 15 ಚಿನ್ನದ ಪದಕಗಳ ಸಾಧನೆ ಮಾಡಿದ್ದಾರೆ.

ಇಲ್ಲಿನ ಕರ್ನಾಟಕ ಪಶು ವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ ವ್ಯಾಪ್ತಿಗೆ ಬರುವ ಬೆಂಗಳೂರಿನ ಪಶು ವಿ.ವಿ. ಕಾಲೇಜಿನ ವಿದ್ಯಾರ್ಥಿನಿ ರವೀನಾ, 2022–23ನೇ ಸಾಲಿನಲ್ಲಿ ಈ ಸಾಧನೆ ತೋರಿದ್ದಾರೆ.

ಪಶು ವಿ.ವಿ.ಯ 20 ವರ್ಷಗಳ ಇತಿಹಾಸದಲ್ಲಿ ಒಬ್ಬ ವಿದ್ಯಾರ್ಥಿ 16 ಚಿನ್ನದ ಪದಕ, ಇಬ್ಬರು 15 ಚಿನ್ನದ ಪದಕಗಳಿಗೆ ಪಾತ್ರರಾಗಿದ್ದಾರೆ. ಆ ಸಾಲಿಗೆ ಈಗ ರವೀನಾ ಹೊಸ ಸೇರ್ಪಡೆ.

ರವೀನಾ ಅವರ ತಂದೆ ಕುಮಾರ ಕೃಷಿಕರು. ಎರಡು ಎಕರೆ ಜಮೀನಿನಲ್ಲಿ ಕಷ್ಟಪಟ್ಟು ಉಳುಮೆ ಮಾಡಿ, ಅದರಲ್ಲಿ ಬಂದ ಆದಾಯದಿಂದ ಇರುವ ಒಬ್ಬ ಮಗಳಿಗೆ ಉತ್ತಮ ಶಿಕ್ಷಣ ಕೊಡಿಸಿದ್ದಾರೆ. ತಂದೆಯ ನಿರೀಕ್ಷೆಗೆ ತಕ್ಕಂತೆ ಓದುವುದರ ಮೂಲಕ ಮಗಳು ಚಿನ್ನದ ಪದಕಗಳಿಗೆ ಕೊರಳೊಡ್ಡಲಿದ್ದಾರೆ.

ರವೀನಾ ಅವರು ಪಿಯುನಲ್ಲಿ ಓದುತ್ತಿರುವಾಗ ಅವರ ತಾಯಿ ಸಾಕಮ್ಮ ನಿಧನ ಹೊಂದಿದ್ದರು. ಮಗಳಿಗೆ ತಾಯಿಯ ಕೊರತೆ ಕಾಡದಂತೆ ನೋಡಿಕೊಂಡಿದ್ದರು. ತಂದೆ ಹಾಗೂ ಸಹೋದರ ಸಂಬಂಧಿಗಳು ಬೆಂಬಲವಾಗಿ ನಿಂತಿದ್ದರಿಂದ ಅವರ ಉನ್ನತ ಶಿಕ್ಷಣಕ್ಕೆ ಯಾವುದೇ ತೊಡಕಾಗಲಿಲ್ಲ.

'ನಾನು ಸೇರಿದ ಕೋರ್ಸ್ ಐದೂವರೆ ವರ್ಷಗಳದ್ದು. ಕೋವಿಡ್‌ನಿಂದಾಗಿ ಆರು ವರ್ಷಕ್ಕೆ ವಿಸ್ತರಣೆಯಾಗಿತ್ತು. ಕೋವಿಡ್‌ನಿಂದ ಎರಡನೇ ಮತ್ತು ಮೂರನೇ ವರ್ಷ ಬಹಳ ಕಠಿಣ ಸಮಯ ಅಂತ ಹೇಳಬಹುದು. ಆದರೆ, ಧೃತಿಗೆಡದೇ ಓದಿದೆ. ಆನಂತರ ಎಲ್ಲ ಸಹಜವಾದ ನಂತರ ನಿತ್ಯ ತರಗತಿಗಳಿಗೆ ಹಾಜರಾಗಿ, ಅಂದಿನ ಪಾಠ ಅಂದೇ ಓದು ಮುಗಿಸುತ್ತಿದ್ದೆ. ಪರೀಕ್ಷೆ ಸುಲಭವಾಗಿ ಎದುರಿಸಲು ಇದು ಸಹಾಯವಾಯಿತು' ಎಂದು ರವೀನಾ 'ಪ್ರಜಾವಾಣಿ'ಗೆ ಮಾಹಿತಿ ನೀಡಿದರು.

'ವೆಟರ್ನರಿ ಸೈನ್ಸ್ ಕೋರ್ಸ್, ಕೃಷಿ ಹಾಗೂ ಪ್ರಾಣಿಗಳಿಗೆ ಸಂಬಂಧಿಸಿರುವ ಕಾರಣ ಇದನ್ನು ಇಷ್ಟಪಟ್ಟು ಆಯ್ಕೆ ಮಾಡಿಕೊಂಡೆ. ನಮಗೆ ಯಾವುದರಲ್ಲಿ ಇಷ್ಟವಿರುತ್ತೋ ಅದನ್ನೇ ಆಯ್ಕೆ ಮಾಡಿಕೊಳ್ಳಬೇಕು. ನನ್ನ ಓದಿಗೆ ಯಾವುದೇ ತೊಡಕಾಗದಂತೆ ತಂದೆ ನೋಡಿಕೊಂಡರು' ಎಂದು ನೆನೆದರು.

ರವೀನಾ ಅವರ ಸಹಪಾಠಿ ಬೆಂಗಳೂರಿನ ಜೆ.ಪಿ. ನಗರದ ಆದಿತ್ಯ ಚಿದಾನಂದ ಈಶ್ವರಲ ಅವರು 9 ಚಿನ್ನದ ಪದಕಗಳಿಗೆ ಪಾತ್ರರಾಗಿದ್ದಾರೆ. ಇದೇ ಕೋರ್ಸ್‌ನಲ್ಲಿ ಯಾದಗಿರಿ ಜಿಲ್ಲೆ ನಾರಾಯಣಪುರದ ಭಾಗ್ಯಶ್ರೀ ಹಾಗೂ ಶಿವಮೊಗ್ಗದ ವಿಶ್ವಾಸ ಬಿ. ಅವರು ತಲಾ ನಾಲ್ಕು ಚಿನ್ನದ ಪದಕಗಳನ್ನು ಗಳಿಸಿದ್ದಾರೆ.

ಹೆಚ್ಚಿನವರಿಗೆ ಮೆಡಿಕಲ್, ಎಂಜಿನಿಯರಿಂಗ್ ಅಂದ್ರೆ ಇಷ್ಟ. ನನಗೆ ಪ್ರಾಣಿಗಳೆಂದರೆ ಇಷ್ಟ. ಹೀಗಾಗಿ ವೆಟರ್ನರಿ ಸೈನ್ಸ್ ಆಯ್ಕೆ ಮಾಡಿಕೊಂಡೆ

ರವೀನಾ ಕೆ.ಎಸ್.
ಚಿನ್ನದ ಪದಕ ಪಡೆದ ವಿದ್ಯಾರ್ಥಿನಿ

25ಕ್ಕೆ ಪಶು ವಿ.ವಿ. ಘಟಿಕೋತ್ಸವ

ಬೀದರ್‌ನಲ್ಲಿರುವ ಕರ್ನಾಟಕ ಪಶು ವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ 14ನೇ ಘಟಿಕೋತ್ಸವ ಮಾ. 25ರಂದು ಬೆಳಿಗ್ಗೆ 11ಕ್ಕೆ ಜರುಗಲಿದೆ. ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು 2022–23ನೇ ಸಾಲಿನ 16 ಸ್ನಾತಕ ಪದವೀಧರರಿಗೆ 53 ಚಿನ್ನದ ಪದಕ, ಸ್ನಾತಕೋತ್ತರ ಪದವಿ ಪೂರೈಸಿದ 21 ವಿದ್ಯಾರ್ಥಿಗಳಿಗೆ 34 ಚಿನ್ನದ ಪದಕ, ಡಾಕ್ಟರೇಟ್ ಪದವಿ ಮುಗಿಸಿರುವ 7 ವಿದ್ಯಾರ್ಥಿಗಳಿಗೆ ತಲಾ ಒಂದು ಚಿನ್ನದ ಪದಕ, ಕ್ರೀಡೆ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಉತ್ತಮ ಸಾಧನೆ ತೋರಿದ ಇಬ್ಬರಿಗೆ ತಲಾ ಒಂದು ಚಿನ್ನದ ಪದಕ, ಪದವಿ ಪ್ರದಾನ ಮಾಡಲಿದ್ದಾರೆ. ಪುಣೆಯ ರಾಷ್ಟ್ರೀಯ ವೈರಾಲಜಿ ಸಂಸ್ಥೆ ನಿರ್ದೇಶಕ ಡಾ. ನವೀನಕುಮಾರ ಘಟಿಕೋತ್ಸವ ಭಾಷಣ ಮಾಡುವರು. ಪಶು ಸಂಗೋಪನಾ ಸಚಿವ ಕೆ. ವೆಂಕಟೇಶ್ ಆಗಮಿಸುವರು ಎಂದು ವಿ.ವಿ. ಕುಲಪತಿ ಪ್ರೊ.ಕೆ.ಸಿ. ವೀರಣ್ಣ ಶುಕ್ರವಾರ ತಿಳಿಸಿದರು.

ಪಿಜಿಯಲ್ಲಿ ದಕ್ಷಿತ್‌ಗೆ 6 ಚಿನ್ನದ ಪದಕ

ಚಿತ್ರದುರ್ಗದ ಚಳ್ಳಕೆರೆಯ ಚಿಕ್ಕೇನಹಳ್ಳಿ ಗ್ರಾಮದ ದಕ್ಷಿತ್ ಪಿ.ಎಲ್. ಅವರು ಎಂವಿಎಸ್‌ಸಿ ಸ್ನಾತಕೋತ್ತರ ಪದವಿಯಲ್ಲಿ ಆರು ಚಿನ್ನದ ಪದಕಗಳನ್ನು ಗಳಿಸಿದ್ದಾರೆ.

ಇವರು ಬೆಂಗಳೂರಿನ ಪಶು ವೈದ್ಯಕೀಯ ಕಾಲೇಜಿನ ವಿದ್ಯಾರ್ಥಿಯಾಗಿದ್ದು, 2022–23ನೇ ಸಾಲಿನಲ್ಲಿ ಈ ಸಾಧನೆ ಮಾಡಿದ್ದಾರೆ. ಸದ್ಯ ಬೆಂಗಳೂರಿನ ಪಶು ವಿ.ವಿ.ಯಲ್ಲೇ ಪಿಎಚ್‌.ಡಿ ಅಧ್ಯಯನ ಮಾಡುತ್ತಿದ್ದಾರೆ. 'ಪೋಷಕರ ಬೆಂಬಲ, ನಾನು ಮನಸ್ಸಿಟ್ಟು ಓದಿದ ಕಾರಣ ಉತ್ತಮ ಫಲಿತಾಂಶ ಬಂದಿದೆ. ಈ ಕೋರ್ಸ್ ಇಷ್ಟಪಟ್ಟು ಆಯ್ಕೆ ಮಾಡಿಕೊಂಡಿದ್ದೆ. ಪಶು ವೈದ್ಯಕೀಯ ವಿಜ್ಞಾನ ಕ್ಷೇತ್ರದಲ್ಲಿ ಭವಿಷ್ಯದ ದಿನಗಳಲ್ಲಿ ಸಾಕಷ್ಟು ಬೆಲೆ ಇದೆ' ಎಂದು ದಕ್ಷಿತ್ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ್ದಾರೆ.

ದಕ್ಷಿತ್ ಪಿ.ಎಲ್.

ಭಾಷೆ ವಿಚಾರ: ಡಿಎಂಕೆ ವಿರುದ್ಧ ಅಮಿತ್ ಶಾ ವಾಗ್ದಾಳಿ

'ಭ್ರಷ್ಟಾಚಾರ ಮರೆಮಾಚಿಸಲು ವಿವಾದ'

ಪ್ರಜಾವಾಣಿ ವಾರ್ತೆ

ನವದೆಹಲಿ: ಭಾಷೆಯ ವಿಚಾರದಲ್ಲಿ ದೇಶ ಹಲವು ಸಮಸ್ಯೆಗಳನ್ನು ಎದುರಿಸಿದ್ದು, ಅದು ಮರುಕಳಿಸಬಾರದು ಎಂಬ ಸದುದ್ದೇಶದ ಹೊರತಾಗಿ ಕೆಲವರು ತಮ್ಮ ಭ್ರಷ್ಟಾಚಾರವನ್ನು ಮರೆಮಾಚಿಸಲು ಭಾಷೆಯ ವಿಚಾರವನ್ನು ಬಳಸಿಕೊಳ್ಳುತ್ತಿದ್ದಾರೆ ಎಂದು ಗೃಹ ಸಚಿವ ಅಮಿತ್ ಶಾ ಅವರು ಶುಕ್ರವಾರ ಡಿಎಂಕೆ ವಿರುದ್ಧ ಪರೋಕ್ಷ ವಾಗ್ದಾಳಿ ನಡೆಸಿದರು.

ಅಮಿತ್ ಶಾ

ಗೃಹ ಸಚಿವಾಲಯದ ಕಾರ್ಯನಿರ್ವಹಣೆ ಕುರಿತು ರಾಜ್ಯಸಭೆಯಲ್ಲಿ ನಡೆದ ಚರ್ಚೆಯಲ್ಲಿ ಮಾತನಾಡಿದ ಶಾ ಅವರು, 'ದೇಶದ ಎಲ್ಲ ನಾಗರಿಕರು, ಮುಖ್ಯಮಂತ್ರಿಗಳು ಮತ್ತು ಸಂಸದರ ಜೊತೆಗೆ ಡಿಸೆಂಬರ್‌ನಿಂದ ಅವರವರ ಭಾಷೆಯಲ್ಲಿ ಸಂವಹನ ನಡೆಸುತ್ತೇವೆ. ತಮ್ಮ ಭ್ರಷ್ಟಾಚಾರವನ್ನು ಮರೆಮಾಚಲು ಭಾಷೆಯ ವಿಚಾರವನ್ನು ಬಳಸಿಕೊಳ್ಳುತ್ತಿರುವವರಿಗೆ ಇದು ದಿಟ್ಟ ಉತ್ತರವಾಗಿರುತ್ತದೆ' ಎಂದು ಹೇಳಿದರು.

ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಹೇಳಲಾಗಿರುವ ತ್ರಿಭಾಷಾ ಸೂತ್ರಕ್ಕೆ ತಮಿಳುನಾಡಿನ ಡಿಎಂಕೆ ಸರ್ಕಾರ ವಿರೋಧ ವ್ಯಕ್ತಪಡಿಸುತ್ತಿರುವುದಕ್ಕೆ ಅವರು ತಿರುಗೇಟು ನೀಡಿದರು. ಆದರೆ ಜನಸಂಖ್ಯೆಯ ಆಧಾರದಲ್ಲಿ ಕ್ಷೇತ್ರ ಮರುವಿಂಗಡಣೆಯನ್ನು ಡಿಎಂಕೆ ವಿರೋಧಿಸುತ್ತಿರುವ ಬಗ್ಗೆ ಅವರು ಯಾವುದೇ ಪ್ರತಿಕ್ರಿಯೆ ನೀಡಿಲ್ಲ.

ಕ್ಷೇತ್ರವಿಂಗಡಣೆ ಬಗ್ಗೆ ಕಳವಳ: ತಮಿಳುನಾಡಿನಂತಹ ದಕ್ಷಿಣ ರಾಜ್ಯಗಳ ಪ್ರಾತಿನಿಧ್ಯವನ್ನು ಸಂಸತ್ತಿನಲ್ಲಿ ರಕ್ಷಿಸುವ ಸಲುವಾಗಿ 1971ರ ಜನಗಣತಿಯ ಆಧಾರದಲ್ಲಿ ಕ್ಷೇತ್ರವಿಂಗಡಣೆ ಮಾಡಬೇಕು ಎಂದು ಡಿಎಂಕೆ ನಾಯಕ ಎಂ.ಷಣ್ಮುಗಂ ಅವರು ಕೇಂದ್ರ ಸರ್ಕಾರವನ್ನು ಒತ್ತಾಯಿಸಿದರು.

ಕ್ಷೇತ್ರಗಳ ಪುನರ್ ವಿಂಗಡಣೆ ಇಂದು ಸಭೆ

ಚೆನ್ನೈ: 'ಜನಸಂಖ್ಯೆ ಆಧಾರದ ಮೇಲೆ ಲೋಕಸಭಾ ಕ್ಷೇತ್ರಗಳ ಪುನರ್ ವಿಂಗಡಣೆಯು ಕೆಲವು ರಾಜ್ಯಗಳನ್ನು ದುರ್ಬಲಗೊಳಿಸುವ ಯತ್ನದ ಭಾಗವೇ ಆಗಿದೆ' ಎಂದು ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಶುಕ್ರವಾರ ಟೀಕಿಸಿದ್ದಾರೆ.

ಈ ನಿಟ್ಟಿನಲ್ಲಿ ಜಂಟಿ ಕ್ರಿಯಾ ಸಮಿತಿಯ (ಜೆಎಸಿ) ಮೊದಲ ಸಭೆ ಶನಿವಾರ ನಡೆಯಲಿದ್ದು, ಇದು ದೇಶದ ಭವಿಷ್ಯ ರೂಪಿಸಲಿರುವ ಆರಂಭಿಕ ಚಳವಳಿಯಾಗಲಿದೆ ಎಂದು ಅವರು ಬಿಡುಗಡೆ ಮಾಡಿದ ವಿಡಿಯೊದಲ್ಲಿ ತಿಳಿಸಿದ್ದಾರೆ.

ಜನಸಂಖ್ಯೆ ಬೆಳವಣಿಗೆಯನ್ನು ಸಮರ್ಥವಾಗಿ ನಿಯಂತ್ರಿಸುವ ಮೂಲಕ ರಾಷ್ಟ್ರದ ಅಭಿವೃದ್ಧಿಗೆ ಗಣನೀಯ ಕೊಡುಗೆ ನೀಡಿದ ರಾಜ್ಯಗಳನ್ನು ಕೇಂದ್ರ ಸರ್ಕಾರ ಶಿಕ್ಷಿಸಬಾರದು ಎಂದು ಹೇಳಿದ್ದಾರೆ.

ಎಂ.ಕೆ.ಸ್ಟಾಲಿನ್

'ಕರ್ನಾಟಕ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ತೆಲಂಗಾಣ ಮುಖ್ಯಮಂತ್ರಿ ರೇವಂತ್ ರೆಡ್ಡಿ, ಪಂಜಾಬ್‌ನ ಭಗವಂತ ಮಾನ್, ಕೇರಳದ ಪಿಣರಾಯಿ ವಿಜಯನ್ ಅವರು ಭಾಗಿಯಾಗಲಿರುವ ಶನಿವಾರದ ಸಭೆಯಲ್ಲಿ ಮುಂದಿನ ನಿರ್ಧಾರದ ಕುರಿತು ರೂಪುರೇಷೆ ರೂಪಿಸಲಾಗುವುದು. ಸಭೆ ತೆಗೆದುಕೊಳ್ಳುವ ನಿರ್ಧಾರದ ಪ್ರಕಾರ ನಾವು ಮುಂದಿನ ಕ್ರಮ ಕೈಗೊಳ್ಳಲಿದ್ದೇವೆ. ನ್ಯಾಯಯುತವಾದ ನಮ್ಮ ಬೇಡಿಕೆಗೆ ಜಯ ಸಿಗಲಿದೆ. ನಮ್ಮ ಈ ಹೋರಾಟವು ಭಾರತವನ್ನು ರಕ್ಷಿಸಲಿದೆ' ಎಂದರು.

ಹಿಂದಿ ಹೇರಿಕೆ: ರಾಜ್ಯಸಭೆಯಲ್ಲಿ ತಮಿಳುನಾಡು ಸದಸ್ಯರಿಂದ ತರಾಟೆ

ನವದೆಹಲಿ (ಪಿಟಿಐ): 'ಕೇಂದ್ರ ಸರ್ಕಾರ ತಮಿಳುನಾಡಿನಲ್ಲಿ ಹಿಂದಿ ಭಾಷೆಯನ್ನು ಹೇರುತ್ತಿದೆ' ಎಂದು ರಾಜ್ಯಸಭೆಯಲ್ಲಿ ತಮಿಳುನಾಡಿನ ವಿವಿಧ ಸದಸ್ಯರು ಶುಕ್ರವಾರ ಆಕ್ರೋಶ ವ್ಯಕ್ತಪಡಿಸಿದರು.

ಚರ್ಚೆಯಲ್ಲಿ ಪಾಲ್ಗೊಂಡಿದ್ದ ಎಂಡಿಎಂಕೆ ಮುಖ್ಯಸ್ಥ ವೈಕೊ ಅವರು, 'ಗೃಹ ಸಚಿವಾಲಯವು ರಾಜ್ಯವನ್ನು ಈ ವಿಷಯದಲ್ಲಿ ಬಲಿಪಶು ಮಾಡುತ್ತಿದೆ' ಎಂದು ಟೀಕಿಸಿದರು. 'ಹಿಂದುತ್ವ ನೀತಿ, ಆರ್‌ಎಸ್‌ಎಸ್ ನೀತಿ, ಹಿಂದಿ, ಸಂಸ್ಕೃತ ಭಾಷೆ ಹೇರಿಕೆ ವಿರೋಧಿಸುತ್ತೇವೆ ಎಂದು ಪ್ರಕೃತಿ ವಿಕೋಪ ಪರಿಹಾರ ನಿಧಿ ಬಿಡುಗಡೆ ಕುರಿತು ರಾಜ್ಯವನ್ನು ಬಲಿಪಶು ಮಾಡಲಾಗುತ್ತಿದೆ' ಎಂದರು.

ಎಐಎಡಿಎಂಕೆ ಸದಸ್ಯ ಎಂ.ತಂಬಿದೊರೈ ಅವರು, 'ಹಿಂದಿ ಹೇರಿಕೆ ವಿಷಯದಲ್ಲಿ ನಾನು ವೈಕೊ ಅವರ ಮಾತು ಬೆಂಬಲಿಸುತ್ತೇನೆ' ಎಂದರು.

ಆಂತರಿಕ ತನಿಖೆ ಶುರು: 'ಸುಪ್ರೀಂ'

ಒಂದನೇ ಪುಟದಿಂದ...

ಅವರನ್ನು ವರ್ಗಾವಣೆ ಮಾಡಿದ ಸುಪ್ರೀಂ ಕೋರ್ಟ್ ಕೊಲಿಜಿಯಂ ನಿರ್ಧಾರದ ಬಗ್ಗೆಯೂ ಟೀಕೆಗಳು ಕೇಳಿಬಂದವು.

ಎಲ್ಲ ರೀತಿಯ ಊಹಾಪೋಹಗಳಿಗೆ ಅಂತ್ಯ ಹಾಡಲು ಶುಕ್ರವಾರ ಸಂಜೆ ಪ್ರಕಟಣೆ ಹೊರಡಿಸಿದ ಸುಪ್ರೀಂ ಕೋರ್ಟ್, 'ನ್ಯಾಯಮೂರ್ತಿ ಯಶವಂತ್ ವರ್ಮಾ ನಿವಾಸದಲ್ಲಿ ನಡೆದ ಘಟನೆಗೆ ಸಂಬಂಧಿಸಿದಂತೆ ತಪ್ಪು ಮಾಹಿತಿ ಮತ್ತು ವದಂತಿಗಳು ಹರಡುತ್ತಿವೆ' ಎಂದು ಹೇಳಿಕೆ ನೀಡಿದೆ.

ಈ ವಿಷಯ ಚರ್ಚಿಸಲು ಸುಪ್ರೀಂ ಕೋರ್ಟ್ ಕೊಲಿಜಿಯಂ ಸಭೆ ಸೇರಿದೆ ಎಂಬುದನ್ನು ಪ್ರಕಟಣೆ ಖಚಿತಪಡಿಸಿದ್ದು, ದೆಹಲಿ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಡಿ.ಕೆ ಉಪಾಧ್ಯಾಯ ಅವರು ಈ ಸಂಬಂಧ ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಸಂಜೀವ್ ಖನ್ನಾ ಅವರಿಗೆ ವರದಿ ಸಲ್ಲಿಸಲಿದ್ದಾರೆ ಎಂದು ಹೇಳಿದೆ.

'ಉಪಾಧ್ಯಾಯ ಅವರು ಸಾಕ್ಷ್ಯ ಮತ್ತು ಮಾಹಿತಿಯನ್ನು ಸಂಗ್ರಹಿಸುವ ಆಂತರಿಕ ತನಿಖಾ ಪ್ರಕ್ರಿಯೆ ಪ್ರಾರಂಭಿಸಿದ್ದಾರೆ. ಅವರು ನೀಡುವ ವರದಿ ಪರಿಶೀಲಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು' ಎಂದು ಹೇಳಿಕೆಯಲ್ಲಿ ವಿವರಿಸಲಾಗಿದೆ. ಮಾರ್ಚ್ 20ರಂದು ಕೊಲಿಜಿಯಂ ಸಭೆ ಸೇರುವ ಮುನ್ನವೇ ಅವರು ತನಿಖೆ ಆರಂಭಿಸಿದ್ದರು ಎಂದು ಹೇಳಲಾಗಿದೆ.

'ವರ್ಮಾ ಅವರನ್ನು ಅಲಹಾಬಾದ್ ಹೈಕೋರ್ಟ್‌ಗೆ ವರ್ಗಾವಣೆ ಮಾಡುವ ಪ್ರಸ್ತಾವನೆಗೂ ಅವರ ವಿರುದ್ಧದ ಆಂತರಿಕ ತನಿಖೆಗೂ ಸಂಬಂಧ ಇಲ್ಲ. ಮಾತ್ರವಲ್ಲ, ವರದಿಯಾದ ಘಟನೆಯು ದೆಹಲಿಯಲ್ಲಿ ನಡೆದಿದೆ' ಎಂದಿದೆ.

ದೆಹಲಿ ಹೈಕೋರ್ಟ್‌ನ ಎರಡನೇ ಅತ್ಯಂತ ಹಿರಿಯ ನ್ಯಾಯಮೂರ್ತಿ ಆಗಿರುವ ವರ್ಮಾ ಅವರು ಮಾರಾಟ ತೆರಿಗೆ, ಜಿಎಸ್‌ಟಿ, ಕಂಪನಿ ಮೇಲ್ಮನವಿಗಳು ಮತ್ತು ಇತರ ಮೇಲ್ಮನವಿಗಳ ವಿಚಾರಣೆ ನಡೆಸುವ ವಿಭಾಗೀಯ ಪೀಠದ ನೇತೃತ್ವ ವಹಿಸಿದ್ದಾರೆ.

ರಜಾದಲ್ಲಿ ತೆರಳಿರುವ ಕಾರಣ ಅವರು ಶುಕ್ರವಾರ ನ್ಯಾಯಾಲಯಕ್ಕೆ ಹಾಜರಾಗಲಿಲ್ಲ. 'ವರ್ಮಾ ಅವರ ರಜೆಯಲ್ಲಿದ್ದಾರೆ' ಎಂದು ಅವರ ಸಿಬ್ಬಂದಿ ಶುಕ್ರವಾರ ಬೆಳಿಗ್ಗೆ ವಕೀಲರಿಗೆ ತಿಳಿಸಿದ್ದಾರೆ.

ನಗದು ಪತ್ತೆ ಹೇಗೆ?

ಯಶವಂತ್ ವರ್ಮಾ ಅವರ ಮನೆಯಲ್ಲಿ ಮಾರ್ಚ್ 14ರಂದು ಬೆಂಕಿ ಅವಘಡ ಸಂಭವಿಸಿತ್ತು. ಈ ವೇಳೆ ಅವರು ಮನೆಯಲ್ಲಿ ಇರಲಿಲ್ಲ. ಅವರ ಕುಟುಂಬದ ಸದಸ್ಯರು ಅಗ್ನಿಶಾಮಕ ದಳ ಹಾಗೂ ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ಅಗ್ನಿಶಾಮಕ ದಳದ ಸಿಬ್ಬಂದಿ ಬೆಂಕಿಯನ್ನು ನಂದಿಸಿದ್ದಾರೆ. ಆ ಬಳಿಕ ಪೊಲೀಸರು ಮತ್ತು ಅಗ್ನಿಶಾಮಕ ದಳದ ಸಿಬ್ಬಂದಿ ಬೆಂಕಿಯಿಂದ ಆಗಿರುವ ಹಾನಿಯನ್ನು ಪರಿಶೀಲಿಸುವಾಗ ಮನೆಯಲ್ಲಿ ಭಾರಿ ಪ್ರಮಾಣದ ನೋಟಿನ ಕಂತೆಗಳು ಪತ್ತೆ ಯಾಗಿವೆ ಎನ್ನಲಾಗಿದೆ. ಪತ್ತೆ ಯಾದ ಹಣ ಎಷ್ಟು ಎಂಬುದು ತಿಳಿದಿಲ್ಲ.

2021ರಲ್ಲಿ ನೇಮಕ

ಯಶವಂತ್ ವರ್ಮಾ ಅವರು 2021ರ ಅಕ್ಟೋಬರ್‌ನಲ್ಲಿ ದೆಹಲಿ ಹೈಕೋರ್ಟ್ ನ್ಯಾಯಮೂರ್ತಿ ಯಾಗಿ ನೇಮಕಗೊಂಡಿದ್ದರು. ಅಲಹಾಬಾದ್‌ನಲ್ಲಿ ಜನಿಸಿದ ಅವರು 1992ರಲ್ಲಿ ವಕೀಲಿಕೆ ಆರಂಭಿಸಿದ್ದರು. 56 ವರ್ಷದ ಅವರು 2014ರ ಅಕ್ಟೋಬರ್‌ನಲ್ಲಿ ಅಲಹಾಬಾದ್ ಹೈಕೋರ್ಟ್‌ನಲ್ಲಿ ಹೆಚ್ಚುವರಿ ನ್ಯಾಯಮೂರ್ತಿಯಾಗಿ ನೇಮಕಗೊಂಡಿದ್ದರು. 2016ರ ಫೆಬ್ರುವರಿಯಲ್ಲಿ ಅದೇ ಹೈಕೋರ್ಟ್‌ನಲ್ಲಿ ಕಾಯಂ ನ್ಯಾಯಮೂರ್ತಿಯಾಗಿ ನೇಮಕಗೊಂಡಿದ್ದರು.

ಆಸ್ತಿಯ ವಿಚಾರ ಬಂದಾಗ ಹಕ್ಕು ಸಾಧಿಸಲು ಎಲ್ಲಿದ್ದರೂ ಓಡಿ ಬರುವ ಮಗ/ಮಗಳು, ಹೆತ್ತವರನ್ನು ಸಾಕುವ ಕರ್ತವ್ಯ ಎದುರಾದಾಗ ನೆಪಗಳ ಕೊರಳಿಗೆ ಜೋತು ಬೀಳುತ್ತಾರೆ. ಹೆತ್ತವರ ಜವಾಬ್ದಾರಿಯ ಬಗ್ಗೆ ಮತ್ತೆ ಚರ್ಚೆಗಳು ಬುಗಿಲೆದ್ದ ಈ ಹೊತ್ತು ಮಗನಷ್ಟೇ ಅಲ್ಲ, ಮಗಳ ಕರ್ತವ್ಯಗಳ ಕಡೆಗೂ ಕಣ್ತೆರೆದು ನೋಡಬೇಕಾದ ಅಗತ್ಯವೆದ್ದಿದೆ.

ಹೆತ್ತವರ ಹೊಣೆ ಮಗನಿಗಾ-ಮಗಳಿಗಾ?

ಸುಶೀಲಾ ಡೋಣೂರ

ಹಿರಿಯರನ್ನು ಪ್ರೀತ್ಯಾದಾರಗಳಿಂದ ನೋಡಿಕೊಳ್ಳಬೇಕು. ಜೀವನದ ಸಂಧ್ಯಾಕಾಲದಲ್ಲಿ ಅದೆಷ್ಟೊ ಹಿರಿಯ ಜೀವಗಳು ನೋವು, ಸಂಕಟ, ಅವಮಾನ, ನಿರ್ಲಕ್ಷ್ಯದಿಂದ ತತ್ತರಿಸುತ್ತಿವೆ. ಬದಲಾದ ಕಾಲಘಟ್ಟದಲ್ಲಿ ಎರಡು ಹೊತ್ತಿನ ಊಟ ಸಿಗುವುದೇನೂ ಸರಿ, ಒಂದು ಹಿಡಿ ಪ್ರೀತಿ ಮಾತ್ರ ಮರೀಚಿಕೆಯಾಗುತ್ತಿದೆ.

ಇತ್ತೀಚೆಗಷ್ಟೇ ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣ ಪ್ರಕಾಶ ಪಾಟೀಲ ಹಿರಿಯ ಜೀವಗಳನ್ನು ನಿರ್ಲಕ್ಷಿಸಿ, ಬೇಜವಾಬ್ದಾರಿತನದಿಂದ ನಡೆದುಕೊಳ್ಳುವ ಮಕ್ಕಳ ಬಗ್ಗೆ ಆತಂಕ ವ್ಯಕ್ತಪಡಿಸಿದ್ದಾರೆ. ಹಿರಿಯರ ಹೊಣೆಗಾರಿಕೆಯ ವಿಚಾರ ಮತ್ತೊಮ್ಮೆ ಚರ್ಚೆಗೆ ಬಂದಿದೆ.

ಹೆತ್ತವರನ್ನು ನೋಡಿಕೊಳ್ಳಬೇಕಾದ ಕರ್ತವ್ಯ ಮಗನದೇ? ಮಗಳದೇ?

ಮಗನದೂ ಹೌದು, ಆದರೆ ಮಗಳು ಇದರಿಂದ ನುಣುಚಿಕೊಳ್ಳುವ ಹಾಗಿಲ್ಲ ಎನ್ನುವುದನ್ನು ಸುಮಾರು ಮೂರು ದಶಕಗಳ ಹಿಂದೆಯೇ ಭಾರತೀಯ ನ್ಯಾಯಾಲಯ ಸ್ಪಷ್ಟಪಡಿಸಿದೆ. ಹೆತ್ತವರಿಗೆ ಊಟ-ವಾಸ-ಆರೋಗ್ಯ ಮಾತ್ರವಲ್ಲ, ಮಾನಸಿಕ ಸ್ವಾಸ್ಥ್ಯಕ್ಕೆ ಬೇಕಾಗುವ ಅಗತ್ಯಗಳನ್ನೂ ಪೂರೈಸಬೇಕಾದುದು ಮಕ್ಕಳ ಕರ್ತವ್ಯ. ಮಗನಿಲ್ಲದ ಸಂದರ್ಭಗಳಲ್ಲಿ ಅಥವಾ ಮಗನಿಗೆ ಶಕ್ತಿ ಇಲ್ಲದ, ಅನುಕೂಲಗಳಿಲ್ಲದ ಪರಿಸ್ಥಿತಿಗಳಲ್ಲಿ ಆ ಕರ್ತವ್ಯಗಳನ್ನು ಮಗಳು ನಿರ್ವಹಿಸಬೇಕು ಎನ್ನುವುದನ್ನು ನ್ಯಾಯಾಲಯ 1987ರ ಪ್ರಕರಣವೊಂದರಲ್ಲಿ ತಿಳಿಸಿದೆ.

ಎಷ್ಟೊಂದು ಕಾನೂನುಗಳಿದ್ದರೂ, ನಿಯಮಗಳಿದ್ದರೂ, ತಲೆಯ ಮೇಲೆ ಸಮಾಜದ ಎಚ್ಚರಿಕೆಯ ಗಂಟೆ ಹೊಡೆದುಕೊಳ್ಳುತ್ತಲೇ ಇದ್ದರೂ... ಮಕ್ಕಳು ಕರ್ತವ್ಯಗಳನ್ನೂ, ಮಮಕಾರವನ್ನೂ ಮರೆಯುತ್ತಲೇ ಇದ್ದಾರೆ. ಪರಿಣಾಮವಾಗಿ ಮನೆಯ ಹಿರಿಯರನ್ನು ಆಸ್ಪತ್ರೆಗಳಲ್ಲಿ, ಬೀದಿಗಳಲ್ಲಿ, ಬಸ್ ನಿಲ್ದಾಣಗಳಲ್ಲಿ, ರೈಲುಗಳಲ್ಲಿ ಬಿಟ್ಟು ಹೋಗುವ ಹೇಯ ಕೃತ್ಯಗಳು ವರದಿಯಾಗುತ್ತಲೇ ಇವೆ.

ಆಸ್ತಿಯಲ್ಲಿರುವ ಪಾಲು, ಆರೈಕೆಯಲ್ಲಿ ಯಾಕಿಲ್ಲ?

ಆಸ್ತಿಯ ವಿಚಾರ ಬಂದಾಗ ಇರುವ ಕೆಲಸಗಳನ್ನೆಲ್ಲಾ ಬದಿಗೊತ್ತಿ ಬಂದು, ಹೆಸರು ಸೇರಿಸುವ ಮಕ್ಕಳು ಜವಾಬ್ದಾರಿಯ ಮಾತು ಬಂದಾಗ, ಮನೆ ಚಿಕ್ಕದು, ಮಕ್ಕಳು ಸಣ್ಣವರು, ನೋಡಿಕೊಳ್ಳಲು ಯಾರೂ ಇಲ್ಲ, ಆಸ್ಪತ್ರೆ ದೂರ... ಎನ್ನುವ ನೆಪಗಳ ಕೊರಳಿಗೆ ಜೋತು ಬೀಳುತ್ತಾರೆ.

ಕೆಲ ಸಂದರ್ಭಗಳಲ್ಲಿ ಗಂಡುಮಕ್ಕಳಿಗೆ ಹೆತ್ತವರನ್ನು ಸಲುಹಬೇಕೆನ್ನುವ ಮನಸಿರುತ್ತದೆ. ಆರ್ಥಿಕ ಶಕ್ತಿ ಇರುವುದಿಲ್ಲ. ಅದಿದ್ದರೆ ಪತ್ನಿಯ ಅಸಹಕಾರ. ಹಾಗೆಯೇ ಹೆಣ್ಣುಮಕ್ಕಳಿಗೂ ಕೆಲವೊಮ್ಮೆ ಪರಿಸ್ಥಿತಿಗಳು ವ್ಯತಿರಿಕ್ತವಾಗಿರಬಹುದು. ಮತ್ತೆ ಕೆಲ ಸಂದರ್ಭಗಳಲ್ಲಿ ಮಗಳ ಮನೆಯಲ್ಲಿದ್ದರೆ ಹೊರೆ ಎನ್ನುವ ಹಿರಿಯರ ಮನಸ್ಥಿತಿಯೂ ಮಗನ ಮನೆಗೇ ಅಂಟಿಕೊಳ್ಳುವಂತೆ ಮಾಡಬಹುದು.

‘ಹೆತ್ತವರನ್ನು ಮಗನೇ ನೋಡಿಕೊಳ್ಳಬೇಕು’ ಎನ್ನುವ ಮಗಳ ಮಾತಿಗೂ; ‘ಅವರು ನಮಗೇನು ಆಸ್ತಿ ಇಟ್ಟಿದ್ದಾರಾ? ಮಗಳೂ ಸರಿಸಮ ದುಡಿಯುತ್ತಾಳಲ್ಲ’ ಎಂಬ ಸೊಸೆಯ ವಾದಕ್ಕೂ, ‘ನಾನೇ ಯಾಕೆ ಸಾಕಬೇಕು? ಇನ್ನೊಬ್ಬ ಮಗನಿಲ್ಲವೆ?’ ಎನ್ನುವ ಮಗನ ಮಾತಿಗೂ ಕಾನೂನಿನಲ್ಲಿ ಸ್ಪಷ್ಟ ಉತ್ತರಗಳಿವೆ, ಕಟ್ಟುನಿಟ್ಟಿನ ಮಾರ್ಗಸೂಚಿಗಳಿವೆ ಎನ್ನುತ್ತಾರೆ ಹಿರಿಯ ವಕೀಲೆ ಅಂಜಲಿ ರಾಮಣ್ಣ.

ಹಿರಿಯರ ಪೋಷಣೆಯ ವಿಚಾರ ಬಂದಾಗ ಮಗ–ಮಗಳು ಎನ್ನುವ ಪ್ರಶ್ನೆ ಬರುವುದಿಲ್ಲ, ಇಬ್ಬರಿಗೂ ಸಮಾನ ಹಕ್ಕು, ಸಮಾನ ಕರ್ತವ್ಯ ಎಂದು ಕೋರ್ಟ್ 1987ರಲ್ಲಿಯೇ ನಿಚ್ಚಳವಾಗಿ ಹೇಳಿದೆ. (ಪ್ರಕರಣ- Mrs. Vijaya Manohar Arbat vs Kashi Rao Rajaram Sawai And Another on 18 February, 1987).

‘ಮಕ್ಕಳು ಜವಾಬ್ದಾರಿಯಿಂದ ನುಣುಚಿಕೊಳ್ಳಲೆತ್ನಿಸುತ್ತಾರೆ ಎಂದರೆ ಅದು ಮೂಲ ಪೋಷಣೆಯಲ್ಲಿನ ದೋಷವೂ ಆಗಿರಬಹುದು. ಶಕ್ತಿ ಇದ್ದಾಗ ಸರಿಯಾದ ನಿರ್ಧಾರ, ಸ್ವ–ಭದ್ರತೆಯ ಕ್ರಮ ಕೈಗೊಂಡಿದ್ದರೆ ಈ ಸಂಕಷ್ಟ ಬರದು. ಹಾಗೆಯೇ ಮಗ–ಮಗಳ ನಡುವೆ ಭೇದ ಮಾಡದೇ ಇಬ್ಬರನ್ನೂ ಸಮಾನವಾಗಿ ಕಂಡು, ಸಮಾನ ಹಕ್ಕು, ಆದ್ಯತೆ ಕೊಟ್ಟು ಬೆಳೆಸಿದ ಮಕ್ಕಳಲ್ಲಿ ಈ ಜಿದ್ದಾಜಿದ್ದಿ ಏರ್ಪಡದು’ ಎಂದು ವಿಶ್ಲೇಷಿಸುತ್ತಾರೆ ಅಂಜಲಿ ರಾಮಣ್ಣ.

‘ಆಸ್ತಿ ಹಂಚಿಕೆ ಮಾಡುವಾಗ ಭೇದ ಮಾಡಬೇಡಿ. ಸಮಾನ ಕರ್ತವ್ಯದ ಪಾಠ ನಿಮ್ಮಿಂದಲೇ ಶುರುವಾಗುವುದು. ಆಸ್ತಿ ಪಾಲು ಮಾಡುವಾಗ ನಿಮ್ಮ ಸ್ವಂತಕ್ಕೆ ಅಂತ ಒಂದು ಪಾಲು ಇಟ್ಟುಕೊಳ್ಳಿ. ಮಕ್ಕಳ ಮೇಲೆ ಅಗತ್ಯಕ್ಕಿಂತ ಹೆಚ್ಚು ಅವಲಂಬಿತರಾಗಬೇಡಿ’ ಎನ್ನುವುದು ಅವರು ಹೇಳುವ ಕಿವಿಮಾತು.

ಭಾವನಾತ್ಮಕ ಬೆಸುಗೆ

ಹಿರಿಯರನ್ನು ನೋಡಿಕೊಳ್ಳುವುದು ಎಂದರೆ ಹೊಟ್ಟೆ–ಬಟ್ಟೆ–ಆರೋಗ್ಯ ಇದಿಷ್ಟೇ ಅಲ್ಲ. ಎಷ್ಟೇ ಕೆಲಸವಿರಲಿ, ಜವಾಬ್ದಾರಿ ಇರಲಿ, ಯಾವುದೇ ಹುದ್ದೆಯಲ್ಲಿರಲಿ, ಕೆಲ ಹೊತ್ತು ಅವರೊಂದಿಗೆ ಕಾಲ ಕಳೆಯಬೇಕು. ಇದು ಊಟ–ನಿದ್ರೆ–ಮಾತ್ರೆಯಷ್ಟೇ ಅತ್ಯಗತ್ಯ ಎನ್ನುತ್ತಾರೆ ಮನೋವೈದ್ಯರು.

ಗಂಡನಾಗಿ, ಅಪ್ಪನಾಗಿ, ಉದ್ಯೋಗಿಯಾಗಿ, ಅಧಿಕಾರಿಯಾಗಿ ಎಲ್ಲೊ ಕಳೆದುಹೋದ ಮಗನಲ್ಲಿ/ಮಗಳಲ್ಲಿ ಅವರು ತಮ್ಮ ಕಂದನನ್ನು ಕಾಣಲು ಸದಾ ಹವಣಿಸುತ್ತಿರುತ್ತಾರೆ. ಜೀವನದ ಸಂಧ್ಯಾಕಾಲದಲ್ಲಿ ಅವರಿಗೆ ಬೇಕಿರುವುದು ನಿಮ್ಮ ಆಸ್ತಿ–ಅಂತಸ್ತು, ಪ್ರತಿಷ್ಠೆ ಅಲ್ಲ. ಹೊಟ್ಟೆಗೆ ಹಿತವೆನಿಸುವ ಎರಡು ಹೊತ್ತಿನ ಊಟ, ಮನೆಯಲ್ಲಿ ಹಿರಿಯರೆನ್ನುವ ಒಳಗೊಳ್ಳುವಿಕೆ, ಒಡಗೂಡುವಿಕೆಯ ಘನತೆ, ಮಗನಾಗಿ/ಮಗಳಾಗಿ ನೀವು ಒಡನಾಡುವ ಆ ಎರಡು ಅಕ್ಕರೆಯ ಗಳಿಗೆ...

ಮಗನಿಗೆ ಹೆತ್ತವರ ಪೋಷಣೆಯ ಮನಸಿರುತ್ತದೆ, ಆದರೆ ಹೆಂಡತಿಯ ಮುಖ ನೋಡುತ್ತಾನೆ. ಮಗಳಿಗೂ ಆಸೆ ಇರುತ್ತದೆ, ಆದರೆ ಗಂಡನ ಮರ್ಜಿ ಕಾಯುತ್ತಾಳೆ. ಏಕೆಂದರೆ ಮಗ ಆರ್ಥಿಕವಾಗಿ ಸ್ವತಂತ್ರನಾದರೂ ಹಿರಿಯರ ನೋಡಿಕೊಳ್ಳುವುದನ್ನು ನಾವೇ ಅವನಿಗೆ ಕಲಿಸಿರುವುದಿಲ್ಲ. ಆರೈಕೆಯಲ್ಲಿ ಮಗಳು ನಿಪುಣೆ, ಆದರೆ ಆರ್ಥಿಕ ಸ್ವಾತಂತ್ರ್ಯ ಅಷ್ಟಾಗಿ ಇರುವುದಿಲ್ಲ. ಮಕ್ಕಳನ್ನು ಬೆಳೆಸುವಲ್ಲಿಯೇ ಈ ಎಚ್ಚರಿಕೆ ಇರಬೇಕು. ತನ್ನ ತಂದೆ-ತಾಯಿಯ ಕೆಲಸಗಳನ್ನು ಮಾಡುವಷ್ಟು ಮಗನ ಕೈ-ಮನ ಪಳಗಬೇಕು. ಹೆತ್ತವರನ್ನು ಸಾಕುವಷ್ಟು ಮಗಳ ದುಡಿಮೆ ಗಟ್ಟಿಯಾಗಿರಬೇಕು. ಹೇಗೂ ಮಗಳ ಮಮಕಾರವೇ ಒಂದು ತೂಕ ಹೆಚ್ಚಿರುವ ಕಾರಣದಿಂದಲೂ ಸರಿ, ಮಗಳು ನೋಡಿಕೊಳ್ಳಬೇಕು, ಮಗ ಆರ್ಥಿಕ ಸಹಾಯ ಮಾಡಬೇಕು. ಆಗ ಹಿರಿಯರಿಗೂ ಒಂದು ನೆಮ್ಮದಿ. ಯಾರೊ ಒಬ್ಬರ ಮೇಲೆ ಭಾರ ಹಾಕಿದೆ ಎನ್ನುವ ಸಂಕಟ ಉಳಿಯದು. ಜವಾಬ್ದಾರಿಗಳನ್ನು ಹಂಚಿಕೊಂಡಾಗ ಹೆತ್ತವರಿಗೂ ಗೌರವ, ಮಕ್ಕಳಿಗೂ ಘನತೆ.

ಲತಾ ಶ್ರೀನಿವಾಸ್, ಹಿರಿಯ ಬರಹಗಾರ್ತಿ

ಹೆತ್ತವರಿಗಾಗಿ... ಇಷ್ಟಂತೂ ಮಾಡಿ

- ಆಗಾಗ ಅವರ ಪಕ್ಕದಲ್ಲಿ ಕುಳಿತು ಒಂದೆರಡು ಮಾತಾಡಿ
- ನಿಮ್ಮ ಬದುಕಿನ ಕೆಲ ಮಹತ್ವದ ಬೆಳವಣಿಗೆಗಳನ್ನು ಹಂಚಿಕೊಳ್ಳಿ
- ಏನು ತಿನ್ನುತ್ತಾರೆ, ಏನು ಉಣ್ಣುತ್ತಾರೆ, ಅವರಿಗೇನಿಷ್ಟ... ತಿಳಿದುಕೊಳ್ಳಿ. ರುಚಿಯಾದ, ಹೊಸತರದ ತಿಂಡಿ–ಖಾದ್ಯಗಳನ್ನು ಅವರಿಗೂ ಪರಿಚಯಿಸಿ
- ಅವರ ಮಾತ್ರೆಗಳ ಮೇಲೆ ಗಮನವಿಡಿ
- ವಾರಕ್ಕೊಂದಿನವಾದರೂ ಅವರೊಂದಿಗೆ ಕುಳಿತು ಊಟ ಮಾಡಿ
- ಮಕ್ಕಳನ್ನು ಅವರೊಂದಿಗೆ ಬೆರೆಯಲು ಬಿಡಿ. ಮಕ್ಕಳ ಸಾಧನೆಯನ್ನು ಅವರೊಂದಿಗೆ ಹಂಚಿಕೊಳ್ಳಿ
- ಜಡಗಟ್ಟಿದ ಅವರ ಕೈ–ಕಾಲುಗಳನ್ನು ಒಮ್ಮೊಮ್ಮೆ ಸ್ಪರ್ಶಿಸಿ
- ಮನೆಗೆ ಬರುವ ಅತಿಥಿಗಳಿಂದ ಅವರನ್ನು ಅಂತರದಲ್ಲಿಡಬೇಡಿ
- ಹುಷಾರಿಲ್ಲದಾಗ ಜೊತೆಗೆ ಆಸ್ಪತ್ರೆಗೆ ಹೋಗಿ

ಅಮ್ಮ–ಅಪ್ಪನನ್ನು ನೋಡಿಕೊಳ್ಳುವ ಜವಾಬ್ದಾರಿ ಸಣ್ಣದೇನಲ್ಲ, ನಿಜ ಆದರೆ ಅಣ್ಣ–ತಮ್ಮ–ಅಕ್ಕ–ತಂಗಿ ಒಟ್ಟಾಗಿ ಹೆತ್ತವರ ಆರೈಕೆಯನ್ನು ತಮ್ಮ ಆದ್ಯತೆಯಾಗಿ ಮಾಡಿಕೊಂಡಾಗ ಅದು ಹೊರಲಾರದಷ್ಟು ಭಾರವೂ ಅಲ್ಲ. ಊಟ–ವಾಸ–ಆರೋಗ್ಯದಂತಹ ಅಗತ್ಯಗಳನ್ನು ಮಾತ್ರ ಒದಗಿಸಿಕೊಟ್ಟರೆ ಕರ್ತವ್ಯ ಮುಗಿಯಬಹುದು, ಋಣ ತೀರುವುದಿಲ್ಲ. ನೀವು ಕೂಸಾಗಿದ್ದಾಗ ಅವರು ಕೊಟ್ಟರಲ್ಲವೇ? ಅದೇ ಮಮಕಾರ, ಆರೈಕೆ, ಆದ್ಯತೆ, ಆದರ, ಸಮಯನ್ನು ಅವರಿಗೆ ಮರಳಿಸಿದಾಗ ಮಾತ್ರ ಹೆತ್ತವರ ಋಣ ಸಂದಾಯವಾಗಬಲ್ಲದು...

ಆಹಾ... ದಾಹಕ್ಕೆ ತಂಪು ಪಾನೀಯ

ಬೆಳಿಗ್ಗೆ 10 ಗಂಟೆಯಾಗುತ್ತಿದ್ದಂತೆ ಸೂರ್ಯನ ತಾಪದ ಅನುಭವ ಆಗುವುದು ಬೇಸಿಗೆಯಲ್ಲಿ ಸಹಜ. ದೇಹ ನಿರ್ಜಲೀಕರಣಗೊಳ್ಳದಂತೆ ಆದಷ್ಟು ದ್ರವಾಹಾರ ಸೇವಿಸುತ್ತಿದ್ದರೆ ಆರೋಗ್ಯದ ದೃಷ್ಟಿಯಿಂದ ಉತ್ತಮ. ರಾಸಾಯನಿಕಗಳನ್ನು ಬಳಸಿದ ಪಾನೀಯಗಳಿಂದ ಅನಾರೋಗ್ಯವೇ ಹೆಚ್ಚು. ಹಾಗಾಗಿ ಮನೆಯಲ್ಲಿ ಸಿಗುವ ಕೆಲವೇ ಹಣ್ಣುಗಳನ್ನು ಬಳಸಿ ಅತ್ಯುತ್ತಮ ಪಾನೀಯಗಳು ತಯಾರಿಸಬಹುದು. ಇವುಗಳ ರೆಸಿಪಿ ನೀಡಿದ್ದಾರೆ ಪ್ರಭಾ ಪಿ. ಶಾಸ್ತ್ರಿ

ಘಮ ಘಮ ಗುಲಾಬಿ

ಬೇಕಾಗುವ ಸಾಮಗ್ರಿಗಳು : ಗುಲಾಬಿ ಹೂವು1, ಗೋಡಂಬಿ-4, ಬಾದಾಮಿ-4, ಹಾಲು-ಕಪ್, ಸಕ್ಕರೆ-2ಚಮಚ, ಏಲಕ್ಕಿಪುಡಿ ಸ್ವಲ್ಪ, ಮಿಲ್ಕ್ ಮೇಡ್-1 ಚಮಚ,

ಮಾಡುವ ವಿಧಾನ : ಗುಲಾಬಿ ಹೂವನ್ನು ದಳ ಬಿಡಿಸಿ ತೊಳೆದುಕೊಂಡು ನೀರುಹಾಕಿ ಕುದಿಯಲು ಇಡಿ. ಒಂದು ಕುದಿ ಬಂದಮೇಲೆ ಇಳಿಸಿ ಸೋಸಿ ಇಟ್ಟುಕೊಳ್ಳಬೇಕು. ಬಾದಾಮಿ, ಗೋಡಂಬಿಯನ್ನು ನಾಲ್ಕುಗಂಟೆ ಕಾಲ ನೆನಸಿಕೊಂಡು ಸ್ವಲ್ಪ ಹಾಲು, ಸಕ್ಕರೆ ಏಲಕ್ಕಿಪುಡಿ ಮಿಲ್ಕ್ ಮೇಡ್ ಹಾಕಿ ನುಣ್ಣಗೆ ರುಬ್ಬಿ ತಣ್ಣಗಾದ ಗುಲಾಬಿ ನೀರಿಗೆ ಬೆರಸಿ ಉಳಿದ ಹಾಲನ್ನು ಸೇರಿಸಿ ಕದಡಿ ಸವಿಯಿರಿ ದೇಹಕ್ಕೆ ತಂಪು ನೀಡುವ ಮಿಲ್ಕ್ಶೇಕ್.

ತಂಪುಣಿಸಲು ಕಿವಿ–ಸವಿ

ಬೇಕಾಗುವ ಸಾಮಗ್ರಿಗಳು : ಕಿವಿ ಹಣ್ಣು-1 , ಪಾಲಕ್ 4 ಎಲೆ, ಸೇಬು ಹಣ್ಣು ೩ , ಉಪ್ಪು ಸ್ವಲ್ಪ,

ಮಾಡುವ ವಿಧಾನ : ಕಿವಿಹಣ್ಣು ಸಿಪ್ಪೆ ತೆಗೆದು ಮಿಕ್ಸಿ ಜಾರಿಗೆ ಹಾಕಿ ಪಾಲಕ್ ಎಲೆ, ಸೇಬು ಹೆಚ್ಚಿ ಹಾಕಿ ನುಣ್ಣಗೆ ರುಬ್ಬಿ, ಒಂದು ಕಪ್ ನೀರು ಸೇರಿಸಿ ಸವಿಯಿರಿ. ಇದು ಮಧುಮೇಹಿಗಳಿಗೂ ಒಳ್ಳೆಯದು. ವಿಟಮಿನ್ -ಸಿ ಇಂದ ಕೂಡಿದ ಶಕ್ತಿ ವರ್ಧಕ ಈ ಪಾನೀಯ ಚರ್ಮಕ್ಕೆ ಕಾಂತಿ ನೀಡುತ್ತದೆ.

ಆರಾಮಿನ ಭರವಸೆ ಅಗಸೆ

ಬೇಕಾಗುವ ಸಾಮಗ್ರಿಗಳು : ಅಗಸೆ ಬೀಜ – 1 ಕಪ್, ರಾಗಿ – 1 ಕಪ್, ಬಾದಾಮಿ-1 ಕಪ್ ಗೋಡಂಬಿ -1 ಕಪ್, ಏಲಕ್ಕಿ-4, ಲವಂಗ-4, ಬೆಲ್ಲ 1 ಚಮಚ, ಹಾಲು – ಕಪ್

ಮಾಡುವ ವಿಧಾನ : ಅಗಸೆ ಬೀಜ, ರಾಗಿಯನ್ನು ಬೇರೆ ಬೇರೆಯಾಗಿ ಹುರಿದುಕೊಂಡು ತಣ್ಣಗಾದ ಮೇಲೆ ಮಿಕ್ಸಿ ಜಾರಿಗೆ ಹಾಕಿ ಗೋಡಂಬಿ ಬಾದಾಮಿ ಏಲಕ್ಕಿ ಲವಂಗ ಹಾಕಿ ನುಣ್ಣಗೆ ಪುಡಿಮಾಡಿ ಡಬ್ಬಿಗೆ ತುಂಬಿಸಿ ಇಟ್ಟುಕೊಂಡು ಬೇಕಾದಾಗ ಒಂದು ಲೋಟ ತಣ್ಣಗಿನ ಹಾಲಿಗೆ 2 ಚಮಚ ಪುಡಿ ಬೆಲ್ಲ ಹಾಕಿ ಕದಡಿ ಸವಿಯಿರಿ.

ಭಲೆ ಭಲೆ ಕ್ಯಾರೆಟ್ ಕಿತ್ತಳೆ

ಬೇಕಾಗುವ ಸಾಮಗ್ರಿಗಳು : ಕಿತ್ತಳೆ ಹಣ್ಣು-1 , ಕ್ಯಾರೆಟ್ , ಹುಳಿ ಲಿಂಬೆ ರಸ -1 ಚಮಚ, ಶುಂಠಿ ಸಣ್ಣ ತುಂಡು ಸ್ವಲ್ಪ ಉಪ್ಪು

ಮಾಡುವ ವಿಧಾನ : ಕ್ಯಾರೆಟ್ ತುರಿದುಕೊಂಡು ಮಿಕ್ಸಿ ಜಾರಿಗೆ ಹಾಕಿ ಕಿತ್ತಳೆ ಹಣ್ಣು ಬಿಡಿಸಿ ಹಾಕಿ, ಶುಂಠಿ ಉಪ್ಪು ಹಾಕಿ ನುಣ್ಣಗೆ ರುಬ್ಬಿ ಲಿಂಬೆ ರಸ ಹಾಕಿ ಒಂದು ಕಪ್ ನೀರು ಹಾಕಿ, ಕದಡಿ ಸವಿಯಿರಿ ಇದು ಮಧುಮೇಹಿಗಳಿಗೂ ಒಳ್ಳೆಯದು.

ತಂಪು ಕೆಂಪು

ಬೇಕಾಗುವ ಸಾಮಗ್ರಿಗಳು: ಟೊಮೆಟೊ-2, ಲಿಂಬೆ ಹಣ್ಣು 1 ಹೋಳು, ಸಕ್ಕರೆ -3 ಚಮಚ, ಏಲಕ್ಕಿಪುಡಿ ಸ್ವಲ್ಪ,

ಮಾಡುವ ವಿಧಾನ : ಮಿಕ್ಸ್ ಜಾರಿಗೆ ಟೊಮೆಟೊ ಹೆಚ್ಚಿಹಾಕಿ ನುಣ್ಣಗೆ ರುಬ್ಬಿ ಸೋಸಿಕೊಂಡು ಅದಕ್ಕೆ ಲಿಂಬೆರಸ, ಏಲಕ್ಕಿ ಪುಡಿ, ಸಕ್ಕರೆ ಹಾಗೂ ಒಂದು ಕಪ್ ನೀರು ಹಾಕಿ ಚೆನ್ನಾಗಿ ಕದಡಿ ಐಸ್‌ಕ್ಯೂಬ್ ಸೇರಿಸಿ, ಕುಡಿಯಲು ಹಿತವಾದ ಪಾನೀಯ ಸಿದ್ಧ.

ದಾಂಪತ್ಯದ್ರೋಹಕ್ಕೆ ನಲುಗಿದ ಗಂಡ

ನಾನು ಮದುವೆಯಾಗಿದ್ದಾಕೆ ಇತರರೊಡನೆ ಅನೈತಿಕ ಸಂಬಂಧವನ್ನು ಇಟ್ಟುಕೊಂಡಿದ್ದಾಳೆ. ನಾನು ಕೆಲಸದ ನಿಮಿತ್ತ ಕಚೇರಿಗೆ ಅಥವಾ ಬೇರೆ ಊರಿಗೆ ಹೋದಂತಹ ಸಂದರ್ಭದಲ್ಲಿ ಯಾರು ಯಾರೋ ಗಂಡಸರು ಮನೆಗೆ ಬರುತ್ತಾರೆ. ಕೇಳಿದರೆ, ಅಲ್ಲಗಳೆಯುತ್ತಾಳೆ. ಜೊತೆಗೆ ಇನ್ನೊಮ್ಮೆ ಈ ರೀತಿ ಪ್ರಶ್ನೆ ಮಾಡಿದರೆ, ನನ್ನ ಮೇಲೆ ಮತ್ತು ನನ್ನ ತಂದೆ - ತಾಯಿಯ ಮೇಲೆ ಕೇಸ್ ಹಾಕುವುದಾಗಿ ಬೆದರಿಸಿದ್ದಾಳೆ. ಆಕೆಯ ತಂದೆ - ತಾಯಿಯೊಡನೆ ಮಾತನಾಡಿಯೂ ಪ್ರಯೋಜನವಾಗಿಲ್ಲ. ನಿತ್ಯವೂ ಭಯದಿಂದ ಇರುವ ವಾತಾವರಣ ನಿರ್ಮಾಣವಾಗಿದೆ. ನೆರೆಹೊರೆಯವರು ನನ್ನ ವ್ಯಕ್ತಿತ್ವದ ಮೇಲೂ ಪ್ರಶ್ನೆ ಎತ್ತಿದ್ದಾರೆ. ನಾನು ಎಲ್ಲ ರೀತಿಯಿಂದಲೂ ಸರಿ ಇದ್ದರೂ ಈ ರೀತಿಯ ಮಾನಸಿಕ ತೊಳಲಾಟಗಳಿಂದ ಒದ್ದಾಡುತ್ತಿದ್ದೇನೆ. ಯಾರಲ್ಲಿ ಹೇಳಿಕೊಳ್ಳಲಿ ಎಂದು ಗೊತ್ತಾಗುತ್ತಿಲ್ಲ. ಗಂಡಸರ ಅಳಲನ್ನು ಕೇಳುವವರಾರು?

ಅಂತರಂಗ

ಅಕ್ಷರ ದಾಮ್ಲೆ

ಹೆಂಗಸರ ಮೇಲೆ ನಡೆಯುತ್ತಿದ್ದ ಶೋಷಣೆಯನ್ನು ತಡೆದು ನ್ಯಾಯ ಒದಗಿಸಬೇಕು ಎಂದು ಕಾನೂನನ್ನು ಮಹಿಳಾ ಪರವಾಗಿ ಮಾಡಿದರೆ, ಅದನ್ನೇ ಅನೇಕ ಮಹಿಳೆಯರು ದುರ್ಬಳಕೆ ಮಾಡುತ್ತಿದ್ದಾರೆ. ತನಗೆ ಕಾನೂನಾತ್ಮಕ ಸುರಕ್ಷತೆ ಇದೆ ಎನ್ನುವ ಕಾರಣದಿಂದ ಸ್ವೇಚ್ಛಾಚಾರದ ಅನೇಕ ಘಟನೆಗಳು ನಡೆಯುತ್ತಿವೆ. ಮಾತ್ರವಲ್ಲ ಕೌಟುಂಬಿಕ ನ್ಯಾಯಾಲಯಗಳಲ್ಲೂ ಈ ರೀತಿಯ ಅನೇಕ ಪ್ರಕರಣಗಳು ಕಾಣಸಿಗುತ್ತವೆ. ಒಂದು ಕಡೆ ಮಹಿಳೆಯರ ಮೇಲೆ ಇನ್ನೂ ದೌರ್ಜನ್ಯ ನಡೆಯುತ್ತಿದ್ದರೆ, ಇನ್ನೊಂದು ಕಡೆ ಮಹಿಳೆಯರಿಂದಲೂ ದೌರ್ಜನ್ಯಗಳು ನಡೆಯುತ್ತಿವೆ.

ಕೌಟುಂಬಿಕ ವಿಚಾರಕ್ಕೆ ಬರುವುದಾದರೆ, ಅನೇಕ ಗಂಡಸರು ನಾಲ್ಕು ಗೋಡೆಗಳ ಮಧ್ಯದಲ್ಲಿ ವಿವಿಧ ರೀತಿಯ ದೌರ್ಜನ್ಯಗಳಿಗೆ ಒಳಗಾಗುತ್ತಿದ್ದಾರೆ. ಎಷ್ಟೋ ಮಹಿಳೆಯರು ಗಂಡಸರನ್ನು ದೈಹಿಕವಾಗಿ ಮತ್ತು ಮಾನಸಿಕವಾಗಿ ಹಿಂಸೆಗೆ ಒಳಪಡಿಸುತ್ತಿದ್ದಾರೆ. ಮತ್ತು ಪ್ರಶ್ನೆಯಲ್ಲಿ ಹೇಳಿದಂತೆ ನ್ಯಾಯಾಂಗದ ಬೆದರಿಕೆಯನ್ನೂ ಒಡ್ಡುತ್ತಿದ್ದಾರೆ. ಒಂದು ರೀತಿಯಲ್ಲಿ ನೋಡುವುದಾದರೆ ಅತೀವ ಧೈರ್ಯದಿಂದಲೇ ತಪ್ಪನ್ನು ಮಾಡುತ್ತಿದ್ದಾರೆ. ಆಮೇಲೆ ಕ್ರೌರ್ಯದ ವಿಚಾರ ಬಂದಾಗ ತಾನು ಹೆಣ್ಣು, ಸೌಮ್ಯ ಸ್ವಭಾವದವಳು ಎಂಬ ಚಿತ್ರಣವನ್ನು ಬಿಂಬಿಸುತ್ತಾಳೆ. ಹೀಗಾಗಿ ಅನೇಕ ಗಂಡಸರು ಅಡಕತ್ತರಿಯಲ್ಲಿ ಸಿಕ್ಕಿದ ಪರಿಸ್ಥಿತಿಗೆ ಒಳಗಾಗಿದ್ದಾರೆ. ಮಾತ್ರವಲ್ಲ ಇದರಿಂದಾಗಿ ತೀವ್ರವಾದ ಮಾನಸಿಕ ಅಸ್ವಸ್ತತೆಗೆ ಒಳಗಾಗುತ್ತಾರೆ. ಅನೇಕರು ಖಿನ್ನತೆ, ಉದ್ವೇಗ, ಅಸಹಾಯಕತೆ, ಚಿಂತೆ, ನಿದ್ರಾಹೀನತೆ, ಭೀತಿ ಮುಂತಾದ ವಿವಿಧ ಸಮಸ್ಯೆಗಳಿಂದ ಬಳಲುತ್ತಿದ್ದಾರೆ. ಮಾತ್ರವಲ್ಲ, ತಮ್ಮ ಅಳಲನ್ನು ತೋಡಿಕೊಳ್ಳಲು ಅಥವಾ ಅದಕ್ಕೆ ಪರಿಹಾರ ಸಿಗುವ ಸಾಧ್ಯತೆ ಕಡಿಮೆ ಎಂದು ಕಂಡುಬಂದಾಗ ಹತಾಶರಾಗಿ ಆತ್ಮಹತ್ಯೆಯಂಥ ತೀವ್ರತೆರನಾದ ನಿರ್ಧಾರಗಳನ್ನು ತೆಗೆದುಕೊಳ್ಳುತ್ತಾರೆ.

ಪ್ರಶ್ನೆಯಲ್ಲಿ ತಿಳಿಸಿದ ಸಮಸ್ಯೆಗಳನ್ನು ಎದುರಿಸಲು ಮೊದಲಿಗೆ ಮಾನಸಿಕವಾಗಿ ಆರೋಗ್ಯವಾಗಿರುವುದು ಬಹಳ ಮುಖ್ಯ. ದಾಂಪತ್ಯ ದ್ರೋಹ ಅನ್ನುವುದು ಬಹಳ ತೀವ್ರವಾದಂತಹ ಮಾನಸಿಕ ನೋವನ್ನು ಕೊಡುತ್ತದೆ. (ಈ ಕುರಿತು ಹಿಂದಿನ ಅಂಕಣದಲ್ಲಿ ವಿಸ್ತಾರವಾಗಿ ವಿವರಿಸಿದ್ದೆ). ಆ ನೋವನ್ನು ತಾಳಿಕೊಳ್ಳುವುದಕ್ಕೆ ಅಷ್ಟು ಸುಲಭವಿಲ್ಲ. ಕೌನ್ಸೆಲಿಂಗ್ ಮೂಲಕ ತಮ್ಮ ನೋವಿನ ತೀವ್ರತೆಯನ್ನು ಕಡಿಮೆ ಮಾಡಿಕೊಳ್ಳಬಹುದು. ಆಮೇಲೆ, ನಿಮ್ಮ ಜೀವನವನ್ನು ಹೇಗೆ ಸಾಗಿಸಬೇಕು ಎಂಬುವುದನ್ನು ನಿರ್ಧರಿಸಿ. ಯಾಕೆಂದರೆ, ಒಂದು ವೇಳೆ ನಿಮ್ಮ ಪತ್ನಿ ಮೋಸ ಮಾಡುತ್ತಿರುವುದು ಸತ್ಯವೇ ಆದರೆ, ಅಂತಹವರೊಡನೆ ಜೀವನ ಮಾಡುವುದು ಕಠಿಣವಾಗಬಹುದು. ಅಂತಹ ಸಂದರ್ಭದಲ್ಲಿ ನಿಮಗೋಸ್ಕರ ನೀವು ನಿಲುವನ್ನು ತಳೆಯುವುದು ಬಹಳ ಮುಖ್ಯ. ಆ ದಾರಿಯೂ ಸುಲಭದ್ದಾಗಿರುವುದಿಲ್ಲ. ಸತ್ಯದ ಮಾರ್ಗ ಕಠಿಣವಾಗಿರುತ್ತದೆ. ಮಾತ್ರವಲ್ಲ, ಸತ್ಯವನ್ನು ಎತ್ತಿ ಹಿಡಿಯಬೇಕಾದರೆ, ಅನೇಕ ರೀತಿಯ ಪರೀಕ್ಷೆಗಳನ್ನು ಎದುರಿಸಬೇಕಾಗುತ್ತದೆ. ಮಾನಸಿಕ ಸದೃಢತೆ ಬಹಳ ಮುಖ್ಯ. ಪೋಲಿಸ್ ಠಾಣೆಯಲ್ಲೂ ಆರಂಭದಲ್ಲಿ ನಿಮ್ಮ ಪ್ರಾಮಾಣಿಕತೆಯ ಪರೀಕ್ಷೆ ಆಗುತ್ತದೆ. ಸಮಾಜದಲ್ಲಿ ಗೌರವಯುತವಾಗಿಯೇ ಜೀವನ ಮಾಡುವುದು ನಮ್ಮ ಮೂಲಧರ್ಮವೆಂಬ ಮೌಲ್ಯಾಧಾರಿತ ಪಾಠವಾದಂಥವರಿಗೆ ಇಂಥ ಅವಮಾನಗಳನ್ನು ಸಹಿಸಿಕೊಳ್ಳುವುದು ಕಷ್ಟ. ಮೊದಲು ತಮ್ಮ ಮನಸ್ಸಿನಲ್ಲಿರುವಂತಹ ಭಾವನಾತ್ಮಕ ತಳಮಳಗಳನ್ನು ಸರಿಪಡಿಸಿಕೊಳ್ಳಬೇಕು. ಇದಕ್ಕೆ ಮನಃಶ್ಶಾಸ್ತ್ರಜ್ಞರ ಚಿಕಿತ್ಸೆಯ ಅನಿವಾರ್ಯವಾಗಿರುತ್ತದೆ. ಮನಃಶ್ಶಾಸ್ತ್ರೀಯ ಚಿಕಿತ್ಸೆಯ ಸಂದರ್ಭದಲ್ಲಿ ತಮ್ಮ ಅಳಲುಗಳನ್ನು ಹಂಚಿಕೊಳ್ಳುವುದಲ್ಲದೇ, ಮಾನಸಿಕ ಸ್ಥಿತಿಸ್ಥಾಪಕತ್ವವನ್ನು (mental resilience) ಗಳಿಸುವ ಕುರಿತು ತರಬೇತಿಯನ್ನು ಪಡೆದುಕೊಳ್ಳಬೇಕು. ತಮಗೆ ಮಾತ್ರವಲ್ಲದೇ, ತಮ್ಮ ಮನೆಯವರನ್ನೂ ಮಾನಸಿಕವಾಗಿ ಸದೃಢರನ್ನಾಗಿಸುವುದು ಪ್ರಮುಖವಾದ ವಿಷಯ. ಇಂಥ ಹೋರಾಟಗಳನ್ನು ಏಕಾಂಗಿಯಾಗಿ ಹೋರಾಡುವುದು ಬಹಳ ಕಷ್ಟ.

ಮೆಡಿಕವರ್ ಹಾಸ್ಪಿಟಲ್ಸ್
ಬೆಂಗಳೂರು
ಕ್ಯಾಷ್‌ಲೆಸ್ ಚಿಕಿತ್ಸೆ ಲಭ್ಯವಿದೆ

Oriental Insurance
नेशनल इन्श्योरेन्स National Insurance

- ಯುನೈಟೆಡ್ ಇಂಡಿಯಾ
- ದಿ ನ್ಯೂ ಇಂಡಿಯಾ
- ದಿ ಓರಿಯಂಟಲ್
- ನ್ಯಾಷನಲ್ ಇನ್ಶೂರೆನ್ಸ್
- ಸ್ಟಾರ್ ಹೆಲ್ತ್ ಅಲೈಡ್
- ಐಸಿಐಸಿಐ ಲೊಂಬಾರ್ಡ್
- ಎಚ್‌ಡಿಎಫ್‌ಸಿ ಅರ್ಗೋ
- ಬಜಾಜ್ ಅಲಿಯಾಂಜ್
- ಕೇರ್ ಹೆಲ್ತ್
- ರಿಲಯನ್ಸ್ ಜನರಲ್
- ಚೋಳಮಂಡಲಂ ಎಂಎಸ್ ಜೆನ್
- ಇಫ್ಕೊ ಟೊಕಿಯೊ
- ಟಾಟಾ ಎಐಜಿ
- ಫ್ಯೂಚರ್ ಜನರಾಲಿ ಹೆಲ್ತ್
- ಗೊ ಡಿಜಿಟ್
- ಅಬರ್ಟ ಜನರಲ್
- ಆಕೊ ಜನರಲ್
- ನವಿ ಜನರಲ್
- ಮಣಿಪಾಲ್ ಸಿಗ್ನಾ
- ಮೆಡಿ ಅಸಿಸ್ಟ್
- ಫ್ಯಾಮಿಲಿ ಹೆಲ್ತ್ ಪ್ಲಾನ್ ಲಿಮಿಟೆಡ್ (ಎಫ್‌ಎಚ್‌ಪಿಎಲ್)
- ಪ್ಯಾರಾಮೌಂಟ್
- ಗುಡ್ ಹೆಲ್ತ್ ಪ್ಲಾನ್ (ಜಿಎಚ್‌ಪಿಎಲ್)
- ಎಂಡಿ ಇಂಡಿಯಾ
- ವಿಡಲ್ ಹೆಲ್ತ್
- ಹೆಲ್ತ್ ಇಂಡಿಯಾ ಇನ್ಶೂರೆನ್ಸ್
- ವೋಲೊ ಟಿಪಿಎ (ಈಸ್ಟ್ ವೆಸ್ಟ್)
- ಹೆಲ್ತ್ ಇನ್ಶೂರೆನ್ಸ್ (ಹೈ ಟಿಪಿಎ)
- ಹೆರಿಟೇಜ್
- ಎರಿಕ್ಸನ್
- ರಕ್ಷಾ,
- ಸೇಫ್‌ವೇ
- ಜೆನಿನ್ಸ್
- ಪಾರ್ಕ್ ಮೆಡಿಕ್ಲೇಮ್
- ಅಕ್ಸಾ ಹೆಲ್ತ್
- ಇನ್ಶೂರೆನ್ಸ್ ಟಿಪಿಎ
- ಅಂಕ್–ಕೆ ಟಿಪಿಎ

ನಮ್ಮ ವೈಶಿಷ್ಟ್ಯತೆಗಳು

- ಕಾರ್ಡಿಯಾಲಜಿ
- ಕಾರ್ಡಿಯೊವ್ಯಾಸ್ಕುಲರ್ ಥೊರಾಸಿಕ್ ಸರ್ಜರಿ
- ಆರ್ಥೋಪೆಡಿಕ್ಸ್
- ಸ್ಪೈನ್ ಸರ್ಜರಿ
- ನ್ಯೂರಾಲಜಿ
- ನ್ಯೂರೋಸರ್ಜರಿ
- ನೆಫ್ರಾಲಜಿ
- ಡಯಾಲೈಸಿಸ್
- ಕಿಡ್ನಿ ಟ್ರಾನ್ಸ್‌ಪ್ಲಾಂಟ್
- ಯೂರಾಲಜಿ
- ಕ್ರಿಟಿಕಲ್ ಕೇರ್
- ಗ್ಯಾಸ್ಟ್ರೋಎಂಟೆರೊಲಾಜಿ
- ಬಾರಿಯಾಟ್ರಿಕ್ ಸರ್ಜರಿ
- ಇಂಟರ್ನಲ್ ಮೆಡಿಸಿನ್
- ಜನರಲ್ ಸರ್ಜರಿ
- ಮಿನಿಮಲಿ ಇನ್ವಾಸಿವ್ ಸರ್ಜರಿಗಳು
- ಎಮರ್ಜೆನ್ಸಿ ಮೆಡಿಸಿನ್
- ಆಬ್‌ಸ್ಟೆಟ್ರಿಕ್ಸ್ & ಗೈನಾಕೊಲಜಿ
- ಪೀಡಿಯಾಟ್ರಿಕ್ಸ್
- ಪೀಡಿಯಾಟ್ರಿಕ್ ಸರ್ಜರಿ
- ನ್ಯಾನೋಟಾಲಜಿ
- ಮೆಡಿಕಲ್ & ಸರ್ಜಿಕಲ್ ಆಂಕಾಲಜಿ
- ಇಎನ್‌ಟಿ
- ಫಿಜಿಯೊಥೆರಪಿ & ರಿಹ್ಯಾಬಿಲಿಟೇಶನ್
- ಪಲ್ಮನೋಲಾಜಿ
- ಡೆರ್ಮಟಲಜಿ
- ಪ್ಲಾಸ್ಟಿಕ್ & ರಿಕನ್‌ಸ್ಟ್ರಕ್ಟಿವ್ ಸರ್ಜರಿ
- ಡೆಂಟಲ್ & ಮ್ಯಾಕ್ಸಿಲ್ಲೊಫೇಶಿಯಲ್ ಸರ್ಜರಿ
- ವ್ಯಾಸ್ಕೂಲಾರ್ ಸರ್ಜರಿ
- ರೇಡಿಯಾಲಜಿ
- ಅನಸ್ಥೇಶಿಯಾಲಜಿ
- ಲ್ಯಾಪರೊಸ್ಕೋಪಿಕ್ ಸರ್ಜರಿಗಳು
- ರೋಬೋಟಿಕ್ ಸರ್ಜರಿಗಳು

*Served for informational purposes only. No other intentions are intended. * T&C apply

ವೈಟ್ ಫೀಲ್ಡ್, ಬೆಂಗಳೂರು
040 6833 4455

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	23,190
ಇಂದಿನ ಅಂತ್ಯ	23,350
▲	159
ದಿನದ ಗರಿಷ್ಠ	23,355

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100ಕ್ಕೆ	₹470
12 ಕ್ಕೆ	₹63
ಮೈಸೂರು	
100ಕ್ಕೆ	₹470

ರಾಮನಗರ ರೇಷ್ಮೆಗೂಡು



ಮಿಶ್ರತಳಿ (ಸಿ.ಬಿ)	₹444-633
ದ್ವಿತಳಿ (ಬಿ.ವಿ)	₹360-785

ಎನ್.ಆರ್.ಪುರ ರಬ್ಬರ್



ಆರ್‌ಎಸ್‌ಎಸ್-4	₹197
ಆರ್‌ಎಸ್‌ಎಸ್-5	₹192
ಗುಡ್ ಲಾಟ್	₹183

(ಪ್ರತಿ ಕೆ.ಜಿಗೆ)

ವಿನಿಮಯ ದರ

$ ಡಾಲರ್	85.98
£ ಪೌಂಡ್	111.18
€ ಯುರೊ	93.07
¥ ಯೆನ್ (100ಕ್ಕೆ)	58

100 ಕೋಟಿ ಟನ್ ಕಲ್ಲಿದ್ದಲು ಉತ್ಪಾದನೆ

ನವದೆಹಲಿ (ಪಿಟಿಐ): ಪ್ರಸಕ್ತ ಆರ್ಥಿಕ ವರ್ಷದಲ್ಲಿ ಭಾರತವು ನೂರು ಕೋಟಿ (ಬಿಲಿಯನ್) ಟನ್ ಕಲ್ಲಿದ್ದಲು ಉತ್ಪಾದಿಸುವ ಮೂಲಕ ಹೊಸ ಮೈಲಿಗಲ್ಲು ಸ್ಥಾಪಿಸಿದೆ.

'ಈ ಬೆಳವಣಿಗೆಯು ದೇಶಕ್ಕೆ ಹೆಮ್ಮೆಯ ಕ್ಷಣವಾಗಿದೆ. ಇಂಧನ ಭದ್ರತೆ ಮತ್ತು ಸ್ವಾವಲಂಬನೆ ಸಾಧಿಸುವ ಸರ್ಕಾರದ ಬದ್ಧತೆಗೆ ಕನ್ನಡಿ ಹಿಡಿದಿದೆ' ಎಂದು ಪ್ರಧಾನಿ ನರೇಂದ್ರ ಮೋದಿ ಶುಕ್ರವಾರ ಹೇಳಿದ್ದಾರೆ.

ವಿದ್ಯುತ್ ಉತ್ಪಾದನೆಯಲ್ಲಿ ಅತಿಹೆಚ್ಚು ಪ್ರಮಾಣದಲ್ಲಿ ಕಲ್ಲಿದ್ದಲು ಬಳಕೆಯಾಗುತ್ತದೆ. ಅಲ್ಲದೆ, ಹಲವು ಕೈಗಾರಿಕೆಗಳಲ್ಲಿ ಇದರ ಬಳಕೆ ಹೆಚ್ಚಿದೆ. ವಿಶ್ವದ ಐದನೇ ಅತಿದೊಡ್ಡ ಆರ್ಥಿಕತೆಯಾದ ಭಾರತಕ್ಕೆ ಶಕ್ತಿಯ ಮೂಲಗಳಲ್ಲಿ ಕಲ್ಲಿದ್ದಲು ಪ್ರಮುಖವಾಗಿದೆ.

ಕಲ್ಲಿದ್ದಲು ಉತ್ಪಾದನೆಯಲ್ಲಿ ಈ ಸಾಧನೆ ಮಾಡಿರುವುದು ವೈಶಿಷ್ಟ್ಯ ಪೂರ್ಣವಾಗಿದೆ. ದೇಶದ ಆರ್ಥಿಕತೆ ಬೆಳವಣಿಗೆಗೆ ಸಹಕಾರಿಯಾಗಿದೆ ಎಂದು ಮೋದಿ ಹೇಳಿದ್ದಾರೆ.

'ಉತ್ಪಾದನೆ ಹೆಚ್ಚಳಕ್ಕಷ್ಟೇ ಸರ್ಕಾರ ಒತ್ತು ನೀಡಿಲ್ಲ. ಸುಸ್ಥಿರ ಹಾಗೂ ಹೊಣೆಗಾರಿಕೆಯುತ ಗಣಿಗಾರಿಕೆಗೂ ಆದ್ಯತೆ ನೀಡಿದೆ' ಎಂದು ಕೇಂದ್ರ ಕಲ್ಲಿದ್ದಲು ಸಚಿವ ಜಿ. ಕೃಷ್ಣರೆಡ್ಡಿ ಅವರು ಹೇಳಿದ್ದಾರೆ.

ದೇಶದ ವಿದ್ಯುತ್ ಬೇಡಿಕೆ ನೀಗಿಸಲು ಈ ಉತ್ಪಾದನೆಯು ಸಹಕಾರಿಯಾಗಲಿದೆ. ಭಾರತವು ಜಾಗತಿಕ ಮಟ್ಟದಲ್ಲಿ ಇಂಧನ ಉತ್ಪಾದನೆಯಲ್ಲಿ ಮುಂಚೂಣಿ ಸ್ಥಾನ ಕಾಯ್ದುಕೊಳ್ಳಲು ನೆರವಾಗಲಿದೆ ಎಂದು ಹೇಳಿದ್ದಾರೆ.

ಈ ಸಾಧನೆ ಹಿಂದೆ ಸಾರ್ವಜನಿಕ ಮತ್ತು ಖಾಸಗಿ ವಲಯದ ಕಲ್ಲಿದ್ದಲು ಉತ್ಪಾದಿಸುವ ಕಂಪನಿಗಳ ಶ್ರಮ ದೊಡ್ಡದಿದೆ. ದೇಶದ 350ಕ್ಕೂ ಹೆಚ್ಚು ಗಣಿಗಳಲ್ಲಿ 5 ಲಕ್ಷಕ್ಕೂ ಹೆಚ್ಚು ಕಾರ್ಮಿಕರು ದುಡಿಯುತ್ತಿದ್ದಾರೆ. ಅವರೆಲ್ಲರಿಗೂ ಈ ಶ್ರೇಯ ಸಲ್ಲಬೇಕಿದೆ ಎಂದು ಕೇಂದ್ರ ಕಲ್ಲಿದ್ದಲು ಸಚಿವಾಲಯ ತಿಳಿಸಿದೆ.

ದೇಶದ ಶಕ್ತಿಯ ಮೂಲಗಳಲ್ಲಿ ಕಲ್ಲಿದ್ದಲು ಪಾಲು ಶೇ 55ರಷ್ಟಿದೆ. ಒಟ್ಟು ವಿದ್ಯುತ್ ಉತ್ಪಾದನೆಯ ಪೈಕಿ ಕಲ್ಲಿದ್ದಲು ಆಧರಿತ ವಿದ್ಯುತ್ ಘಟಕಗಳಿಂದ ಶೇ 74ರಷ್ಟು ವಿದ್ಯುತ್ ಉತ್ಪಾದನೆಯಾಗುತ್ತದೆ.

ಅಡಿಕೆ ಧಾರಣೆ (₹ಗಳಲ್ಲಿ)

ಕಾರ್ಕಳ		ಚಾಲಿ	32199-36099	ಕೆಂಪುಗೋಟು	20561-23701
ಹೊಸತು	25000-40000	ಕೋಕ	12799-20109	ರಾಶಿ	40088-47619
ಹಳತು	30000-46000	ಹೊಸಚಾಲಿ	30519-35799	ಯಲ್ಲಾಪುರ	
ಶಿವಮೊಗ್ಗ		ಕೆಂಪುಗೋಟು	19119-21309	ಅಪಿ	58009-64777
ಬೆಟ್ಟೆ	51009-56009	ರಾಶಿ	41009-46099	ಬಿಳಿಗೋಟು	12899-29200
ಗೊರಬಲು	18190-26500	ತಟ್ಟಿಬೆಟ್ಟೆ	30099-39119	ಚಾಲಿ	30299-38666
ರಾಶಿ	32166-52299	ಶಿರಸಿ		ಕೋಕ	4609-16899
ಸರಕು	53000-93500	ಬೆಟ್ಟೆ	26011-37499	ಕೆಂಪುಗೋಟು	14899-27969
ಸಿದ್ದಾಪುರ		ಬಿಳಿಗೋಟು	16296-29169	ರಾಶಿ	39617-55109
ಬಿಳಿಗೋಟು	22299-26499	ಚಾಲಿ	32608-37629	ತಟ್ಟಿಬೆಟ್ಟೆ	28000-38899

ಸಂಕ್ಷಿಪ್ತ ಸುದ್ದಿ

ಲಂಚ: ಪವರ್ ಗ್ರಿಡ್ ಅಧಿಕಾರಿ ಸೆರೆ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ಪವರ್ ಗ್ರಿಡ್ ಕಾರ್ಪೊರೇಷನ್ ಆಫ್ ಇಂಡಿಯಾದ ಹಿರಿಯ ಪ್ರಧಾನ ವ್ಯವಸ್ಥಾಪಕ ಉದಯ್ ಕುಮಾರ್ ಎಂಬುವರು, ₹2.4 ಲಕ್ಷ ಲಂಚ ಪಡೆಯುತ್ತಿದ್ದ ವೇಳೆ ಸಿಬಿಐ ಬಲೆಗೆ ಬಿದ್ದಿದ್ದಾರೆ.

ಮುಂಬೈನ ಕೆಇಸಿ ಇಂಟರ್ ನ್ಯಾಷನಲ್‌ಗೆ ಪವರ್ ಗ್ರಿಡ್‌ನಿಂದ ನೀಡಿದ್ದ ಗುತ್ತಿಗೆಗೆ ಸಂಬಂಧಿಸಿದ ಬಾಕಿ ಬಿಲ್‌ಗಳ ಇತ್ಯರ್ಥಕ್ಕಾಗಿ ಪ್ರಧಾನ ವ್ಯವಸ್ಥಾಪಕರು ಲಂಚ ಪಡೆಯುತ್ತಿದ್ದರು. ಈ ವೇಳೆ ಅವರು ಸೇರಿದಂತೆ ಕೆಇಸಿ ಕಂಪನಿಯ ಸುಮನ್ ಸಿಂಗ್ ಎಂಬುವರನ್ನು ಬಂಧಿಸಲಾಗಿದೆ ಎಂದು ಸಿಬಿಐ ವಕ್ತಾರರು ತಿಳಿಸಿದ್ದಾರೆ.

ಮಹೀಂದ್ರ ವಾಹನ ಬೆಲೆ ಏರಿಕೆ

ನವದೆಹಲಿ (ಪಿಟಿಐ): ಮಹೀಂದ್ರ ಆ್ಯಂಡ್ ಮಹೀಂದ್ರ ಕಂಪನಿಯು ಎಸ್‌ಯುವಿ ಮತ್ತು ವಾಣಿಜ್ಯ ವಾಹನಗಳ ಬೆಲೆಯನ್ನು ಶೇ 3ರಷ್ಟು ಏರಿಕೆ ಮಾಡಿದೆ. ಏಪ್ರಿಲ್‌ನಿಂದ ಈ ಪರಿಷ್ಕೃತ ದರವು ಜಾರಿಗೆ ಬರಲಿದೆ. ವಾಹನಗಳ ತಯಾರಿಕಾ ವೆಚ್ಚದಲ್ಲಿ ಹೆಚ್ಚಳವಾಗಿದೆ. ಸರಕುಗಳ ಬೆಲೆ ಕೂಡ ದುಬಾರಿಯಾಗಿದೆ. ಹಾಗಾಗಿ, ದರ ಏರಿಕೆ ಮಾಡುವುದು ಅನಿವಾರ್ಯವಾಗಿದೆ ಎಂದು ತಿಳಿಸಿದೆ.

ಗುಜರಾತ್ ಅದಾನಿ ಕಂಪನಿಗೆ ಐದನೇ ಗುತ್ತಿಗೆ

ನವದೆಹಲಿ (ಪಿಟಿಐ): ಗುಜರಾತ್‌ನಲ್ಲಿ ₹2,800 ಕೋಟಿ ಮೌಲ್ಯದ ವಿದ್ಯುತ್ ಪ್ರಸರಣ ಯೋಜನೆಯ ಗುತ್ತಿಗೆ ಪಡೆಯಲಾಗಿದೆ ಎಂದು ಅದಾನಿ ಎನರ್ಜಿ ಸಲ್ಯೂಷನ್ಸ್ ಕಂಪನಿ (ಎಇಎಸ್‌ಎಲ್) ತಿಳಿಸಿದೆ.

ಪ್ರಸಕ್ತ ಆರ್ಥಿಕ ವರ್ಷದಲ್ಲಿ ಕಂಪನಿಯು ಗುಜರಾತ್ ರಾಜ್ಯ ಸರ್ಕಾರದಿಂದ ಪಡೆಯುತ್ತಿರುವ ಐದನೇ ಗುತ್ತಿಗೆ ಇದಾಗಿದೆ. ಇಲ್ಲಿಯವರೆಗಿನ ಗುತ್ತಿಗೆಗಳ ಮೌಲ್ಯ ₹57,561 ಕೋಟಿ ಆಗಿದೆ ಎಂದು ಕಂಪನಿಯು ಷೇರುಪೇಟೆಗೆ ಶುಕ್ರವಾರ ಮಾಹಿತಿ ನೀಡಿದೆ.

ಈ ಯೋಜನೆಯಡಿ ಹಸಿರು ಜಲಜನಕ ಮತ್ತು ಹಸಿರು ಅಮೋನಿಯಾ ಪೂರೈಕೆ ಮಾಡಲಾಗುವುದು ಎಂದು ತಿಳಿಸಿದೆ. ಅದಾನಿ ಸಮೂಹಕ್ಕೆ ಸೇರಿದ ಎಇಎಸ್‌ಎಲ್, ವಿದ್ಯುತ್ ಪ್ರಸರಣ, ಸ್ಮಾರ್ಟ್ ಮೀಟರ್ ಅಳವಡಿಕೆ ಸೇರಿ ಬಹುಆಯಾಮದ ಸೇವೆ ಒದಗಿಸುತ್ತದೆ.

5 ದಿನದಲ್ಲಿ ₹22.12 ಲಕ್ಷ ಕೋಟಿ ಸಂಪತ್ತು ವೃದ್ಧಿ

ಮೈಕೊಡವಿ ನಿಂತ ಗೂಳಿ



ಮುಂಬೈ (ಪಿಟಿಐ): ಸತತ ಐದನೇ ದಿನವಾದ ಶುಕ್ರವಾರವೂ ದೇಶದ ಷೇರುಪೇಟೆಯಲ್ಲಿ ಗೂಳಿಯ ಓಟ ಮುಂದುವರಿದಿದ್ದು, ಸೂಚ್ಯಂಕಗಳು ಶೇ 1ರಷ್ಟು ಏರಿಕೆ ಕಂಡಿವೆ.

ವಿದೇಶಿ ಬಂಡವಾಳದ ಒಳಹರಿವು ಹೆಚ್ಚಳದಿಂದಾಗಿ ದೇಶೀಯ ಮಾರುಕಟ್ಟೆಯು ಸಕಾರಾತ್ಮಕ ವಹಿವಾಟು ದಾಖಲಿಸಿದೆ. ಇದರಿಂದ ಬ್ಯಾಂಕ್ ಷೇರುಗಳ ಮೌಲ್ಯ ಏರಿಕೆ ಕಂಡಿದೆ ಎಂದು ತಜ್ಞರು ಹೇಳಿದ್ದಾರೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 557 ಅಂಶ ಏರಿಕೆ ಕಂಡು, 76,905 ಅಂಶಗಳಲ್ಲಿ ಸ್ಥಿರಗೊಂಡಿತು. ವಹಿವಾಟಿನ ಒಂದು ಸಂದರ್ಭದಲ್ಲಿ 693 ಅಂಶ ಏರಿಕೆಯಾಗಿತ್ತು.

ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 159 ಅಂಶ ಹೆಚ್ಚಳ ಕಂಡು 23,350 ಅಂಶಗಳಲ್ಲಿ ವಹಿವಾಟು ಮುಕ್ತಾಯಗೊಂಡಿತು.

ಪ್ರಸಕ್ತ ವರ್ಷದಲ್ಲಿ ಅಮೆರಿಕದ ಫೆಡ್ ರಿಸರ್ವ್ ಎರಡು ಬಾರಿ ಬಡ್ಡಿದರ ಕಡಿತಗೊಳಿಸುವ ಸಾಧ್ಯತೆಯಿದೆ. ಇದು ಹೂಡಿಕೆದಾರರ ವಿಶ್ವಾಸ ವೃದ್ಧಿಗೆ ಕಾರಣವಾಗಿದೆ ಎಂದು ಮಾರುಕಟ್ಟೆ ತಜ್ಞರು ತಿಳಿಸಿದ್ದಾರೆ.

ಸೆನ್ಸೆಕ್ಸ್ ಗುಚ್ಛದಲ್ಲಿನ ಎನ್‌ಟಿಪಿಸಿ, ಬಜಾಜ್ ಫೈನಾನ್ಸ್, ಕೋಟಕ್ ಮಹೀಂದ್ರ ಬ್ಯಾಂಕ್, ಎಕ್ಸಿಸ್ ಬ್ಯಾಂಕ್, ನೆಸ್ಲೆ, ಎಲ್ ಆ್ಯಂಡ್ ಟಿ, ಟಾಟಾ ಮೋಟರ್ಸ್, ಐಸಿಐಸಿಐ ಬ್ಯಾಂಕ್, ಪವರ್ ಗ್ರಿಡ್, ಜೊಮಾಟೊ ಷೇರಿನ ಮೌಲ್ಯದಲ್ಲಿ ಏರಿಕೆಯಾಗಿದೆ.

ಇನ್ಫೊಸಿಸ್, ಟಾಟಾ ಸ್ಟೀಲ್, ಮಹೀಂದ್ರ ಆ್ಯಂಡ್ ಮಹೀಂದ್ರ, ಟೈಟನ್ ಮತ್ತು ಬಜಾಜ್ ಫಿನ್‌ಸರ್ವ್ ಷೇರಿನ ಮೌಲ್ಯದಲ್ಲಿ ಇಳಿಕೆಯಾಗಿದೆ.

ಗುರುವಾರದ ವಹಿವಾಟಿನಲ್ಲಿ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ₹3,239 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ.

ಜಾಗತಿಕ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾತೈಲದ ಬೆಲೆಯು ಶೇ 0.21ರಷ್ಟು ಇಳಿಕೆಯಾಗಿದ್ದು, ಪ್ರತೀ ಬ್ಯಾರೆಲ್ 71.85 ಡಾಲರ್ ಆಗಿದೆ.

ಐದು ವಹಿವಾಟುಗಳಲ್ಲಿ ಸೆನ್ಸೆಕ್ಸ್ ಶೇ 4ರಷ್ಟು ಏರಿಕೆ ಕಂಡಿದೆ. ಹೂಡಿಕೆದಾರರ ಸಂಪತ್ತು ₹22.12 ಲಕ್ಷ ಕೋಟಿ ಹೆಚ್ಚಳವಾಗಿದೆ.

ಚಿನ್ನದ ಬೆಲೆ ಇಳಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಶುಕ್ರವಾರ ಲಾಭ ಗಳಿಕೆಯ ವಹಿವಾಟು ನಡೆದಿದ್ದರಿಂದ ಸತತ ಎರಡನೇ ದಿನವೂ ಚಿನ್ನ ಮತ್ತು ಬೆಳ್ಳಿ ಧಾರಣೆಯು ಇಳಿಕೆ ಕಂಡಿದೆ.

10 ಗ್ರಾಂ ಚಿನ್ನದ ದರವು (ಶೇ 99.9 ಪರಿಶುದ್ಧತೆ) ₹400 ಇಳಿಕೆ ಕಂಡು, ₹91,250ಕ್ಕೆ ಮಾರಾಟವಾಗಿದೆ. ಆಭರಣ ಚಿನ್ನದ (ಶೇ 99.5 ಪರಿಶುದ್ಧತೆ) ಧಾರಣೆಯು ಇಷ್ಟೇ ಪ್ರಮಾಣದಲ್ಲಿ ಇಳಿಕೆಯಾಗಿದ್ದು, ₹90,800 ಆಗಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

ಪ್ರತಿ ಕೆ.ಜಿ. ಬೆಳ್ಳಿ ದರವು ₹1,700 ಇಳಿಕೆ ಕಂಡಿದ್ದು, ₹1,00,300 ಆಗಿದೆ.

ವರ್ತಕರು ಲಾಭ ಗಳಿಕೆಯ ಉದ್ದೇಶದಿಂದ ಚಿನ್ನದ ಮಾರಾಟಕ್ಕೆ ಮುಂದಾಗಿದ್ದಾರೆ. ಇದರಿಂದ ಬೆಲೆ ಇಳಿದಿದೆ ಎಂದು ಮಾರುಕಟ್ಟೆ ತಜ್ಞರು ತಿಳಿಸಿದ್ದಾರೆ

ಸುದ್ದಿ 2 ನಿಮಿಷ

ಕೇಂದ್ರ ಸರ್ಕಾರದ ನೋಟಿಸ್‌ಗೆ ಉತ್ತರಿಸಲು ಸಿದ್ಧ: ಓಲಾ ಎಲೆಕ್ಟ್ರಿಕ್

ನವದೆಹಲಿ (ಪಿಟಿಐ): ವಾಹನ್ ಪೋರ್ಟಲ್‌ನಲ್ಲಿ ದ್ವಿಚಕ್ರ ವಾಹನಗಳ ನೋಂದಣಿ ಮತ್ತು ಮಾರಾಟದ ವ್ಯತ್ಯಾಸಕ್ಕೆ ಸಂಬಂಧಿಸಿದಂತೆ ಕೇಂದ್ರ ಬೃಹತ್ ಕೈಗಾರಿಕಾ ಸಚಿವಾಲಯ ಮತ್ತು ರಸ್ತೆ ಸಾರಿಗೆ ಸಚಿವಾಲಯದಿಂದ ವಿವರಣೆ ಕೋರಿ ನೋಟಿಸ್ ಸ್ವೀಕರಿಸಲಾಗಿದೆ ಎಂದು ಓಲಾ ಎಲೆಕ್ಟ್ರಿಕ್ ಕಂಪನಿಯು, ಶುಕ್ರವಾರ ಷೇರುಪೇಟೆಗೆ ಮಾಹಿತಿ ನೀಡಿದೆ.

ವ್ಯಾಪಾರ ಪ್ರಮಾಣ ಪತ್ರಕ್ಕೆ ಸಂಬಂಧಿಸಿದಂತೆಯೂ ವಿವರಣೆ ಕೇಳಲಾಗಿದೆ. ಎರಡು ಸಚಿವಾಲಯಗಳು ನೀಡಿರುವ ನೋಟಿಸ್‌ಗೆ ಉತ್ತರ ನೀಡಲಾಗುವುದು ಎಂದು ತಿಳಿಸಿದೆ.

ನಾಲ್ಕು ರಾಜ್ಯಗಳಿಂದ ವ್ಯಾಪಾರ ಪ್ರಮಾಣ ಪತ್ರಕ್ಕೆ ಸಂಬಂಧಿಸಿದಂತೆ ನೋಟಿಸ್ ಸ್ವೀಕರಿಸಲಾಗಿದೆ. ಇದಕ್ಕೂ ಉತ್ತರಿಸಲಾಗುವುದು. ಈ ರಾಜ್ಯಗಳಲ್ಲಿ ಕಂಪನಿಯು ಇ- ಸ್ಕೂಟರ್ ಮಾರಾಟ ಮಳಿಗೆಗಳನ್ನು ಹೊಂದಿದೆ ಎಂದು ತಿಳಿಸಿದೆ.

ರೂಪಾಯಿ ಮೌಲ್ಯ 38 ಪೈಸೆ ಏರಿಕೆ

ಮುಂಬೈ (ಪಿಟಿಐ): ದೇಶೀಯ ಷೇರುಪೇಟೆಯು ಏರಿಕೆಯ ಹಳಿಗೆ ಮರಳಿರುವುದು ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ರೂಪಾಯಿಗೆ ಬಲ ನೀಡಿದೆ.

ಶುಕ್ರವಾರ ನಡೆದ ವಹಿವಾಟಿನಲ್ಲಿ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯವು 38 ಪೈಸೆ ಏರಿಕೆಯಾಗಿದೆ. ಪ್ರತೀ ಡಾಲರ್ ಮೌಲ್ಯ ₹85. 98 ಆಗಿದೆ. ಗುರುವಾರದ ವಹಿವಾಟಿನಲ್ಲಿ ಒಂದು ಪೈಸೆ ಏರಿಕೆ ಕಂಡಿತ್ತು. ಸತತ ಆರು ದಿನಗಳ ವಹಿವಾಟಿನಲ್ಲಿ ಒಟ್ಟು 125 ಪೈಸೆ ಏರಿಕೆಯಾಗಿದೆ.

'ಜಾಗತಿಕ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆ ಇಳಿಕೆಯಾಗಿದೆ. ದೇಶೀಯ ಷೇರುಪೇಟೆಯಲ್ಲಿ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ಷೇರುಗಳನ್ನು ಖರೀದಿಸಿದ್ದಾರೆ. ಇದು ರೂಪಾಯಿ ಬಲಗೊಳ್ಳಲು ನೆರವಾಗಿದೆ' ಎಂದು ಮಿರೇ ಅಸೆಟ್ ಶೇರ್‌ಖಾನ್ ಸಂಸ್ಥೆಯ ಸಂಶೋಧನಾ ವಿಶ್ಲೇಷಕ ಅನುಜ್ ಚೌಧರಿ ಹೇಳಿದ್ದಾರೆ.

ಸಂಯುಕ್ತ ವೇದಿಕೆಯಿಂದ ಪ್ರತಿಭಟನೆ ಮುಂದೂಡಿಕೆ

ಬ್ಯಾಂಕ್ ನೌಕರರಿಗೆ ಕೇಂದ್ರ ಭರವಸೆ

ನವದೆಹಲಿ (ಪಿಟಿಐ): ವಾರದಲ್ಲಿ ಐದು ದಿನ ಕೆಲಸ ನಿಗದಿ ಮಾಡುವುದು ಸೇರಿ ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಮಾರ್ಚ್ 24 ಮತ್ತು 25ರಂದು ದೇಶದಾದ್ಯಂತ ಹಮ್ಮಿಕೊಳ್ಳಲು ನಿರ್ಧರಿಸಿದ್ದ ಪ್ರತಿಭಟನೆಯನ್ನು ಬ್ಯಾಂಕ್ ಅಧಿಕಾರಿಗಳು ಮತ್ತು ನೌಕರರ ಸಂಘಟನೆಗಳು ಮುಂದೂಡಿವೆ.

ಕೇಂದ್ರ ಹಣಕಾಸು ಸಚಿವಾಲಯ ಮತ್ತು ಭಾರತೀಯ ಬ್ಯಾಂಕ್‌ಗಳ ಒಕ್ಕೂಟದಿಂದ (ಐಬಿಎ) ಬೇಡಿಕೆ ಈಡೇರಿಸುವ ಕುರಿತು ಸಕಾರಾತ್ಮಕ ಭರವಸೆ ಸಿಕ್ಕಿದೆ. ಹಾಗಾಗಿ, ಎರಡು ದಿನದವರೆಗೆ ಹಮ್ಮಿಕೊಳ್ಳಲು ತೀರ್ಮಾನಿಸಿದ್ದ ಹೋರಾಟವನ್ನು ಮುಂದೂಡಲಾಗಿದೆ ಎಂದು ಬ್ಯಾಂಕ್ ಸಂಘಟನೆಗಳ ಸಂಯುಕ್ತ ವೇದಿಕೆಯು (ಯುಎಫ್‌ಬಿಯು) ಶುಕ್ರವಾರ ತಿಳಿಸಿದೆ.

ಅಧಿಕಾರಿಗಳು ಮತ್ತು ನೌಕರರ ಸಂಘಟನೆಯ ಪ್ರತಿನಿಧಿಗಳ ಜೊತೆಗೆ ಕೇಂದ್ರ ಕಾರ್ಮಿಕ ಆಯುಕ್ತರು ಸಭೆ ನಡೆಸಿದ್ದಾರೆ. ಸಭೆಯಲ್ಲಿ ನೀಡಿರುವ ಭರವಸೆ ಅನ್ವಯ ಈ ನಿರ್ಧಾರ ಕೈಗೊಳ್ಳಲಾಗಿದೆ. ಏಪ್ರಿಲ್ 22ರೊಳಗೆ ವರದಿ ಸಲ್ಲಿಸಲು ಐಬಿಎಗೆ ಸೂಚಿಸಲಾಗಿದೆ ಎಂದು ತಿಳಿಸಿದೆ.

'ವಾರದಲ್ಲಿ ಐದು ದಿನಗಳ ಕೆಲಸ ನಿಗದಿಗೆ ಸಂಬಂಧಿಸಿದಂತೆ ಮಂಡಿಸಿರುವ ಬೇಡಿಕೆ ಈಡೇರಿಸುವ ಬಗ್ಗೆ ಕಾರ್ಮಿಕ ಆಯುಕ್ತರು ಭರವಸೆ ನೀಡಿದ್ದಾರೆ' ಎಂದು ಅಖಿಲ ಭಾರತ ಬ್ಯಾಂಕ್ ನೌಕರರ ಸಂಘದ ಪ್ರಧಾನ ಕಾರ್ಯದರ್ಶಿ ಸಿ.ಎಚ್. ವೆಂಕಟಾಚಲಂ ಅವರು ತಿಳಿಸಿದ್ದಾರೆ.

ಏಪ್ರಿಲ್ 8ಕ್ಕೆ ಸಿಡಬ್ಲ್ಯುಸಿ ಸಭೆ ಸೋನಿಯಾ, ರಾಹುಲ್ ಭಾಗಿ

ಅ ಹ ಮ ದಾ ಬಾ ದ್ (ಪಿಟಿಐ): ಅಹಮದಾಬಾದ್‌ನಲ್ಲಿ ಏಪ್ರಿಲ್ 8ರಂದು ಕಾಂಗ್ರೆಸ್ ಕಾರ್ಯಕಾರಿ ಸಮಿತಿ (ಸಿಡಬ್ಲ್ಯುಸಿ) ಸಭೆ ನಡೆಯಲಿದ್ದು, ಸೋನಿಯಾ ಗಾಂಧಿ ಹಾಗೂ ರಾಹುಲ್ ಗಾಂಧಿ ಸೇರಿ ಪಕ್ಷದ ಹಿರಿಯ ನಾಯಕರು ಪಾಲ್ಗೊಳ್ಳುವರು ಎಂದು ಕಾಂಗ್ರೆಸ್‌ನ ಗುಜರಾತ್ ಘಟಕದ ಅಧ್ಯಕ್ಷ ಶಕ್ತಿ ಸಿನ್ಹಾ ಗೋಹಿಲ್ ಶುಕ್ರವಾರ ತಿಳಿಸಿದ್ದಾರೆ.

ನಗರದ ಸರದಾರ ವಲ್ಲಭಭಾಯಿ ಪಟೇಲ್ ರಾಷ್ಟ್ರೀಯ ಸ್ಮಾರಕ ಸಂಕೀರ್ಣದಲ್ಲಿ ಸಿಡಬ್ಲ್ಯುಸಿ ನಡೆಯಲಿದೆ. ಏಪ್ರಿಲ್ 9ರಂದು ಸಾಬರಮತಿ ನದಿ ತಟದಲ್ಲಿ ಎಐಸಿಸಿ ಅಧಿವೇಶನ ನಡೆಯಲಿದ್ದು, ದೇಶದ ವಿವಿಧ ಭಾಗಗಳ ಅಂದಾಜು 3 ಸಾವಿರ ಪ್ರತಿನಿಧಿಗಳು ಪಾಲ್ಗೊಳ್ಳುವರು ಎಂದು ಅವರು ತಿಳಿಸಿದ್ದಾರೆ.

ಹತ್ಯೆ ಪ್ರಕರಣ: ಸಿಪಿಎಂನ 9 ಕಾರ್ಯಕರ್ತರು ತಪ್ಪಿತಸ್ಥರು

ಪ್ರಜಾವಾಣಿ ವಾರ್ತೆ

ತಿರುವನಂತಪುರ: 2005ರಲ್ಲಿ ಕೇರಳದ ಕಣ್ಣೂರಿನಲ್ಲಿ ನಡೆದ ಬಿಜೆಪಿ ಕಾರ್ಯಕರ್ತನ ಹತ್ಯೆ ಪ್ರಕರಣದಲ್ಲಿ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರ ಮಾಧ್ಯಮ ಕಾರ್ಯದರ್ಶಿಯ ಸಹೋದರ ಹಾಗೂ ಸಿಪಿಎಂ ಕಾರ್ಯಕರ್ತರು ಸೇರಿದಂತೆ 9 ಮಂದಿ ತಪ್ಪಿತಸ್ಥರು ಎಂದು ನ್ಯಾಯಾಲಯ ತೀರ್ಪು ಪ್ರಕಟಿಸಿದೆ.

ತಲಶ್ಶೇರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶ ಕೆ.ಟಿ ನಿಸಾರ್ ಅಹಮ್ಮದ್ ಅವರು ಶುಕ್ರವಾರ ಈ ತೀರ್ಪು ನೀಡಿದ್ದು, ಮಾ.24ರಂದು ಅಪರಾಧಿಗಳಿಗೆ ಶಿಕ್ಷೆ ವಿಧಿಸಲಾಗುವುದು.

ಎಳಂಬಿಯಾಲಿ ಸೂರಜ್ ಅವರು ಸಿಪಿಎಂ ತೊರೆದು ಬಿಜೆಪಿ ಸೇರಿದ ಕಾರಣ ರಾಜಕೀಯ ದ್ವೇಷದಿಂದ ಅವರನ್ನು ಆ.7 2005ರಂದು ಹತ್ಯೆ ಮಾಡಲಾಯಿತು.

9 ಮಂದಿ ತಪ್ಪಿತಸ್ಥರಲ್ಲಿ ಒಬ್ಬರಾಗಿರುವ ಟಿ.ಕೆ ರಾಜೇಶ್, 2012ರಲ್ಲಿ ನಡೆದ ಸಿಪಿಎಂ ನಾಯಕ ಟಿ.ಪಿ ಚಂದ್ರಶೇಖರನ್ ಅವರ ಹತ್ಯೆ ಪ್ರಕರಣದ ಅಪರಾಧಿಯೂ ಆಗಿದ್ದಾರೆ.

ಪ್ರಕರಣದ ವಿಚಾರಣೆ ಅವಧಿಯಲ್ಲಿ ಇಬ್ಬರು ಆರೋಪಿಗಳು ಮೃತಪಟ್ಟಿದ್ದು, ಒಬ್ಬ ಆರೋಪಿಯನ್ನು ಖುಲಾಸೆಗೊಳಿಸಲಾಗಿದೆ.

ಹೀಥ್ರೂ: 1,350 ವಿಮಾನ ರದ್ದು

ಲಂಡನ್ (ಎಪಿ): ಯುರೋಪಿನ ಅತ್ಯಂತ ಹೆಚ್ಚು ಪ್ರಯಾಣಿಕರ ದಟ್ಟಣೆಯ ವಿಮಾನ ನಿಲ್ದಾಣವೆನಿಸಿರುವ ಲಂಡನ್‌ನ ಹೀಥ್ರೂ ಶುಕ್ರವಾರ ತನ್ನ ಕಾರ್ಯಾಚರಣೆ ಸ್ಥಗಿತಗೊಳಿಸಿದ್ದರಿಂದ ಸುಮಾರು 1.45 ಲಕ್ಷ ಪ್ರಯಾಣಿಕರು ತೊಂದರೆಗೆ ಸಿಲುಕಿದರು.

ಫ್ಲೈಟ್ ಟ್ರ್ಯಾಕಿಂಗ್ ಸೇವೆ ಒದಗಿಸುವ ಫ್ಲೈಟ್ ರೇಡಾರ್ 24ರ ಪ್ರಕಾರ, ಬೆಂಕಿ ಅವಘಡದಿಂದಾಗಿ, ಹೀಥ್ರೂಗೆ ಬರುವ ಮತ್ತು ಅಲ್ಲಿಂದ ನಿರ್ಗಮಿಸುವ ಸುಮಾರು 1,350 ವಿಮಾನಗಳ ಸಂಚಾರದ ಮೇಲೆ ಪರಿಣಾಮ ಉಂಟಾಗಿತ್ತು.

ಬೆಂಕಿ ಅವಘಡ ಸಂಭವಿಸಿದ 18 ಗಂಟೆಗಳ ನಂತರ, ಶುಕ್ರವಾರ ಸಂಜೆ ಹೀಥ್ರೂ ವಿಮಾನ ನಿಲ್ದಾಣ ಕಾರ್ಯಾಚರಣೆ ಆರಂಭಿಸಿತು. ಬ್ರಿಟಿಷ್ ಏರ್‌ವೇಸ್‌ನ ವಿಮಾನವು ಇಲ್ಲಿ ಬಂದಿಳಿಯಿತು.

ರದ್ದಾದ ವಿಮಾನಗಳಲ್ಲಿ ಭಾರತ ಸೇರಿದಂತೆ ಹಲವು ರಾಷ್ಟ್ರಗಳ ನಡುವೆ ಸಂಚರಿಸುವ ವಿಮಾನಗಳು ಸೇರಿವೆ. ಅದರಲ್ಲಿಯೂ ಅಮೆರಿಕದ ವಿಮಾನಗಳ ಸಂಖ್ಯೆ ಹೆಚ್ಚಿದೆ. ಸದ್ಯ, ಪ್ರಯಾಣಿಕರು ತಮ್ಮ ಪ್ರಯಾಣವನ್ನು ಮರು ನಿಗದಿಪಡಿಸಬೇಕಿರುವುದರಿಂದ ಇದರ ಪರಿಣಾಮವು ಹಲವು ದಿನಗಳವರೆಗೆ ಆಗುವ ಸಾಧ್ಯತೆಯಿದೆ.

ನಿಲ್ದಾಣ ಮುಚ್ಚುವುದಾಗಿ ಪ್ರಕಟಿಸಿದಾಗ ಸುಮಾರು 120 ವಿಮಾನಗಳು ವಾಯು ಮಾರ್ಗದಲ್ಲಿದ್ದವು. ಇವುಗಳಲ್ಲಿ ಕೆಲವು ವಿಮಾನಗಳಿಗೆ ವಾಪಸಾಗಲು ಸೂಚಿಸಲಾಯಿತು. ಇನ್ನು ಕೆಲವು ವಿಮಾನಗಳನ್ನು ಲಂಡನ್ ಬಳಿಯ ಗ್ಯಾಟ್ವಿಕ್, ಪ್ಯಾರಿಸ್‌ನ ಚಾರ್ಲ್ಸ್ ಡಿ ಗಾಲೆ ಮತ್ತು ಐರ್ಲೆಂಡ್‌ನ ಶಾನನ್ ಸೇರಿ ಪರ್ಯಾಯ ವಿಮಾನ ನಿಲ್ದಾಣಗಳಿಗೆ ಮಾರ್ಗ ಬದಲಿಸಲಾಯಿತು.

ವಿದ್ಯುತ್ ಪುನಃಸ್ಥಾಪನೆ ಅಸ್ಪಷ್ಟ: 'ಹೀಥ್ರೂ ವಿಮಾನ ನಿಲ್ದಾಣದಲ್ಲಿ ವಿದ್ಯುತ್ ಪೂರೈಕೆ ಯಾವಾಗ ಯಥಾಸ್ಥಿತಿಗೆ ಮರಳಲಿದೆ ಎನ್ನುವುದು ಸದ್ಯಕ್ಕೆ ಸ್ಪಷ್ಟವಾಗಿಲ್ಲ. ಹತ್ತಿರದ ವಿದ್ಯುತ್ ಉಪಕೇಂದ್ರದಲ್ಲಿ ಬೆಂಕಿ ಕಾಣಿಸಿಕೊಂಡ ನಂತರ ಹಲವು ದಿನಗಳವರೆಗೆ ಅಡಚಣೆ ಉಂಟಾಗುವ ಸಾಧ್ಯತೆ ಇದೆ' ಎಂದು ಹೀಥ್ರೂ ವಿಮಾನ ನಿಲ್ದಾಣವು ಹೇಳಿಕೆ ಬಿಡುಗಡೆ ಮಾಡಿದೆ.

ಈ ಅವಘಡದ ಕಾರಣದ ಪತ್ತೆಗೆ ಭಯೋತ್ಪಾದನಾ ನಿಗ್ರಹ ದಳವು ತನಿಖೆ ನಡೆಸುತ್ತಿದೆ.

ಹೀಥ್ರೂ ಕಾರ್ಯಾಚರಣೆ ಸ್ಥಗಿತಗೊಂಡಿದ್ದರಿಂದ ವಿಮಾನವೊಂದು ನಿಲ್ದಾಣದಲ್ಲಿ ನಿಂತಿತ್ತು —ಎಪಿ/ಪಿಟಿಐ ಚಿತ್ರ

ನಿಲ್ದಾಣಕ್ಕೆ ಆಗಿದ್ದೇನು?

ಲಂಡನ್‌ನ ಹೇಯ್ಸ್‌ನಲ್ಲಿ ರಾತ್ರಿ 11:23ಕ್ಕೆ ಭಾರಿ ಬೆಂಕಿ ಕಾಣಿಸಿದ್ದರಿಂದ ಹತ್ತಿರದ ಮನೆ, ಕಟ್ಟಡಗಳಲ್ಲಿದ್ದ ಸುಮಾರು 150 ಜನರನ್ನು ಸ್ಥಳಾಂತರಿಸಲಾಯಿತು. ರಾತ್ರೋ ರಾತ್ರಿ ಸುಮಾರು ಒಂದು ಲಕ್ಷ ಮನೆಗಳು ವಿದ್ಯುತ್ ಸಂಪರ್ಕ ಕಳೆದುಕೊಂಡವು. 10 ಅಗ್ನಿಶಾಮಕ ಯಂತ್ರಗಳು ಮತ್ತು ಹಲವು ಮಂದಿ ಅಗ್ನಿಶಾಮಕ ಸಿಬ್ಬಂದಿ ಸ್ಥಳಕ್ಕೆ ದೌಡಾಯಿಸಿ ಬೆಂಕಿ ನಂದಿಸುವ ಕಾರ್ಯಾಚರಣೆ ನಡೆಸಿದರು.

'ಅಗ್ನಿಶಾಮಕ ಮತ್ತು ತುರ್ತು ಸೇವೆ ಸಿಬ್ಬಂದಿ ಸವಾಲಿನ ಪರಿಸ್ಥಿತಿಗಳಲ್ಲಿ ದಣಿವರಿಯದೆ ಕೆಲಸ ಮಾಡಿದ್ದಾರೆ. ಬೆಳಿಗ್ಗೆ 8ರ ಸುಮಾರಿಗೆ ಬೆಂಕಿಯನ್ನು ನಿಯಂತ್ರಣಕ್ಕೆ ತರಲಾಗಿದೆ' ಎಂದು ಲಂಡನ್ ಅಗ್ನಿಶಾಮಕ ದಳದ ಸಹಾಯಕ ಆಯುಕ್ತ ಪ್ಯಾಟ್ ಗೌಲ್ಬೌರ್ನ್ ತಿಳಿಸಿದರು.

ಸಮಗ್ರ ತನಿಖೆ ಆಗಬೇಕಿದೆ: 'ಒಂದೇ ಒಂದು ಬೆಂಕಿ ಅವಘಡವು ಯುರೋಪಿನ ಅತ್ಯಂತ ಜನದಟ್ಟಣೆಯ ವಿಮಾನ ನಿಲ್ದಾಣವನ್ನು ಹೇಗೆ ಮುಚ್ಚಿಸಲು ಸಾಧ್ಯ? ಈ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳಲು ಘಟನೆಯ ಬಗ್ಗೆ ಸಮಗ್ರ ತನಿಖೆಯಾಗಬೇಕಿದೆ' ಎಂದು ಬ್ರಿಟನ್ ಸರ್ಕಾರ ಹೇಳಿದೆ. ಬೆಂಕಿಯನ್ನು ನಿಯಂತ್ರಣಕ್ಕೆ ತರುವಲ್ಲಿ ಯಶಸ್ವಿಯಾಗಿರುವ ಅಗ್ನಿಶಾಮಕ ಮತ್ತು ತುರ್ತು ಸೇವೆ ಸಿಬ್ಬಂದಿಗೆ ಕೃತಜ್ಞತೆ ಸಲ್ಲಿಸಿ ಪ್ರಧಾನಿ ಸ್ಟಾರ್ಮರ್ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

ಬಿಜೆಪಿಯ 18 ಶಾಸಕರು ಅಮಾನತು

ಒಂದನೇ ಪುಟದಿಂದ...

ಸಭಾಧ್ಯಕ್ಷರು ಹೆಸರಿಸಿರುವ ಶಾಸಕರನ್ನು ಆರು ತಿಂಗಳಿಗೆ ಸದನದಿಂದ ಅಮಾನತುಗೊಳಿಸುವಂತೆ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ. ಪಾಟೀಲ ನಿರ್ಣಯ ಮಂಡಿಸಿದರು. ಅದನ್ನು ಸ್ಪೀಕರ್ ಧ್ವನಿಮತಕ್ಕೆ ಹಾಕಿದರು. ನಿರ್ಣಯ ಅಂಗೀಕಾರವಾಗುತ್ತಿದ್ದಂತೆಯೇ, '18 ಶಾಸಕರನ್ನು ಆರು ತಿಂಗಳಿಗೆ ಸದನದಿಂದ ಅಮಾನತು ಮಾಡಲಾಗಿದೆ' ಎಂದು ಖಾದರ್ ಪ್ರಕಟಿಸಿದರು.

'ಅಮಾನತುಗೊಂಡಿರುವ ಎಲ್ಲ ಶಾಸಕರು ಸ್ವಯಂ ಪ್ರೇರಿತವಾಗಿ ಸದನದಿಂದ ಹೊರ ಹೋಗಬೇಕು' ಎಂದು ಮನವಿ ಮಾಡಿದ ಸಭಾಧ್ಯಕ್ಷರು ಹತ್ತು ನಿಮಿಷ ಕಲಾಪ ಮುಂದೂಡಿದರು. ಡಾ.ಸಿ.ಎನ್. ಅಶ್ವತ್ಥ ನಾರಾಯಣ ಮಾತ್ರ ಸದನದಿಂದ ಹೊರ ನಡೆದರು. 17 ಶಾಸಕರು ಸದನದಲ್ಲೇ ಉಳಿದರು. ಆಗ ಮಾರ್ಷಲ್‌ಗಳು ಅಮಾನತುಗೊಂಡ ಶಾಸಕರನ್ನು ಹೊತ್ತೊಯ್ದು ಸದನದಿಂದ ಹೊರ ಹಾಕಿದರು.

ಶುಕ್ರವಾರ ಬೆಳಿಗ್ಗೆ ಕಲಾಪ ಆರಂಭವಾಗುತ್ತಿದ್ದಂತೆಯೇ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬಜೆಟ್ ಮೇಲಿನ ಚರ್ಚೆಗೆ ಉತ್ತರ ನೀಡಲು ಮುಂದಾದರು. ಆಗ ಮಧ್ಯ ಪ್ರವೇಶಿಸಿದ ಬಿಜೆಪಿ, ಜೆಡಿಎಸ್ ಸದಸ್ಯರು, 'ಹನಿ ಟ್ರ್ಯಾಪ್' ಆರೋಪದ ಕುರಿತು ನ್ಯಾಯಾಂಗ ತನಿಖೆ ಅಥವಾ ಸಿಬಿಐ ತನಿಖೆಗೆ ಆದೇಶಿಸಬೇಕು ಎಂದು ಆಗ್ರಹಿಸಿದರು. ಸಿ.ಡಿ ಹಿಡಿದು ಸಭಾಧ್ಯಕ್ಷರ ಪೀಠದ ಎದುರು ಧರಣಿ ಆರಂಭಿಸಿದರು.

ಗದ್ದಲದ ಮಧ್ಯೆಯೇ ಮುಖ್ಯಮಂತ್ರಿ ಉತ್ತರ ಮುಂದುವರಿಸಿದರು. ಉತ್ತರ ಮುಗಿಯುತ್ತಾ ಬರುತ್ತಿದ್ದಂತೆಯೇ ಧರಣಿ ನಿರತ ಬಿಜೆಪಿ ಸದಸ್ಯರು ಕಾಗದ ಪತ್ರಗಳನ್ನು ಹರಿದು ಚೂರು ಚೂರು ಮಾಡಿ ಸಭಾಧ್ಯಕ್ಷರ ಪೀಠದತ್ತ ತೂರಿದರು. ಕೆಲವು ಸದಸ್ಯರು ಸಭಾಧ್ಯಕ್ಷರ ಪೀಠದ ಬಳಿ ಹೋಗಿ ಘೋಷಣೆ ಕೂಗಲಾರಂಭಿಸಿದರು. ಸಭಾಧ್ಯಕ್ಷರ ರಕ್ಷಣೆಗೆ ಧಾವಿಸಿದ ಮಾರ್ಷಲ್‌ಗಳು, ಬಿಜೆಪಿ ಸದಸ್ಯರು ಮೇಲೇರದಂತೆ ತಡೆದರು. 'ಮೇಲೆ ಬಿಡಿ ಪರವಾಗಿಲ್ಲ' ಎಂದು ಪೀಠದಲ್ಲಿದ್ದ ಖಾದರ್ ಹೇಳುತ್ತಿದ್ದಂತೆ ಬಿಜೆಪಿಯ ಹಲವು ಸದಸ್ಯರು ಪೀಠದ ಬಳಿ ಹೋದರು.

ಮುಖ್ಯಮಂತ್ರಿಯವರ ಉತ್ತರ ಮುಗಿಯುತ್ತಿದ್ದಂತೆಯೇ ಸಭಾಧ್ಯಕ್ಷರು ಮಸೂದೆಗಳ ಪರ್ಯಾಲೋಚನೆ ಕೈಗೆತ್ತಿಕೊಂಡರು. ಬಿಜೆಪಿ ಸದಸ್ಯರು ಪೀಠದ ಸುತ್ತ ನಿಂತು ಗದ್ದಲ ನಡೆಸುತ್ತಿರುವುದನ್ನು ಕಂಡು ಕೆಂಡಾಮಂಡಲರಾದ ಸಿದ್ದರಾಮಯ್ಯ, 'ಯಾರ‍್ರೀ ಸೆಕ್ಯೂರಿಟಿ? ಅವರನ್ನೆಲ್ಲ ಎತ್ತಿ ಆಚೆಗೆ ಹಾಕಿ' ಎಂದು ಗುಡುಗಿದರು. ಆಗ ಮಾರ್ಷಲ್‌ಗಳು ಬಿಜೆಪಿ ಸದಸ್ಯರನ್ನು ಅಲ್ಲಿಂದ ಬಲವಂತವಾಗಿ ಕೆಳಕ್ಕೆ ಇಳಿಸಿದರು. ಆಗ ತಳ್ಳಾಟ– ನೂಕಾಟ ನಡೆಯಿತು. ಕೆಲ ಶಾಸಕರು ಸಭಾಧ್ಯಕ್ಷರ ಪೀಠದ ಹಿಂದಿನ ಬಾಗಿಲಿನಿಂದ ಬರಲು ಪ್ರಯತ್ನಿಸಿದಾಗ ಆ ಬಾಗಿಲುಗಳನ್ನೂ ಮುಚ್ಚಿ ಭದ್ರಪಡಿಸಿದರು.

ಬಿಜೆಪಿ ಶಾಸಕರನ್ನು ಪೀಠದ ಸುತ್ತಲಿನ ಆವರಣದಿಂದ ಇಳಿಸಿದ ಬಳಿಕ ಸಭಾಧ್ಯಕ್ಷರ ರಕ್ಷಣೆಗೆಂದು ಮುಖ್ಯ ಸಚೇತಕ ಅಶೋಕ ಪಟ್ಟಣ ಬಂದು ನಿಂತರು. ಜತೆಗೆ ಮಾರ್ಷಲ್‌ಗಳೂ ಇದ್ದರು. ಕೆಳಗಿನಿಂದ ಸಭಾಧ್ಯಕ್ಷರತ್ತ ಕಾಗದ ಪತ್ರಗಳನ್ನು ತೂರಿದರು. ಕೆಲವು ಅವರ ಮುಖದ ಮೇಲೂ ಬಿದ್ದವು. ಮತ್ತೊಂದು ಕಡೆ ಆಡಳಿತ ಪಕ್ಷ ಸದಸ್ಯರು ಮೊದಲ ಸಾಲಿನತ್ತ ಧಾವಿಸಿ, ಸಿದ್ದರಾಮಯ್ಯ ಸುತ್ತ ಕೋಟೆ ಕಟ್ಟಿ ನಿಂತರಲ್ಲದೇ ಬಿಜೆಪಿ ವಿರುದ್ಧ ಘೋಷಣೆ ಕೂಗುತ್ತ, ಅವರ ಮೇಲೂ ಕಾಗದಗಳನ್ನು ಎಸೆಯಲಾರಂಭಿಸಿದರು. ಯಾರು ಏನು ಮಾತನಾಡುತ್ತಿದ್ದಾರೆ ಎಂಬುದು ಕೇಳದಷ್ಟು ಗದ್ದಲ ಉಂಟಾಗಿತ್ತು. ಆಡಳಿತ ಮತ್ತು ವಿಪಕ್ಷದ ಸದಸ್ಯರು ವಾಗ್ವಾದದಲ್ಲಿ ತೊಡಗಿದ್ದರು. ಕೆಲವು ಮಸೂದೆಗಳು ಅಂಗೀಕಾರವಾಗುತ್ತಿದ್ದಂತೆಯೇ ಸಭಾಧ್ಯಕ್ಷರು ಕಲಾಪವನ್ನು ಮುಂದೂಡಿದರು.

ಗದ್ದಲದ ಮಧ್ಯೆ ಅಂತ್ಯ: 18 ಸದಸ್ಯರನ್ನು ಹೊರಹಾಕಿದ ಬಳಿಕ ಕಲಾಪ ಮತ್ತೆ ಆರಂಭವಾಯಿತು. ಬಿಜೆಪಿ ಸದಸ್ಯರು ಧರಣಿ ಮುಂದುವರಿಸಿದರು. ಗದ್ದಲದ ಮಧ್ಯೆಯೇ ಎರಡು ಮಸೂದೆಗಳನ್ನು ಅಂಗೀಕರಿಸಲಾಯಿತು. ಆಗಲೂ ಕೆಲವು ಸದಸ್ಯರು ಕಾಗದ ಪತ್ರಗಳನ್ನು ಹರಿದು ಸ್ಪೀಕರ್ ಪೀಠದತ್ತ ಎಸೆದರು. ಮೇಲೇರಲು ಯತ್ನಿಸಿದ ಕೆಲವರನ್ನು ಮಾರ್ಷಲ್‌ಗಳು ತಡೆದರು. ಗಲಾಟೆಯ ಮಧ್ಯೆಯೇ ಸ್ಪೀಕರ್, ಕಲಾಪವನ್ನು ಅನಿರ್ದಿಷ್ಟಾವಧಿಗೆ ಮುಂದೂಡಿದರು.

ಬಿಜೆಪಿ ಸದಸ್ಯರು ಮೊಳಗಿಸಿದ ಘೋಷಣೆಗಳು

'ಹನಿ ಟ್ರ್ಯಾಪ್ ಮಾಡುವ ಸರ್ಕಾರಕ್ಕೆ ಧಿಕ್ಕಾರ', 'ರಾಜಣ್ಣನ ರಕ್ಷಿಸಿ ರಾಜಣ್ಣನ ರಕ್ಷಿಸಿ', 'ದಾರಿ ತಪ್ಪಿದ ಸರ್ಕಾರಕ್ಕೆ ಧಿಕ್ಕಾರ', 'ಸಿ.ಡಿ ಫ್ಯಾಕ್ಟರಿ ನಿಲ್ಲಲಿ', 'ಯಾರಯ್ಯ ಯಾರಯ್ಯ ಸಿ.ಡಿ ಮಾಲೀಕ ಯಾರಯ್ಯ', 'ಕಾಂಗ್ರೆಸ್‌ನ ಆರನೇ ಗ್ಯಾರಂಟಿ ಸಿ.ಡಿ ಗ್ಯಾರಂಟಿ...' ಇತ್ಯಾದಿ ಘೋಷಣೆಗಳು ಸದನದಲ್ಲಿ ಮೊಳಗಿದವು.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ರಿಯಲ್ ಎಸ್ಟೇಟ್ ಸೆಲ್ಲಿಂಗ್

Sites

Devanahalli

PLOT FOR SALE @ Jangammakote 1200Sqft N/F in Gated Layout Near Sugaturu Village. Via Hoskote. Whatsapp/ Call: 9972528503

General

ಉದ್ಯೋಗಾವಕಾಶಗಳು TVS ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th,PUC, ITI, Degree. ಸಂಬಳ 16,000- 86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

ಪ್ರವಾಸ

Travel

2.4.2025 ದೆಹಲಿ, ಅಮೃತ್‌ಸರ್, ವೈಷ್ಣೋದೇವಿ, ಕಾಶಿ,ಗಯಾ 22.4.2025 ಶಿರಡಿ/ ಮಹಾರಾಷ್ಟ್ರ 5ಜ್ಯೋತಿರ್ಲಿಂಗ ಪ್ರವಾಸ 1.5.2025, 15.5.2025 ಯಮುನೋತ್ರಿ, ಗಂಗೋತ್ರಿ, ಕೇದಾರನಾಥ್, ಬದ್ರಿನಾಥ್15.5.2025 ನೇಪಾಳ, ಮುಕ್ತಿನಾಥ, ಕಾಶಿ ಕರ್ನಾಟಕ ಹೆರಿಟೇಜ್ ಟೂರ್ಸ್,(ಹನುಮಂತನಗರ) 9845035349, 9482435755

26.03.2025/ ಏಪ್ರಿಲ್ ಮೇ ತಿಂಗಳಲ್ಲಿ 7 ದಿನಗಳ ಕಾಶಿ,ಗಯಾ,ಪ್ರಯಾಗ್‌ರಾಜ್ ಅಯೋಧ್ಯ. ಮೇ ತಿಂಗಳಿಂದ ಪ್ರತಿ 15 ದಿನಗಳಿಗೊಮ್ಮೆ 13 ದಿನಗಳ ಚಾರ್‌ಧಾಮ ಬದರಿನಾಥ್,ಕೇದಾರನಾಥ್ ಗಂಗೋತ್ರಿ ಯಮನೋತ್ರಿ ದೆಹಲಿ. ಶ್ರೀಸುಧಾ ಟ್ರಾವಲ್ಸ್ 8088826815 9019301300

ಉದ್ಯೋಗಾವಕಾಶ

Wanted

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ ಮಹಿಳೆಯರು ಅಥವಾ ಪುರುಷರು ಅಡುಗೆಕೆಲಸಕ್ಕೆ, ಮನೆಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು, ರೋಗಿಯನ್ನು ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು. ಉಚಿತ ಊಟ ವಸತಿ ಸಂಬಳ 15,000/-ರಿಂದ 20,000/-. ESI, PF, 10ಲಕ್ಷ ಇನ್ಶೂರೆನ್ಸ್ ಲಭ್ಯವಿರುತ್ತದೆ. ಬೆಂಗಳೂರು-76. ತಕ್ಷಣಸಂಪರ್ಕಿಸಿ: 9606384001, 9606385001

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
ಹೆಸರು ಬದಲಾವಣೆ
ಕರ್ನಾಟಕದ ಎಲ್ಲಾ ಆವೃತ್ತಿಯಲ್ಲಿ ನಿಮ್ಮ ಜಾಹೀರಾತು ಬುಕ್ ಮಾಡಿ
@50/-* PER WORDS
www.dhclassifieds.com
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 7795158424 | +91 9901641752
+91 9731810277 | +91 9900428036
*Conditions apply

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಡ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

ಜಮೀನಿಗೆ ಮೇಕೆ ನುಗ್ಗಿದ್ದಕ್ಕೆ ವ್ಯಕ್ತಿ ಕೊಲೆ

ಬಲಿಯಾ (ಉತ್ತರ ಪ್ರದೇಶ) (ಪಿಟಿಐ): ಉತ್ತರ ಪ್ರದೇಶದ ಬಲಿಯಾ ಜಿಲ್ಲೆಯಲ್ಲಿ ಕ್ಷುಲ್ಲಕ ಕಾರಣಕ್ಕೆ ವ್ಯಕ್ತಿಯೊಬ್ಬರನ್ನು ದೊಣ್ಣೆಯಿಂದ ಹೊಡೆದು ಹತ್ಯೆ ಮಾಡಲಾಗಿದೆ ಎಂದು ಪೊಲೀಸರು ಶುಕ್ರವಾರ ತಿಳಿಸಿದ್ದಾರೆ.

ಘಟನೆಯು ಗುರುವಾರ ರಾತ್ರಿ ನಡೆದಿದ್ದು, 'ತನ್ನ ಮೇಕೆ ನೆರೆಯವರ ಜಮೀನಿಗೆ ಪ್ರವೇಶಿಸಿದ ಕಾರಣ ಪಕ್ಕದ ಮನೆಯ ಮಂದೀಪ್ ಅವರೊಂದಿಗೆ ಅವಧೇಶ್ ಜಗಳವಾಡಿಕೊಂಡಿದ್ದಾರೆ' ಎಂದು ಇನ್‌ಸ್ಪೆಕ್ಟರ್ ಮೊಹಮ್ಮದ್ ಉಸ್ಮಾನ್ ತಿಳಿಸಿದ್ದಾರೆ.

ಗಲಾಟೆಯ ವೇಳೆ ಅವಧೇಶ್ (30) ತಲೆಗೆ ದೊಣ್ಣೆಯಿಂದ ಬಲವಾಗಿ ಹೊಡೆಯಲಾಗಿದೆ. ಗಂಭೀರವಾಗಿ ಗಾಯಗೊಂಡಿದ್ದ ಅವಧೇಶ್ ಮೃತಪಟ್ಟಿದ್ದಾರೆ. ಮಂದೀಪ್ ಮತ್ತು ಅವರ ಸಂಬಂಧಿ ಸಂದೀಪ್ ವಿರುದ್ಧ ದೂರು ದಾಖಲಾಗಿದೆ ಎಂದು ಅವರು ತಿಳಿಸಿದರು.

ಕೋಲ್ಕತ್ತಕ್ಕೆ ಭೇಟಿ ನೀಡುವ ಬಯಕೆ: ತಸ್ಲೀಮಾ

ಕೋಲ್ಕತ್ತ (ಪಿಟಿಐ): 'ಈಗಿನ ಪರಿಸ್ಥಿತಿಯಲ್ಲಿ ಕೋಲ್ಕತ್ತಕ್ಕೆ ಆಗಾಗ್ಗೆ ಭೇಟಿ ನೀಡಲು ಬಯಸುತ್ತೇನೆ. ಯಾವುದೇ ಕಾರಣಕ್ಕೂ ಇನ್ನು ಮುಂದೆಯೂ ಫುಟ್‌ಬಾಲ್‌ನಂತೆ ಒದೆಸಿಕೊಳ್ಳಲು ಬಯಸುವುದಿಲ್ಲ' ಎಂದು ಬಾಂಗ್ಲಾದೇಶದಿಂದ ಗಡೀಪಾರಾಗಿರುವ ಲೇಖಕಿ ತಸ್ಲೀಮಾ ನಸ್ರೀನ್ ತಿಳಿಸಿದ್ದಾರೆ.

'ಪಿಟಿಐ' ಸುದ್ದಿಸಂಸ್ಥೆಗೆ ನೀಡಿದ ಸಂದರ್ಶನದಲ್ಲಿ ಮಾತನಾಡಿದ ಅವರು, 'ಈ ಕುರಿತು ಪಶ್ಚಿಮ ಬಂಗಾಳ ಹಾಗೂ ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿದ್ದೇನೆ. ಕೋಲ್ಕತ್ತದ ಜೊತೆ ಗಟ್ಟಿಯಾದ ಬಾಂಧವ್ಯ ಹೊಂದಿದ್ದು, ಸಾಹಿತ್ಯ ಕಾರ್ಯಕ್ರಮ, ಪುಸ್ತಕ ಮೇಳಗಳಲ್ಲಿ ಭಾಗವಹಿಸಲು ಉತ್ಸುಕಳಾಗಿದ್ದೇನೆ' ಎಂದು ತಿಳಿಸಿದ್ದಾರೆ.

'2000ರಲ್ಲಿ ಕೋಲ್ಕತ್ತದಿಂದ ಹೊರಹಾಕಲ್ಪಟ್ಟ ತಸ್ಲೀಮಾ ಅವರಿಗೆ ಅಲ್ಲಿಗೆ ಮರಳಲು ಕೇಂದ್ರ ಸರ್ಕಾರ ಸೂಕ್ತ ಅವಕಾಶ ಕಲ್ಪಿಸಿಕೊಡಬೇಕು' ಎಂದು ಬಿಜೆಪಿಯ ರಾಜ್ಯಸಭಾ ಸದಸ್ಯ ಸಮಿಕ್ ಭಟ್ಟಾಚಾರ್ಯ ಅವರು ಈ ವಾರ ಸಂಸತ್ತಿನಲ್ಲಿ ಪ್ರಸ್ತಾಪಿಸಿದ್ದರು. ಇದರ ಬೆನ್ನಲ್ಲೇ, ತಸ್ಲೀಮಾ ಅವರು ಈ ಹೇಳಿಕೆ ನೀಡಿದ್ದಾರೆ.

ಸಾವಿನ ದುಃಖದಲ್ಲೇ ಪರೀಕ್ಷೆಗೆ ಹಾಜರಾದ ವಿದ್ಯಾರ್ಥಿಗಳು

ಪ್ರಜಾವಾಣಿ ವಾರ್ತೆ

ನವಲಗುಂದ (ಧಾರವಾಡ ಜಿಲ್ಲೆ): ತಂದೆ ಸಾವಿನ ದುಃಖದ ನಡುವೆಯೂ ಪಟ್ಟಣದ ಸರ್ಕಾರಿ ಉರ್ದು ಪ್ರೌಢಶಾಲೆ ವಿದ್ಯಾರ್ಥಿನಿ ಶಬಾನಾ ನೂರ್‌ಹಸನ್ ಪಟಾಸು ಶುಕ್ರವಾರ ಮಾಡಲ್ ಹೈಸ್ಕೂಲ್ ಪರೀಕ್ಷಾ ಕೇಂದ್ರದಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ ಹಾಜರಾದರು.

‘ಅಪ್ಪನ ಜತೆ ಗುರುವಾರ ಮಾತನಾಡಿದ್ದೆ. ಪರೀಕ್ಷೆಗೆ ಓದಿಕೊಳ್ಳಲು ಹೇಳಿದ್ದ ಅವರು, ಶುಕ್ರವಾರ ಬೆಳಿಗ್ಗೆ ಪರೀಕ್ಷಾ ಕೇಂದ್ರಕ್ಕೆ ಕರೆದೊಯ್ಯುವುದಾಗಿ ಹೇಳಿದ್ದರು. ಧೈರ್ಯದಿಂದ ಪರೀಕ್ಷೆ ಬರೆಯಲು ಹೇಳಿದ್ದರು. ಹೊಟ್ಟೆನೋವಿನಿಂದ ಅಸ್ವಸ್ಥರಾಗಿದ್ದ ಅವರನ್ನು ಆಸ್ಪತ್ರೆಗೆ ಕರೆದೊಯ್ಯುವಷ್ಟರಲ್ಲಿ ಮೃತಪಟ್ಟರು. ಅವರು ನನಗೆ ಪ್ರೇರಣೆಯಾಗಿದ್ದರು, ತುಂಬಾ ದುಃಖವಾಗಿದೆ’ ಎಂದು ಶಬಾನಾ ‘ಪ್ರಜಾವಾಣಿ’ಗೆ ತಿಳಿಸಿದರು.

ಮುಂಡರಗಿ (ಗದಗ ಜಿಲ್ಲೆ): ಅಜ್ಜಿಯ ಸಾವಿನ ದುಃಖದ ನಡುವೆಯೇ ತಾಲ್ಲೂಕಿನ ಡಂಬಳ ಗ್ರಾಮದ ಜಗದ್ಗುರು ತೋಂಟದಾರ್ಯ ಬಾಲಕಿಯರ ಪ್ರೌಢ ಶಾಲೆಯ ಜಲಜಾಕ್ಷಿ ಪ್ರಕಾಶ ಕಿಲಾರಿ ಶುಕ್ರವಾರ ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ ಹಾಜರಾದರು. ತುಂಬಾ ದುಃಖದಲ್ಲಿದ್ದ ಜಲಜಾಕ್ಷಿ ಪರೀಕ್ಷೆ ಬರೆಯಲು ನಿರಾಕರಿಸಿದರು.

ಶಾಲಾ ಸಿಬ್ಬಂದಿ ಮತ್ತು ಸಹಪಾಠಿಗಳು ಮನವೊಲಿಸಿದ ಬಳಿಕ, ಅಜ್ಜಿಯ ಪಾರ್ಥಿವ ಶರೀರಕ್ಕೆ ಅಂತಿಮ ನಮನ ಸಲ್ಲಿಸಿ, ಜಲಜಾಕ್ಷಿ ಪರೀಕ್ಷಾ ಕೇಂದ್ರಕ್ಕೆ ತೆರಳಿದರು.

ಶಬಾನಾ

ಜಲಜಾಕ್ಷಿ

ಅಡಿವೆಯ್ಯ ಸ್ವಾಮಿ ಹಿರೇಮಠ

ತಾಯಿ ಸಾವಿನ ದುಃಖದಲ್ಲಿಯೂ ಪರೀಕ್ಷೆ ಬರೆದ ಮಗ (ಕೊಪ್ಪಳ ಜಿಲ್ಲೆ): ತಾಯಿ ಮೃತಪಟ್ಟ ದುಃಖದ ನಡುವೆಯೂ ತಾಲ್ಲೂಕಿನ ಕೆಸರಹಟ್ಟಿ ಗ್ರಾಮದ ಅಡಿವೆಯ್ಯಸ್ವಾಮಿ ಹಿರೇಮಠ ಎಂಬ ವಿದ್ಯಾರ್ಥಿ ಶುಕ್ರವಾರ ಎಸ್‌ಎಸ್‌ಎಲ್‌ಸಿ ವಾರ್ಷಿಕ ಪರೀಕ್ಷೆ ಬರೆದಿದ್ದಾನೆ.

ಅಡಿವೆಯ್ಯಸ್ವಾಮಿ ಕೆಸರಹಟ್ಟಿ ಗ್ರಾಮದ ಸ್ವಾಮಿ ವಿವೇಕಾನಂದ ಆಂಗ್ಲ ಮಾಧ್ಯಮ ಶಾಲೆ ವಿದ್ಯಾರ್ಥಿ. ಕೆಲ ದಿನಗಳ ಹಿಂದೆ ವಿದ್ಯಾರ್ಥಿ ತಾಯಿ ವಿಜಯಲಕ್ಷ್ಮಿ ಸಿದ್ದಯ್ಯಸ್ವಾಮಿ ಅವರು ಸ್ನಾನದ ಕೋಣೆಯಲ್ಲಿ ಜಾರಿ ಬಿದ್ದು ತಲೆಗೆ ಗಾಯ ಮಾಡಿಕೊಂಡಿದ್ದರು. ರಕ್ತ ಹೆಪ್ಪುಗಟ್ಟಿದ್ದರಿಂದ ಶುಕ್ರವಾರ ಬೆಳಿಗ್ಗೆ ಮೃತಪಟ್ಟಿದ್ದಾರೆ.

ತಾಯಿ ನಿಧನದ ಸುದ್ದಿಯ ನೋವಿನ ನಡುವೆಯೂ ಶಿಕ್ಷಕರು, ವಿದ್ಯಾರ್ಥಿ ಮತ್ತು ಅವರ ಕುಟುಂಬ ಸದಸ್ಯರ ಮನವೊಲಿಸಿ ಪರೀಕ್ಷೆ ಬರೆಯಿಸಿದ್ದಾರೆ. ನಂತರ ಮಗ ತಾಯಿಯ ಅಂತ್ಯಸಂಸ್ಕಾರದಲ್ಲಿ ಪಾಲ್ಗೊಂಡಿದ್ದ ಎಂದು ಕುಟುಂಬ ಸದಸ್ಯರು ತಿಳಿಸಿದ್ದಾರೆ.

ಸಿ.ಸಿ.ಟಿ.ವಿ ಕ್ಯಾಮೆರಾ ನಾಶ

ದೊಡ್ಡಬಳ್ಳಾಪುರ: ತಾಲ್ಲೂಕಿನ ತೂಬಗೆರೆ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷಾ ಕೇಂದ್ರ ಕಣ್ಗಾವಲಿಗೆ ಅಳವಡಿಸಿದ್ದ ಸಿ.ಸಿ.ಟಿ.ವಿ ಕ್ಯಾಮೆರಾಗಳನ್ನು ನಾಶಪಡಿಸಲಾಗಿದೆ.

ಪರೀಕ್ಷಾ ಕೇಂದ್ರದ ಕೊಠಡಿಗಳು ಹಾಗೂ ಹೊರಭಾಗದಲ್ಲಿ ಅಳವಡಿಸಿದ್ದ ಸಿಸಿಟಿವಿ ಕ್ಯಾಮೆರಾಗಳನ್ನು ಗುರುವಾರ ರಾತ್ರಿ ಕಿಡಿಗೇಡಿಗಳು ಕಿತ್ತು ಬಿಸಾಡಿದ್ದಾರೆ. 10 ಕೊಠಡಿಗಳಲ್ಲಿ 14 ಕ್ಯಾಮೆರಾ ಅಳವಡಿಸಲಾಗಿತ್ತು. ಬಾಗಿಲು ಬೀಗ ಮುರಿದು ಒಳಗೆ ನುಗ್ಗಿ, 6 ಕ್ಯಾಮೆರಾಗಳನ್ನು ಕಿತ್ತು ಹಾಕಿದ್ದಾರೆ.

ಪರೀಕ್ಷೆ ಆರಂಭಕ್ಕೂ ಮುನ್ನವೇ ಪೊಲೀಸರು ಹಾಗೂ ಅಧಿಕಾರಿಗಳು ಭೇಟಿ ನೀಡಿ ಕ್ಯಾಮೆರಾಗಳನ್ನು ಮತ್ತೆ ಜೋಡಿಸಿ ವಿದ್ಯಾರ್ಥಿಗಳು ಪರೀಕ್ಷೆ ಬರೆಯಲು ಅನುವು ಮಾಡಿಕೊಟ್ಟರು. ಯಾವುದೇ ಗೊಂದಲ ಇಲ್ಲದೆ ಪರೀಕ್ಷೆ ಸುಗಮವಾಗಿ ನಡೆಯಿತು.

ದೊಡ್ಡಬಳ್ಳಾಪುರ ತಾಲ್ಲೂಕಿನ ತೂಬಗೆರೆ ಸರ್ಕಾರಿ ಪದವಿ ಪೂರ್ವ ಕಾಲೇಜು ಪರೀಕ್ಷಾ ಕೊಠಡಿಯಲ್ಲಿ ಅಳವಡಿಸಿದ್ದ ಸಿಸಿಟಿವಿ ಕ್ಯಾಮೆರಾವನ್ನು ಕಿತ್ತು ಬಿಸಾಡಿರುವುದು

ಜಿಲ್ಲಾಧಿಕಾರಿ ಎ.ಬಿ.ಬಸವರಾಜು ಭೇಟಿ ನೀಡಿ ಪರಿಶೀಲಿಸಿದರು. ಕ್ಯಾಮೆರಾ ಹಾಳು ಮಾಡುವ ದೃಶ್ಯ ಸೆರೆಯಾಗಿದೆ ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಸೈಯೀದಾ ಅನೀಸ್ ತಿಳಿಸಿದ್ದಾರೆ.

ಸರ್ವಜ್ಞ ಪೀಠಕ್ಕೆ ₹1.25 ಕೋಟಿ ವೆಚ್ಚದ ಚಿನ್ನದ ಹೊದಿಕೆ

ಪ್ರಜಾವಾಣಿ ವಾರ್ತೆ

ಉಡುಪಿ: ಪರ್ಯಾಯ ಪುತ್ತಿಗೆ ಮಠಾಧೀಶ ಸುಗುಣೇಂದ್ರತೀರ್ಥ ಶ್ರೀಪಾದರ ಸನ್ಯಾಸ ಸ್ವೀಕಾರದ ಸುವರ್ಣ ಮಹೋತ್ಸವ ಅಂಗವಾಗಿ ಸುಮಾರು ₹1.25 ಕೋಟಿ ವೆಚ್ಚದಲ್ಲಿ ಸರ್ವಜ್ಞ ಪೀಠಕ್ಕೆ ಚಿನ್ನ ಹೊದಿಸುವ ಕಾರ್ಯಕ್ಕೆ ಶುಕ್ರವಾರ ಚಾಲನೆ ನೀಡಲಾಯಿತು.

ಬೆಳಿಗ್ಗೆ ಸುಗುಣೇಂದ್ರತೀರ್ಥ ಶ್ರೀಪಾದರು ಹಾಗೂ ಕಿರಿಯ ಶ್ರೀ ಸುಶ್ರೀಂದ್ರ ತೀರ್ಥರು ಶ್ರೀಕೃಷ್ಣ ಮುಖ್ಯಪ್ರಾಣರಿಗೆ ಪ್ರಾರ್ಥನೆ ಸಲ್ಲಿಸಿ ಚಾಲನೆ ನೀಡಿದರು. ‘ಉಡುಪಿ ಶ್ರೀಕೃಷ್ಣನನ್ನು ಪ್ರತಿಷ್ಠಾಪನೆಗೈದ ಶ್ರೀ ಮಧ್ವಾಚಾರ್ಯರ ಸನ್ನಿಧಾನವಿರುವ ಸರ್ವಜ್ಞ ಪೀಠಕ್ಕೆ ಸುವರ್ಣ ಹೊದಿಸಿ, ಏಪ್ರಿಲ್ 14ರಂದು ಸೌರಯುಗಾದಿಯಂದು ಸಮರ್ಪಿಸಲು ಸಂಕಲ್ಪಿಸಲಾಗಿದೆ. ಕಲಾವಿದ ಗಂಜೀಫಾ ರಘುಪತಿ ಭಟ್ ಮತ್ತವರ ತಂಡದವರು ಸೂಕ್ಷ್ಮ ಕುಸುರಿ ಕಾರ್ಯ ಕೈಗೆತ್ತಿಕೊಂಡಿದ್ದಾರೆ’ ಎಂದು ತಿಳಿಸಲಾಗಿದೆ.

ಸರ್ವಜ್ಞ ಪೀಠಕ್ಕೆ ಚಿನ್ನ ಹೊದಿಸುವ ಕಾರ್ಯಕ್ಕೆ ಶುಕ್ರವಾರ ಚಾಲನೆ ನೀಡಲಾಯಿತು

INNOVATIVE LEARNING FOUNDATION
EXCELLENT MOODUBIDIRE
1 FIRST IN DK & UDUPI DISTRICT
TOTAL NTA SCORE 99.97143 PERCENTILE
SHISHIR H SHETTY
TOTAL NTA SCORE 99.82541 PERCENTILE
SHREYANK MANOHAR PAI
TOTAL NTA SCORE 99.02732 PERCENTILE
KARTHIK S
Our alumni are at IITs, AFMC, AIIMS, JIPMER, St. John's.
Two students received offer letter from IISc. Bengaluru
TEST YOUR ABILITY AT EXCELLENT EXAM
Selection of top 50 students for intensive JEE/NEET Coaching
on 23rd MARCH 2025 at 10 to 11 am
or on 05th APRIL 2025 at 10 to 11 am
SCAN HERE TO REGISTER
Regular teaching, revision, mock tests, counselling
Individual attention & doubt clarification
Special focus on discipline, safety & overall development
24/7 medical facilities
Effective time management for 2 years of studies
NISHANTH P HEGDE JOINED IIT GANDHINAGAR (GUJARAT) IISER AIR 33
NIKHIL B GOWDA JOINED MBBS BMC Bengaluru 710/720
CONSISTENCY IN RESULT SINCE 2012
JEE (MAINS) 2025 TOPPERS SESSION - 1
98.97820 PERCENTILE SOHAN YADAL
98.96110 PERCENTILE NUTHAN K BHAIRAVESH
98.59177 PERCENTILE DHANANSH V
98.44052 PERCENTILE ROHITH KAMATH
98.3836 PERCENTILE LIKHITH C P
97.90735 PERCENTILE LIKITH R SANTHOSH
97.48303 PERCENTILE HEMANTH V A
97.29624 PERCENTILE SRUJAN RAGHAVENDRA S R
96.55965 PERCENTILE VIRAAJ UPADHYA H V
96.55949 PERCENTILE H M DEVSEN
96.15497 PERCENTILE CHETHAN K S
96.14679 PERCENTILE PRAMUKH TULUPULE
96.14282 PERCENTILE BHUVAN Y A
62 STUDENTS ABOVE 90 PERCENTILE OUT OF 81 STUDENTS
ADMISSIONS OPEN 2025-26
ENGLISH MEDIUM SCHOOL
STATE / CBSE
6th to 10th STD with IIT & Medical Foundation Course
PU COLLEGE
SCIENCE & COMMERCE
COACHING FOR
NEET JEE (IIT) KCET NDA NATA CA Foundation CSEET
KALLABETTU, MOODUBIDIRE - 574 227, DK, KARNATAKA
Ph : 99000 99652/653
www.excellentmoodbidri.in | excellentmoodbidri@gmail.com
WE HAVE NO OTHER BRANCHES

ಸಂಕ್ಷಿಪ್ತ ಸುದ್ದಿ

ಭಾರತೀಯ ವಿದ್ಯಾರ್ಥಿ ಗಡೀಪಾರಿಗೆ ಕೋರ್ಟ್ ತಡೆ

ನ್ಯೂಯಾರ್ಕ್ (ಪಿಟಿಐ): ಹಮಾಸ್ ಪರ ಪ್ರಚಾರ ನಡೆಸಿದ ಆರೋಪದಡಿ ಬಂಧಿಸಿರುವ, ಜಾರ್ಜ್‌ಟೌನ್ ವಿಶ್ವವಿದ್ಯಾಲಯದ ಭಾರತೀಯ ವಿದ್ಯಾರ್ಥಿ ಬದರ್ ಖಾನ್ ಸೂರಿ ಅವರ ಗಡೀಪಾರು ಕ್ರಮಕ್ಕೆ ಅಮೆರಿಕದ ಸ್ಥಳೀಯ ನ್ಯಾಯಾಲಯ ತಡೆಯೊಡ್ಡಿದೆ.

ಈ ಕುರಿತ ಆದೇಶದಲ್ಲಿ ಜಿಲ್ಲಾ ನ್ಯಾಯಾಧೀಶ ಪ್ಯಾಟ್ರಿಕಾ ಟೊಲಿವರ್ ಗೈಲ್ಸ್ ಅವರು, ಕೋರ್ಟ್ ಆದೇಶವಿಲ್ಲದೆ ವಿದ್ಯಾರ್ಥಿ ಗಡೀಪಾರು ಮಾಡಬಾರದು ಎಂದು ಆದೇಶಿಸಿದರು.

ಜಾರ್ಜ್ ಟೌನ್ ವಿಶ್ವವಿದ್ಯಾಲಯದ ಎಡ್ಮಂಡ್ ಎ ವಾಲ್ಶ್ ಸ್ಕೂಲ್ ಆಫ್ ಫಾರಿನ್ ಸರ್ವೀಸ್‌ನ ಫೆಲೊ ಆಗಿದ್ದ ವಿದ್ಯಾರ್ಥಿಯನ್ನು ಭದ್ರತಾ ಸಿಬ್ಬಂದಿ ಮಾ. 17ರಂದು ಬಂಧಿಸಿದ್ದರು.

ವಿದ್ಯಾರ್ಥಿ ಪರ ವಕೀಲ ಹಸನ್ ಅಹ್ಮದ್ ಅವರು ಕೋರ್ಟ್‌ನಲ್ಲಿ ಹೇಬಿಯಸ್ ಕಾರ್ಪಸ್ ಅರ್ಜಿ ಸಲ್ಲಿಸಿದ್ದರು.

‘ತುಳಸಿ ಗಬಾರ್ಡ್ ಭೇಟಿ ಅಮೆರಿಕ–ಭಾರತ ಬಾಂಧವ್ಯಕ್ಕೆ ಬಲ’

ವಾಷಿಂಗ್ಟನ್ (ಪಿಟಿಐ): ‘ಅಮೆರಿಕದ ರಾಷ್ಟ್ರೀಯ ಗುಪ್ತಚರ ಸಂಸ್ಥೆಯ ನಿರ್ದೇಶಕಿ (ಡಿಎನ್‌ಐ) ತುಳಸಿ ಗಬಾರ್ಡ್ ಅವರು ಇತ್ತೀಚೆಗೆ ಭಾರತಕ್ಕೆ ನೀಡಿದ ಭೇಟಿಯು ಉಭಯ ರಾಷ್ಟ್ರಗಳ ನಡುವಿನ ದಶಕದ ಬಾಂಧವ್ಯವನ್ನು ಎತ್ತಿತೋರಿಸುತ್ತದೆ. ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹಾಗೂ ಪ್ರಧಾನಿ ನರೇಂದ್ರ ಮೋದಿ ನಡುವಿನ ಸ್ನೇಹವನ್ನು ಮತ್ತಷ್ಟು ಬಲಪಡಿಸಿದೆ’ ಎಂದು ಡಿಎನ್‌ಐ ಪ್ರಕಟಣೆಯಲ್ಲಿ ತಿಳಿಸಿದೆ.

ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿಯಾಗಿದ್ದ ತುಳಸಿ ಗಬಾರ್ಡ್

ತುಳಸಿ ಅವರು ಡಿಎನ್‌ಐ ಜವಾಬ್ದಾರಿ ವಹಿಸಿಕೊಂಡ ನಂತರ, ಹವಾಯಿ, ಜಪಾನ್, ಥಾಯ್ಲೆಂಡ್, ಭಾರತ ಹಾಗೂ ಫ್ರಾನ್ಸ್‌ಗೆ ಪ್ರವಾಸ ಕೈಗೊಂಡಿದ್ದಾರೆ.

‘ಇಂಡೋ–ಪೆಸಿಫಿಕ್ ಭಾಗದಲ್ಲಿ ಜನಿಸಿ, ನಂತರ ಅಲ್ಲಿಯೇ ಬೆಳೆದ ಗಬಾರ್ಡ್ ಅವರು ಡೊನಾಲ್ಡ್ ಟ್ರಂಪ್ ಅವರ ‘ಅಮೆರಿಕ ಮೊದಲು’ ನೀತಿಯನ್ನು ಮುನ್ನಡೆಸಲು ಇರುವ ಅವಕಾಶಗಳನ್ನು ಕೂಲಂಕಷವಾಗಿ ಅಧ್ಯಯನ ಮಾಡಿದರು. ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿಯಾಗಿ ದ್ವಿಪಕ್ಷೀಯ ಸಂಬಂಧ ವೃದ್ಧಿಯ ಕುರಿತು ಚರ್ಚೆ ನಡೆಸಿದ್ದರು’ ಎಂದು ತಿಳಿಸಿದೆ.

ಶಿಕ್ಷಣ ಇಲಾಖೆ ರದ್ದು: ಆದೇಶಕ್ಕೆ ಟ್ರಂಪ್ ಸಹಿ

ವಾಷಿಂಗ್ಟನ್ (ಪಿಟಿಐ): ದೇಶದ ಶಿಕ್ಷಣ ಇಲಾಖೆ ರದ್ದು ಮಾಡುವ ಕಾರ್ಯಾದೇಶಕ್ಕೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಸಹಿ ಹಾಕಿದ್ದಾರೆ.

ಡೊನಾಲ್ಡ್ ಟ್ರಂಪ್

ಪ್ರಗತಿಪರ ಸಿದ್ಧಾಂತಗಳಿಂದ ಶಿಕ್ಷಣ ವ್ಯವಸ್ಥೆಯು ಕಲುಷಿತಗೊಂಡಿದ್ದು, ಅದು ನಿರುಪಯುಕ್ತ ಎಂದು ಟ್ರಂಪ್ ಟೀಕಿಸುತ್ತಿದ್ದರು. ಸಂಪುಟದ ಸಹಕಾರವಿಲ್ಲದೆ ಇಲಾಖೆ ರದ್ದು ಮಾಡಲು ಸಾಧ್ಯವಿಲ್ಲ. ಆದರೆ, ಈ ಸಂಬಂಧ ಕಾನೂನು ರೂಪಿಸುವುದಾಗಿ ರಿಪಬ್ಲಿಕನ್ ಪಕ್ಷ ಹೇಳಿದರೆ, ಡೆಮಾಕ್ರಟಿಕ್ ಪಕ್ಷ ವಿರೋಧಿಸಿದೆ.

‘ಭಾರತ–ಪಾಕಿಸ್ತಾನ ಸಂಬಂಧ ಹದಗೆಟ್ಟಿದೆ’

ಲಾಹೋರ್ (ಪಿಟಿಐ): ಯುದ್ಧದ ಸಮಯವನ್ನು ಹೊರತುಪಡಿಸಿ, ಪ್ರಸ್ತುತ ಭಾರತ ಮತ್ತು ಪಾಕಿಸ್ತಾನದ ನಡುವಿನ ಸಂಬಂಧ ಇತಿಹಾಸದಲ್ಲೇ ಅತ್ಯಂತ ಕೆಟ್ಟ ಸ್ಥಿತಿಯಲ್ಲಿದೆ ಎಂದು ಪಾಕಿಸ್ತಾನದ ಮಾಜಿ ವಿದೇಶಾಂಗ ಸಚಿವ ಖುರ್ಷಿದ್ ಮಹಮೂದ್ ಕಸೂರಿ ಹೇಳಿದ್ದಾರೆ.

ಇನ್‌ಸ್ಟಿಟ್ಯೂಟ್ ಆಫ್ ಪೀಸ್ ಆ್ಯಂಡ್ ಕನೆಕ್ಟಿವಿಟಿ (ಐಪಿಎಸಿ) ಗುರುವಾರ ಆಯೋಜಿಸಿದ್ದ ‘ಪಾಕಿಸ್ತಾನ-ಭಾರತ ಸಂಬಂಧಗಳ ಪ್ರಸ್ತುತ ಪರಿಸ್ಥಿತಿ ಮತ್ತು ಮುಂದಿನ ದಾರಿ’ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ‘ಬಾಕಿ ಉಳಿದಿರುವ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ಎರಡು ದೇಶಗಳಿಗೆ ಮಾತುಕತೆಯೊಂದೇ ಪರಿಹಾರ’ ಎಂದರು.

ನಾಲ್ಕು ಅಂಶಗಳ ಸೂತ್ರದ ರೂಪದಲ್ಲಿ ಜಮ್ಮು ಮತ್ತು ಕಾಶ್ಮೀರ ಸಮಸ್ಯೆಯ ಸಂಭವನೀಯ ಪರಿಹಾರಕ್ಕೆ ಈಗಾಗಲೇ ಒಪ್ಪಲಾಗಿದೆ. ಎರಡೂ ದೇಶಗಳ ನಡುವಿನ ವಿವಾದಗಳನ್ನು ಶಾಂತಿಯುತವಾಗಿ ಬಗೆಹರಿಸದೇ ಇದ್ದರೆ ಅದು ವಿಷಾದನೀಯ ಎಂದು ಹೇಳಿದರು.

ನಾಲ್ವರು ನಕ್ಸಲರ ಶರಣಾಗತಿ

ಸುಕ್ಮಾ(ಪಿಟಿಐ): ಒಬ್ಬ ಮಹಿಳೆ ಸೇರಿ ನಾಲ್ವರು ನಕ್ಸಲರು ಶುಕ್ರವಾರ ಛತ್ತೀಸಗಢದ ಸುಕ್ಮಾ ಜಿಲ್ಲೆಯಲ್ಲಿ ಭದ್ರತಾ ಪಡೆಗಳ ಎದುರು ಶರಣಾಗಿದ್ದಾರೆ ಎಂದು ಪೊಲೀಸರು ಶುಕ್ರವಾರ ತಿಳಿಸಿದ್ದಾರೆ.

ಕಲ್ಮು ಅಯತೆ (35), ನುಪ್ಪೋ ರಘು (27), ಮಡಕಮ್ ಕೋನಾ (22) ಮತ್ತು ಸೋಢಿ ಲಚ್ಚಾ (27) ಶರಣಾದ ನಕ್ಸಲರು. ಇವರಲ್ಲಿ ‘ಕ್ರಾಂತಿಕಾರಿ ಆದಿವಾಸಿ ಮಹಿಳಾ ಸಂಘಟನೆ’ (ಕೆಎಎಂಎಸ್) ಮುಖ್ಯಸ್ಥೆಯಾದ ನಕ್ಸಲ್ ಮಹಿಳೆ ಕಲ್ಮು ಅಯತೆ ಬಗ್ಗೆ ಸುಳಿವು ನೀಡಿದವರಿಗೆ ₹2 ಲಕ್ಷ ಬಹುಮಾನ ಘೋಷಿಸಲಾಗಿತ್ತು. ಉಳಿದ ಮೂವರು ನಿಷೇಧಿತ ಸಿಪಿಐ (ಮಾವೋವಾದಿ)ನ ರೆವಲ್ಯೂಷನರಿ ಪೀಪಲ್ಸ್ ಕಮಿಟಿಯ ಸಕ್ರಿಯ ಸದಸ್ಯರಾಗಿದ್ದರು.

ಬಸ್ತರ್ ಪ್ರದೇಶದಲ್ಲಿ ಎರಡು ಪ್ರತ್ಯೇಕ ಎನ್‌ಕೌಂಟರ್‌ಗಳಲ್ಲಿ ಭದ್ರತಾ ಪಡೆಗಳು 30 ನಕ್ಸಲರನ್ನು ಹತ್ಯೆ ಮಾಡಿದ ಮರು ದಿನವೇ ಈ ಶರಣಾಗತಿ ಆಗಿದೆ.

ರಿಷಿ ಮಲ್ಹೋತ್ರಾಗೆ ನೋಟಿಸ್

ಪ್ರಜಾವಾಣಿ

ನವದೆಹಲಿ: ಹಿರಿಯ ವಕೀಲ ರಿಷಿ ಮಲ್ಹೋತ್ರಾ ಅವರಿಗೆ ಶೋಕಾಸ್ ನೋಟಿಸ್ ಜಾರಿ ಮಾಡಿ, ಅವರ ನೇಮಕಾತಿಯನ್ನು ರದ್ದು ಮಾಡಬಾರದೇಕೆ ಎಂದು ಪ್ರಶ್ನಿಸಲು ಸುಪ್ರೀಂ ಕೋರ್ಟ್ ನಿರ್ಧರಿಸಿದೆ.

ಮಲ್ಹೋತ್ರಾ ಅವರ ವಿರುದ್ಧ ದುರ್ನಡತೆ ಆರೋಪಗಳು ಕೇಳಿಬಂದಬೆನ್ನಲ್ಲೇ, ಮುಖ್ಯ ನ್ಯಾಯಮೂರ್ತಿ ಸಂಜೀವ್ ಖನ್ನಾ ಮತ್ತು ಸುಪ್ರೀಂ ಕೋರ್ಟ್‌ನ ಎಲ್ಲಾ ನ್ಯಾಯಮೂರ್ತಿಗಳು ಅವಿರೋಧವಾಗಿ ಈ ನಿರ್ಧಾರ ತೆಗೆದುಕೊಂಡಿದ್ದಾರೆ.

ಕೈದಿಗಳ ಅವಧಿಪೂರ್ವ ಬಿಡುಗಡೆ ಪ್ರಕರಣಗಳಲ್ಲಿ ವಾಸ್ತವಾಂಶವನ್ನು ಮುಚ್ಚಿಟ್ಟ ಮತ್ತು ದಾರಿ ತಪ್ಪಿಸುವ ಹೇಳಿಕೆ ನೀಡಿದ ಆರೋಪ ಮಲ್ಹೋತ್ರಾ ಅವರ ಮೇಲಿದೆ.

ಗುನಾಲನ್ ಸೆರೆ

ಸಿಂಗಪುರ (ಪಿಟಿಐ): ಲೈಂಗಿಕ ದೌರ್ಜನ್ಯ ಆರೋಪದಡಿ ಸಿಂಗಪುರದಲ್ಲಿರುವ ಭಾರತ ಮೂಲದ ರೇಡಿಯೊ ಡಿಜೆ ಮತ್ತು ತಮಿಳು ನಟ ಗುನಾಲನ್ ಮಾರ್ಗನ್ (43) ಅವರನ್ನು ಶುಕ್ರವಾರ ಬಂಧಿಸಲಾಗಿದೆ. ಗುನಾಲನ್ ವಿರುದ್ಧ ದಾಖಲಾಗಿರುವ ಒಟ್ಟು 7 ಪ್ರಕರಣಗಳ ವಿಚಾರಣೆಯು ನ್ಯಾಯಾಲಯದಲ್ಲಿ ನಡೆಯುತ್ತಿದೆ. ಇದರಲ್ಲಿ 4, ಲೈಂಗಿಕ ದೌರ್ಜನ್ಯಕ್ಕೆ ಸಂಬಂಧಿಸಿದ್ದಾಗಿದೆ.

ಮೂವರು ಬಂಡುಕೋರರ ಬಂಧನ

ಇಂಫಾಲ್ (ಪಿಟಿಐ): ನಿಷೇಧಿತ ಕಾಂಗ್ಲಿಪಾಕ್ ಕಮ್ಯುನಿಸ್ಟ್ ಪಾರ್ಟಿಯ (ಎಮ್‌ಎಫ್‌ಎಲ್) ಮೂವರು ಸದಸ್ಯರನ್ನು ಮಣಿಪುರದ ಇಂಫಾಲ್ ಪಶ್ಚಿಮ ಜಿಲ್ಲೆಯಲ್ಲಿ ಬಂಧಿಸಲಾಗಿದೆ ಎಂದು ಪೊಲೀಸರು ಶುಕ್ರವಾರ ತಿಳಿಸಿದರು.

ಅಹೇಬಾಮ್ ಗಾಂಧಿ (35), ಥೊಂಗಮ್ ನೌಬಾ ಮೈಥೇಯಿ (21) ಹಾಗೂ ನಿಂಗ್‌ಥೌಬಾ ಮೊಮೊಚಾ ಸಿಂಗ್ ಬಂಧಿತರು.

ಅಪಹರಣ ಪ್ರಕರಣದಲ್ಲಿ ಇವರಿಗಾಗಿ ಹುಡುಕಾಟ ನಡೆಸಲಾಗುತ್ತಿತ್ತು. ಲಿಯಾಂಗ್ ಚಾಜಿಂಗ್ ಮಮಾಂಗ್ ಲೇಕೈನಲ್ಲಿ ಮೂವರನ್ನು ಬಂಧಿಸಲಾಗಿದ್ದು, ಅವರ ಬಳಿಯಿದ್ದ ವಾಹನವೊಂದನ್ನು ವಶಪಡಿಸಿಕೊಳ್ಳಲಾಗಿದೆ ಎಂದಿದ್ದಾರೆ.

ಶಸ್ತ್ರಾಸ್ತ್ರ ವಶ: ರಾಜ್ಯದಾದ್ಯಂತ ನಡೆದ ಕಾರ್ಯಾಚರಣೆಯಲ್ಲಿ ಅಪಾರ ಪ್ರಮಾಣದ ಶಸ್ತ್ರಾಸ್ತ್ರಗಳನ್ನು ವಶಕ್ಕೆ ಪಡೆಯಲಾಗಿದೆ.

ಬೆಂಗಳೂರು ರೇಸ್

‘ಸಿಗಾರ್ ಗೆಲಾಕ್ಸಿ’ ಗೆಲ್ಲುವ ನಿರೀಕ್ಷೆ

ಶನಿವಾರ ಮುಕ್ತಾಯಗೊಳ್ಳಲಿರುವ ಬೆಂಗಳೂರು ಚಳಿಗಾಲದ ರೇಸ್‌ಗಳ ಪ್ರಧಾನ ಆಕರ್ಷಣೆ ಗವರ್ನರ್ಸ್ ಟ್ರೋಫಿ ರೇಸ್‌ನಲ್ಲಿ ಸಿಗಾರ್ ಗೆಲಾಕ್ಸಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 12:45ಕ್ಕೆ ಪ್ರಾರಂಭವಾಗಲಿರುವ ದಿನದ ಹತ್ತು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಇಂಪೆರಡಾರ್ 2, ಪೋಲ್ ಸ್ಟಾರ್ 5, ಹೈಪರ್‌ಡ್ರೈವ್ 2
2ನೇ ರೇಸ್: ಮಲ್ಟಿಸ್ಪೈಡೆಡ್ 5, ಟ್ರೆಷರ್ ಚೆಸ್ಟ್ 1, ಸೂಪರ್ ಹೀರೊ 2
3ನೇ ರೇಸ್: ಸ್ಟಾರ್ ಹಾನರ್ 5, ಗಿಸ್ಮೊ 10, ವಿಕ್ಟೋರಿಯರಾಯ 1
4ನೇ ರೇಸ್: ಮಿಸ್ಟಿಕಲ್ ಏರ್ 3, ಸೂಪರ್ ಕೈಂಡ್ 10, ದಿವಿಸ್ಪರ್‌ಕ್ವೈಯ್ಟ್ಲಿ 1
5ನೇ ರೇಸ್: ಪ್ರೊಫೆಸಿ 10, ಡಫಿ 3, ಕ್ರಾಸ್‌ವಾಟರ್ 2
6ನೇ ರೇಸ್: ನಾಟಿ ಒನ್ 3, ಲೇಡಿಲಯನ್ 5, ಅಹರ್ನೆ 1
7ನೇ ರೇಸ್: ಫಾರ್‌ಸೆಟಿ 1, ಮೆಟ್‌ಜಿಂಗರ್ 2, ಆಸ್ಪಿಸಿಯಸ್ ಕ್ವೀನ್ 5
8ನೇ ರೇಸ್: ಸಿಗಾರ್ ಗೆಲಾಕ್ಸಿ 1, ಡ್ಯಾರಿಂಗ್ಟನ್ 2
9ನೇ ರೇಸ್: ವಫಾದಾರ್ 10, ಕನೆಕ್ಟಿಂಗ್ ಡಾಟ್ಸ್ 1, ಕಾರ್ಟರ್ 7
10ನೇ ರೇಸ್: ಲೆಜೆಂಡರಿ ಇಂಪ್ಯಾಕ್ಟ್ 1, ಚಿಂಕಿ ಪಿಂಕಿ 9, ಚಿರಾಗ್ 10

ಉತ್ತಮ ಬೆಟ್: ಇಂಪೆರಡಾರ್

ಜಾಕ್‌ಪಾಟ್‌ಗೆ	1ನೇ ಟ್ರಿಬಲ್	2ನೇ ಟ್ರಿಬಲ್	3ನೇ ಟ್ರಿಬಲ್
6,7,8,9,10;	2,3,4	5,6,7;	8,9,10

ಮಯೂರ ಕೊಂಡು ಓದಿ, ಓದಿಸಿ
ಏಪ್ರಿಲ್ 2025
ಮಯೂರ ವಿಶೇಷ
ಗೊಲ್ಲರಹಟ್ಟಿಯಲ್ಲೊಂದು ಯುಗಾದಿ
ಜಿ.ವಿ. ಆನಂದಮೂರ್ತಿ
‘ಸಾಹಿತ್ಯ ಪದಗಳೊಂದಿಗಿನ ಕ್ರೀಡೆಯಾಗದೆ ಸಮಾಜದ ಆತ್ಮಕ್ಕೆ ಬಣ್ಣಗಳನ್ನು ತುಂಬಬೇಕು’
ಪ್ರೊ. ಎಚ್‌ಟಿ. ಪೋತೆ ಸಂದರ್ಶನ
ಸತ್ಯಮಂಗಲ ಮಹಾದೇವ
ದಲಿತ ವಸಂತ
ಅಂಕಣಗಳು
ಆರಿಫ್ ರಾಜಾ ಅವರ ಕಾವ್ಯಸಂಕದಲ್ಲಿ ಸೆರ್ಬಿಯಾದ ಕವಯಿತ್ರಿ ಡ್ಯಾನಿಯರಾ ಟ್ರಾಯ್ಕೋವಿಚ್ ಸಂದರ್ಶನ
ಕಾಡಿಗೆ ಕಣ್ಣು
ಕಲೀಮ್ ಉಲ್ಲಾ
ತಟ್ಟೇಕ್ಕಾಡ್ ಎಂಬ ಪಕ್ಷಿಲೋಕ
ಕವಿಸಮಯ
● ವೀರಣ್ಣ ಮಡಿವಾಳರ
● ಬಂಜಗೆರೆ ಜಯಪ್ರಕಾಶ
● ರೇಣುಕಾ ರಮಾನಂದ
● ನಂದಿನಿ ಹೆದ್ದುರ್ಗ
● ಬಿದಲೋಟಿ ರಂಗನಾಥ್
● ಅಭಿಷೇಕ ಬಳೆ ಮಸರಕಲ್
● ಸತ್ಯಾನಂದ ಪಾತ್ರೋಟ
● ಅರಿನಾಗನಹಳ್ಳಿ ಅಮರ್‌ನಾಥ್
● ರೂಪ ಹಾಸನ
ಪ್ರಬಂಧ
● ವೆಂಕಟೇಶ ಮಾಚಕನೂರು
● ಸುಧಾ ಆಡುಕಳ
ಕಥಾಕಾಲ
● ಅಂದಯ್ಯ ಅರವಟಗಿಮಠ
● ಅನು ಬೆಳ್ಳೆ
● ಸಂತೋಷ ಗುಡ್ಡಿಯಂಗಡಿ
● ಎಂ. ನಾಗರಾಜ ಶೆಟ್ಟಿ
● ಎಸ್ ನಾಗಶ್ರೀ ಅಜಯ್
● ಸೋಮಶೇಖರ್ ಕದಿರೇಹಳ್ಳಿ
● ಎನ್.ಆರ್. ತಿಪ್ಪೇಸ್ವಾಮಿ
● ಸುವರ್ಣ ಚೆಳ್ಳೂರು
● ನಿಂಗಪ್ಪ ಮುದೇನೂರು
ನಂದಾದೀಪ
ಜನಪ್ರಿಯ ಅನುವಾದಕ ಕೆ.ಕೆ. ಗಂಗಾಧರನ್
ಮೋಹನ ಕುಂಟಾರ್
ಲಲಿತ ಮಂಟಪ
ಕಲಾವಿದ ಗೆರೆಗಳನ್ನು ಮೀರಿ ನಡೆಯುವುದನ್ನು ಕಲೀಬೇಕು
ಸೂಫಿ ಕಥಕ್ ಕಲಾವಿದೆ ಮಂಜರಿ ಚತುರ್ವೇದಿ ಸಂದರ್ಶನ
₹25 editormy@mayura.co.in mayuraezine.com /mayuramonthly 080-45557333/264

ಇಂಡಿಯನ್ ಪ್ರೀಮಿಯರ್ ಲೀಗ್ 2025

ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಗೆ ಈಗ 18ರ ಹುಮ್ಮಸ್ಸು. 43 ವರ್ಷ ವಯಸ್ಸಿನ ಮಹೇಂದ್ರಸಿಂಗ್ ಧೋನಿ ಮತ್ತು 13 ವರ್ಷ ವಯಸ್ಸಿನ ವೈಭವ ಸೂರ್ಯವಂಶಿ ಅವರಿಬ್ಬರೂ ಕಾಣಿಸಿಕೊಳ್ಳಲಿರುವ ಟೂರ್ನಿ ಇದು. ಶನಿವಾರದಿಂದ ಮೇ 25ರವರೆಗೆ ಈ ಕ್ರಿಕೆಟ್ ಉತ್ಸವ ನಡೆಯಲಿದ್ದು, 10 ತಂಡಗಳು ಪ್ರಶಸ್ತಿಗಾಗಿ ಸೆಣಸಲಿವೆ. ಹೊಸ ನಿಯಮಗಳು ರೋಚಕತೆ ಹೆಚ್ಚಿಸುವ ನಿರೀಕ್ಷೆ ಇದೆ. ಹೊಸ ಪ್ರತಿಭೆಗಳು ತಮ್ಮ ಸಾಮರ್ಥ್ಯ ಮೆರೆಯಲು ಕಾದಿವೆ. ಹಳೆಯ ಹುಲಿಗಳು ಮತ್ತೊಮ್ಮೆ ಗರ್ಜಿಸಲು ಹಾತೊರೆದಿವೆ. ಝಗಮಗಿಸುವ ಟೂರ್ನಿಯಲ್ಲಿ ಮತ್ತಷ್ಟು ಹೊಸ ದಾಖಲೆಗಳು ಒಡಮೂಡುವ ನಿರೀಕ್ಷೆಯೂ ಗರಿಗೆದರಿದೆ.

ಐಪಿಎಲ್‌ಗೆ ಹದಿನೆಂಟು; ನಿರೀಕ್ಷೆ ನೂರೆಂಟು

ರೋಹಿತ್, ಕೊಹ್ಲಿ ಮೇಲೆ ನಿರೀಕ್ಷೆ

2024ರಲ್ಲಿ ಚುಟುಕು ವಿಶ್ವಕಪ್ ಗೆದ್ದ ನಂತರ ಅಂತರರಾಷ್ಟ್ರೀಯ ಟಿ20ಗೆ ವಿದಾಯ ಹೇಳಿದ್ದರೂ ರೋಹಿತ್ ಶರ್ಮಾ ಮತ್ತು ವಿರಾಟ್ ಕೊಹ್ಲಿ ಅವರು ಐಪಿಎಲ್‌ನಲ್ಲಿ ಈಗಲೂ ಪ್ರಮುಖ ತಾರೆಗಳಾಗಿ ಉಳಿದಿದ್ದಾರೆ. ಕೊಹ್ಲಿ, ಕಳೆದ ಸಾಲಿನಲ್ಲಿ 741 ರನ್‌ಗಳೊಡನೆ ಐಪಿಎಲ್‌ನಲ್ಲಿ ಅತಿ ಹೆಚ್ಚು ರನ್ ಗಳಿಸಿದ್ದ ಗೌರವಕ್ಕೆ ಪಾತ್ರರಾಗಿದ್ದರು. ರೋಹಿತ್ ಅವರೂ ತಮ್ಮ ವೈಭವದ ಆಟಕ್ಕೆ ಮರಳಲು ತುದಿಗಾಲಲ್ಲಿ ನಿಂತಿದ್ದಾರೆ.

ಆರ್‌ಸಿಬಿಗೆ ಇಂದು ಕೆಕೆಆರ್ ಸವಾಲು

ಕೋಲ್ಕತ್ತ (ಪಿಟಿಐ): ನೂತನ ನಾಯಕ, ಹೊಸದಾಗಿ ಬಂದ ಆಟಗಾರರ ಸಂಯೋಜನೆಯೊಡನೆ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡ ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯ ಉದ್ಘಾಟನಾ ಪಂದ್ಯದಲ್ಲಿ ಹಾಲಿ ಚಾಂಪಿಯನ್ ಕೋಲ್ಕತ್ತ ನೈಟ್ ರೈಡರ್ಸ್ ತಂಡವನ್ನು ಶನಿವಾರ ಎದುರಿಸಲಿದೆ. ಮತ್ತೊಮ್ಮೆ ಮೊದಲ ಪ್ರಶಸ್ತಿಯ ನಿರೀಕ್ಷೆಯೊಡನೆ ತನ್ನ ಅಭಿಯಾನ ಆರಂಭಿಸಲಿದೆ.

ಈ ಮಧ್ಯೆ ಹವಾಮಾನ ಇಲಾಖೆ ಶನಿವಾರ 'ಆರೆಂಜ್ ಅಲರ್ಟ್' ಘೋಷಿಸಿದ್ದು, ಈಡನ್ ಗಾರ್ಡನ್‌ನಲ್ಲಿ ನಡೆಯುವ ಈ ಪಂದ್ಯ ಮಳೆಯ ಪಾಲಾಗುವ ಸಾಧ್ಯತೆ ದಟ್ಟವಾಗಿದೆ.

31 ವರ್ಷ ವಯಸ್ಸಿನ ರಜತ್ ಪಾಟೀದಾರ್ ಮೊದಲ ಬಾರಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ನೇತೃತ್ವ ವಹಿಸಿದ್ದಾರೆ. ನಾಲ್ಕು ವರ್ಷಗಳಲ್ಲಿ ಅವರು ಮೂರನೇ ನಾಯಕ. ವಿರಾಟ್ ಕೊಹ್ಲಿ 2022ರಲ್ಲಿ ನಾಯಕತ್ವ ತ್ಯಜಿಸಿದ ನಂತರ ಮೂರು ಋತುವಿಗೆ ದಕ್ಷಿಣ ಆಫ್ರಿಕಾದ ಬ್ಯಾಟರ್ ಫಾಫ್ ಡುಪ್ಲೆಸಿ ತಂಡವನ್ನು ಮುನ್ನಡೆಸಿದ್ದರು.

17 ವರ್ಷಗಳ ಹಿಂದೆ ಐಪಿಎಲ್‌ನ ಮೊದಲ ಆವೃತ್ತಿಯ ಉದ್ಘಾಟನಾ ಪಂದ್ಯ ಈ ಎರಡು ತಂಡಗಳ ನಡುವೆ ಇದೇ ಕ್ರೀಡಾಂಗಣದಲ್ಲಿ ನಡೆದಿತ್ತು. ಆ ಪಂದ್ಯದಲ್ಲಿ ಕೋಲ್ಕತ್ತ ತಂಡದ ಬ್ರೆಂಡನ್ ಮೆಕ್ಕಲಂ 158 ರನ್ ಗಳಿಸಿ ಟೂರ್ನಿಯ ಮೊದಲ ಶತಕ ದಾಖಲಿಸಿದ್ದರು. ಆ ಪಂದ್ಯದ ಬಳಿಕ ಹೂಗ್ಲಿ ನದಿಯಲ್ಲಿ ಸಾಕಷ್ಟು ನೀರು ಹರಿದುಹೋಗಿದೆ. ಕೋಲ್ಕತ್ತದ ತಂಡ ಮೂರು ಬಾರಿ ಚಾಂಪಿಯನ್ ಆಗಿದೆ. ಆರ್‌ಸಿಬಿಗೆ ಮಾತ್ರ ಪ್ರಶಸ್ತಿ ಇನ್ನೂ ಕೈಗೆಟುಕಿಲ್ಲ.

ಕೋಲ್ಕತ್ತ ತಂಡದ ನಾಯಕತ್ವವೂ ಬದಲಾವಣೆಯಾಗಿದ್ದು, ಶ್ರೇಯಸ್ ಅಯ್ಯರ್ ಸ್ಥಾನದಲ್ಲಿ ಅಜಿಂಕ್ಯ ರಹಾನೆ ಸಾರಥ್ಯ ವಹಿಸಿದ್ದಾರೆ.

ಇತ್ತೀಚೆ ನಡೆದ ಚಾಂಪಿಯನ್ ಟ್ರೋಫಿ ಟೂರ್ನಿಯಲ್ಲಿ ಭಾರತ ತಂಡದ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದ್ದ ವರುಣ್ ಚಕ್ರವರ್ತಿ ಅವರು ಅನುಭವಿ ವಿರಾಟ್ ಕೊಹ್ಲಿ ಅವರನ್ನು ಹೇಗೆ ಕಟ್ಟಿಹಾಕಬಲ್ಲರು ಎಂಬ ಕುತೂಹಲ ಮೂಡಿದೆ. ನೆಟ್ಸ್‌ನಲ್ಲಿ ಕೊಹ್ಲಿ ಅವರು ಸ್ಪಿನ್ ದಾಳಿಯನ್ನು ಎದುರಿಸುವ ಕಡೆಗೇ ಹೆಚ್ಚು ಲಕ್ಷ್ಯ ನೀಡಿದರು.

ವೆಸ್ಟ್ ಇಂಡೀಸಿನ 36 ವರ್ಷ ವಯಸ್ಸಿನ ಆಲ್‌ರೌಂಡರ್ ಸುನಿಲ್ ನಾರಾಯಣ್ ಅವರು ಕೋಲ್ಕತ್ತದ ಪ್ರಮುಖ ಆಟಗಾರ. ಇಲ್ಲಿನ ಸ್ಪಿನ್ ಸ್ನೇಹಿ ಪಿಚ್‌ನಲ್ಲಿ ವರುಣ್ ಚಕ್ರವರ್ತಿ ಅವರ ಜೊತೆ ನಾರಾಯಣ್ ಅಪಾಯಕಾರಿ ಸಂಯೋಜನೆ ಆಗಬಲ್ಲರು. ಆರ್‌ಸಿಬಿ ಬ್ಯಾಟಿಂಗ್ ಕ್ರಮಾಂಕದಲ್ಲೂ ಹೊಸತನ ಕಾಣಲಿದೆ. ಕೊಹ್ಲಿ ಅವರೊಂದಿಗೆ ಆಸ್ಟ್ರೇಲಿಯಾದ ಆಕ್ರಮಣಕಾರಿ ಆಟಗಾರ ಫಿಲ್ ಸಾಲ್ಟ್ ಆಡಲು ಇಳಿಯಲಿದ್ದಾರೆ. ತಂಡದಲ್ಲಿ ಲಿಯಾಮ್ ಲಿವಿಂಗ್‌ಸ್ಟೋನ್, ಟಿಮ್ ಡೇವಿಡ್, ಜಿತೇಶ್ ಶರ್ಮಾ ಅಂಥ ನುರಿತ ಫಿನಿಷರ್‌ಗಳಿದ್ದಾರೆ.

ಅನುಭವಿ ಮೊಹಮ್ಮದ್ ಸಿರಾಜ್ ಅವರ ಅನುಪಸ್ಥಿತಿಯಲ್ಲಿ ವೇಗದ ಬೌಲಿಂಗ್ ಹೊಣೆ ಜೋಶ್ ಹ್ಯಾಜಲ್‌ವುಡ್ ಮತ್ತು ಅನುಭವಿ ಭುವನೇಶ್ವರ ಕುಮಾರ್ ಹೆಗಲೇರಲಿದೆ. ಕೃಣಾಲ್ ಪಾಂಡ್ಯ, ರೊಮಾರಿಯೊ ಶೆಫರ್ಡ್ ಅಂಥ ಆಲ್‌ರೌಂಡರ್‌ಗಳೂ ತಂಡದಲ್ಲಿದ್ದಾರೆ.

₹20 ಕೋಟಿ ಐಪಿಎಲ್‌ನಲ್ಲಿ ಪ್ರಶಸ್ತಿ ಗೆಲ್ಲುವ ತಂಡವು ಟ್ರೋಫಿಯೊಂದಿಗೆ ಪಡೆಯುವ ನಗದು ಬಹುಮಾನ. ರನ್ನರ್ಸ್ ಅಪ್ ತಂಡಕ್ಕೆ ₹12.50 ಕೋಟಿ

₹27 ಕೋಟಿ ಲಖನೌ ಸೂಪರ್ ಜೈಂಟ್ಸ್ ತಂಡದ ರಿಷಭ್ ಪಂತ್ ಹರಾಜಿನಲ್ಲಿ ಪಡೆದ ಮೊತ್ತ. ಇದು ಐಪಿಎಲ್ ಇತಿಹಾಸದಲ್ಲೇ ಗಳಿಸಿದ ಗರಿಷ್ಠ ಮೌಲ್ಯ

ಚೆನ್ನೈ ಸೂಪರ್ ಕಿಂಗ್ಸ್ ಮತ್ತು ಮುಂಬೈ ಇಂಡಿಯನ್ಸ್ ತಲಾ ಐದು ಬಾರಿ ಚಾಂಪಿಯನ್

ಹೊಸ ನಾಯಕರಿಗೆ ಪರೀಕ್ಷೆ...

ಈ ಬಾರಿ ಐಪಿಎಲ್ ಹೆಚ್ಚಿನ ಸಂಖ್ಯೆಯಲ್ಲಿ ಹೊಸ ನಾಯಕರನ್ನು ಕಾಣುತ್ತಿದೆ. ಜೊತೆಗೇ ಕೆಲವು ಆಟಗಾರರು 'ಸ್ವಾಪ್‌ಗ್ಯಾಪ್' ಆಧಾರದಲ್ಲೂ ನಾಯಕರಾಗಿದ್ದಾರೆ.

ಭಾರತ ತಂಡದಲ್ಲಿ ಒಂದೂ ಟಿ20 ಪಂದ್ಯ ಆಡದ ರಜತ್ ಪಾಟೀದಾರ್, ವಿರಾಟ್ ಕೊಹ್ಲಿ ಅಂಥ ಅನುಭವಿಯಿದ್ದರೂ ಆರ್‌ಸಿಬಿ ತಂಡದ ನಾಯಕತ್ವ ವಹಿಸುತ್ತಿದ್ದಾರೆ. ಅಕ್ಷರ್ ಪಟೇಲ್ ಅವರಿಗೆ ಡೆಲ್ಲಿ ಕ್ಯಾಪಿಟಲ್ಸ್ ಸಾರಥ್ಯ ಒಲಿದಿದೆ.

ಈ ಹಿಂದಿನ ಋತುವಿನಲ್ಲಿ ಕೋಲ್ಕತ್ತ ತಂಡಕ್ಕೆ ನಾಯಕರಾಗಿದ್ದ ಶ್ರೇಯಸ್ ಅಯ್ಯರ್ ಈ ಬಾರಿ ಪಂಜಾಬ್ ಕಿಂಗ್ಸ್ ನಾಯಕ. ಅವರ ಸ್ಥಾನದಲ್ಲಿ ಅಜಿಂಕ್ಯ ರಹಾನೆ ಅವರು ಕೋಲ್ಕತ್ತ ನೈಟ್ ರೈಡರ್ಸ್ ಕಪ್ತಾನರಾಗಿದ್ದಾರೆ. ಬೆರಳಿನ ಗಾಯದಿಂದ ಚೇತರಿಸಿಕೊಳ್ಳುತ್ತಿರುವ ಸಂಜು ಸ್ಯಾಮ್ಸನ್ ಬದಲು ಯುವ ಬ್ಯಾಟರ್ ರಿಯಾನ್ ಪರಾಗ್ ಮೊದಲ ಮೂರು ಪಂದ್ಯಗಳಿಗೆ ರಾಜಸ್ಥಾನ ರಾಯಲ್ಸ್ ತಂಡದ ನೇತೃತ್ವ ವಹಿಸುವರು.

ಮೂರು ಪಂದ್ಯಗಳಲ್ಲಿ ನಿಗದಿತ ಅವಧಿಯಲ್ಲಿ ಓವರುಗಳನ್ನು ಪೂರೈಸದ ಕಾರಣ ಹಾರ್ದಿಕ್ ಪಾಂಡ್ಯ ಅವರು ಒಂದು ಪಂದ್ಯದ ನಿಷೇಧ ಅನುಭವಿಸುತ್ತಿದ್ದು, ಮುಂಬೈ ಇಂಡಿಯನ್ಸ್ ತಂಡದ ಮೊದಲ ಪಂದ್ಯಕ್ಕೆ ನಾಯಕತ್ವವು ಸೂರ್ಯಕುಮಾರ್ ಯಾದವ್ ಹೆಗಲೇರಿದೆ.

2024ರಲ್ಲಿ ಡೆಲ್ಲಿ ತಂಡದ ನಾಯಕರಾಗಿದ್ದ ರಿಷಭ್ ಪಂತ್ ಅವರು ಈ ಸಲ ಲಖನೌ ಸೂಪರ್ ಜೈಂಟ್ಸ್ ತಂಡವನ್ನು ಮುನ್ನಡೆಸಲಿದ್ದಾರೆ. ಮೆಗಾ ಹರಾಜಿನಲ್ಲಿ ಅತ್ಯಧಿಕ ಮೊತ್ತ (₹27 ಕೋಟಿ) ಪಡೆದ ಪಂತ್ ಅವರು ಟೀಕಾಕಾರರ ಬಾಯಿ ಮುಚ್ಚಿಸುವ ಸವಾಲು ಎದುರಿಸುತ್ತಿದ್ದಾರೆ. ಚಾಂಪಿಯನ್ಸ್ ಟ್ರೋಫಿ ಟೂರ್ನಿಯಲ್ಲಿ ಅವರು ತಂಡದಲ್ಲಿದ್ದರೂ ಆಡುವ ಅವಕಾಶ ಪಡೆದುಕೊಂಡಿರಲಿಲ್ಲ. ಇಲ್ಲಿ ಉತ್ತಮವಾಗಿ ಆಡಿ ತಾವು ಚುಟುಕು ಮಾದರಿಯಲ್ಲೂ ಆಕ್ರಮಣದ ಆಟಕ್ಕೆ ಸೈ ಎಂದು ಸಾಬೀತುಪಡಿಸಿಕೊಳ್ಳುವ ಸವಾಲು ಅವರ ಮುಂದಿದೆ.

ಬೂಮ್ರಾ ಫಿಟ್ನೆಸ್: ಜಸ್‌ಪ್ರೀತ್ ಬೂಮ್ರಾ ಅವರ ಫಿಟ್ನೆಸ್ ಕುರಿತು ಇನ್ನೂ ಸ್ಪಷ್ಟತೆ ಲಭಿಸಿಲ್ಲ. ಬೆಂಗಳೂರಿನ ಬಿಸಿಸಿಐ ಶ್ರೇಷ್ಠತಾ ಕೇಂದ್ರದಲ್ಲಿ ಅವರು ಆರೈಕೆಯಲ್ಲಿದ್ದು ಫಿಟ್ನೆಸ್ ಪರಿಶೀಲನೆಗೆ ಒಳಗಾಗಿದ್ದಾರೆ. ಮುಂಬೈ ಇಂಡಿಯನ್ಸ್ ತಂಡಕ್ಕೆ ಅವರು ಪ್ರಮುಖ ಅಸ್ತ್ರವಾಗಿದ್ದಾರೆ.

ಅತಿ ಹೆಚ್ಚು ರನ್ ಗಳಿಸಿದವರು

ಬ್ಯಾಟರ್	ಪಂದ್ಯ	ರನ್	ಶ್ರೇಷ್ಠ
ವಿರಾಟ್ ಕೊಹ್ಲಿ	252	8004	113*
ಶಿಖರ್ ಧವನ್	222	6769	106*
ರೋಹಿತ್ ಶರ್ಮಾ	257	6628	109*
ಡೇವಿಡ್ ವಾರ್ನರ್	184	6565	126
ಸುರೇಶ್ ರೈನಾ	205	5528	100*

ಐಪಿಎಲ್ ವೇಳಾಪಟ್ಟಿ (ಆರ್‌ಸಿಬಿ ಪಂದ್ಯಗಳು ಮಾತ್ರ)

ದಿನಾಂಕ	ತಂಡಗಳು	ಸಮಯ	ಸ್ಥಳ
ಮಾ.22	ಕೆಕೆಆರ್–ಆರ್‌ಸಿಬಿ	ರಾ.7.30	ಕೋಲ್ಕತ್ತ
ಮಾ.28	ಸಿಎಸ್‌ಕೆ–ಆರ್‌ಸಿಬಿ	ರಾ.7.30	ಚೆನ್ನೈ
ಏ.2	ಆರ್‌ಸಿಬಿ–ಜಿಟಿ	ರಾ.7.30	ಬೆಂಗಳೂರು
ಏ.7	ಎಂಐ–ಆರ್‌ಸಿಬಿ	ರಾ.7.30	ಮುಂಬೈ
ಏ.10	ಆರ್‌ಸಿಬಿ–ಡಿಸಿ	ರಾ.7.30	ಬೆಂಗಳೂರು
ಏ.13	ಆರ್‌ಆರ್–ಆರ್‌ಸಿಬಿ	ಮ.3.30	ಜೈಪುರ
ಏ.18	ಆರ್‌ಸಿಬಿ–ಪಂಜಾಬ್ ಕಿಂಗ್ಸ್	ರಾ.7.30	ಬೆಂಗಳೂರು
ಏ.20	ಪಂಜಾಬ್ ಕಿಂಗ್ಸ್–ಆರ್‌ಸಿಬಿ	ಮ.3.30	ಚಂಡೀಗಢ
ಏ.24	ಆರ್‌ಸಿಬಿ–ಆರ್‌ಆರ್	ರಾ.7.30	ಬೆಂಗಳೂರು
ಏ.27	ಡಿಸಿ–ಆರ್‌ಸಿಬಿ	ರಾ.7.30	ದೆಹಲಿ
ಮೇ 3	ಆರ್‌ಸಿಬಿ–ಸಿಎಸ್‌ಕೆ	ರಾ.7.30	ಬೆಂಗಳೂರು
ಮೇ 9	ಎಲ್‌ಎಸ್‌ಜಿ–ಆರ್‌ಸಿಬಿ	ರಾ.7.30	ಲಖನೌ
ಮೇ 13	ಆರ್‌ಸಿಬಿ–ಎಸ್‌ಆರ್‌ಎಚ್	ರಾ.7.30	ಬೆಂಗಳೂರು
ಮೇ 17	ಆರ್‌ಸಿಬಿ–ಕೆಕೆಆರ್	ರಾ.7.30	ಬೆಂಗಳೂರು

ಮಳೆಯಿಂದ ಪ್ರಾಕ್ಟೀಸ್ ಮೊಟಕು

ಕೋಲ್ಕತ್ತ (ಪಿಟಿಐ): ಈಡನ್ ಗಾರ್ಡನ್‌ನಲ್ಲಿ ಐಪಿಎಲ್ ಉದ್ಘಾಟನಾ ಪಂದ್ಯದ ಮುನ್ನಾದಿನ ಕೋಲ್ಕತ್ತ ನೈಟ್ ರೈಡರ್ಸ್ ಮತ್ತು ರಾಯಲ್ ಚಾಲೆಂಜರ್ಸ್ ತಂಡಗಳ ತಾಲೀಮನ್ನು ಶುಕ್ರವಾರ ಸಂಜೆ ತುಂತುರು ಮಳೆಯ ಕಾರಣ ನಿಗದಿಗಿಂತ ಮೊದಲೇ ಮೊಟಕುಗೊಳಿಸಬೇಕಾಯಿತು.

ಸಂಜೆ 5 ಗಂಟೆಗೆ ತಂಡಗಳು ನೆಟ್ಸ್‌ನಲ್ಲಿ ತೊಡಗಿದ್ದವು. ಆದರೆ ಒಂದು ಗಂಟೆಯ ಬಳಿಕ ಮಳೆ ಶುರುವಾಯಿತು. ಆಟಗಾರರು ಕಿಟ್‌ಗಳೊಡನೆ ಮೈದಾನದಿಂದ ನಿರ್ಗಮಿಸಿದರು.

ಶುಕ್ರವಾರ ಮತ್ತು ಶನಿವಾರ ಕೋಲ್ಕತ್ತ ಸೇರಿದಂತೆ ಪಶ್ಚಿಮ ಬಂಗಾಳದ ಅನೇಕ ಜಿಲ್ಲೆಗಳಲ್ಲಿ ಗಾಳಿ, ಗುಡುಗುಸಹಿತ ಮಳೆಯಾಗಬಹುದೆಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿತ್ತು.

ಧೋನಿ ಕುತೂಹಲ

ಈ ಬಾರಿಯ ಐಪಿಎಲ್ ದಿಗ್ಗಜ ಆಟಗಾರ ಮಹೇಂದ್ರ ಸಿಂಗ್ ಧೋನಿ ಅವರಿಗೆ ಆಟಗಾರನಾಗಿ ಕೊನೆಯದಾಗಬಹುದು ಎಂಬ ಚರ್ಚೆಯೂ ನಡೆಯುತ್ತಿದೆ. 43 ವರ್ಷ ವಯಸ್ಸಿನ ಧೋನಿ 2020ರಲ್ಲಿ ಅಂತರರಾಷ್ಟ್ರೀಯ ಕ್ರಿಕೆಟ್‌ನಿಂದ ನಿವೃತ್ತರಾಗಿದ್ದರೂ, ಐಪಿಎಲ್‌ನಲ್ಲಿ ಮುಂದುವರಿದಿದ್ದಾರೆ.

ಅಭಿಮಾನಿಗಳ ಪಾಲಿಗೆ ಮೆಚ್ಚಿನ ಆಟಗಾರರಾಗಿರುವ ಧೋನಿ ಈ ಹಿಂದಿನಂತೆ ಮ್ಯಾಚ್ ವಿನ್ನರ್ ಎನಿಸದಿದ್ದರೂ ಈ ಚಾಣಾಕ್ಷ ಆಟಗಾರನ ಉಪಸ್ಥಿತಿ ತಂಡಕ್ಕೆ ಅನುಕೂಲಕರವಾಗಲಿದೆ. ಆಟದ ಸೂಕ್ಷ್ಮತೆ ಅರಿಯುವಲ್ಲಿ, ಕ್ಷೇತ್ರ ರಕ್ಷಣೆ ನಿಯೋಜಿಸುವಲ್ಲಿ ಮತ್ತು ಫಿನಿಷಿಂಗ್‌ನಲ್ಲಿ ಅವರ ಕೌಶಲ ಮಸುಕಾಗಿಲ್ಲ.

ಅವರಿಗಿಂತ ಸರಿಯಾಗಿ 30 ವರ್ಷ ಕಿರಿಯ ಆಟಗಾರ ವೈಭವ ಸೂರ್ಯವಂಶಿ ರಾಜಸ್ಥಾನ ರಾಯಲ್ಸ್ ತಂಡದಲ್ಲಿ ಆಡುತ್ತಿದ್ದಾರೆ. ಆದರೆ ಅವರಿಗೆ ಆಡುವ ಅವಕಾಶ ದೊರೆಯಲಿದೆಯೇ ಎಂಬ ಪ್ರಶ್ನೆಯಿದೆ.

ಐಪಿಎಲ್‌ನಲ್ಲಿ ಗರಿಷ್ಠ ವಿಕೆಟ್ ಪಡೆದವರು

ಬೌಲರ್	ಪಂದ್ಯ	ವಿಕೆಟ್	ಶ್ರೇಷ್ಠ
ಯಜುವೇಂದ್ರ ಚಾಹಲ್	160	205	40ಕ್ಕೆ5
ಪಿಯೂಷ್ ಚಾವ್ಲಾ	192	192	17ಕ್ಕೆ4
ಡ್ವೇನ್ ಬ್ರಾವೊ	161	183	22ಕ್ಕೆ4
ಭುವನೇಶ್ವರ ಕುಮಾರ್	176	181	19ಕ್ಕೆ5
ಸುನಿಲ್ ನಾರಾಯಣ	177	180	19ಕ್ಕೆ5
ರವಿಚಂದ್ರನ್ ಅಶ್ವಿನ್	212	180	34ಕ್ಕೆ4

ಓಪನ್ ಜಂಪ್ಸ್ ಸ್ಪರ್ಧೆ ಇಂದು

ಆ್ಯನ್ಸಿ ಸೋಜನ್

ಬೆಂಗಳೂರು: ಆ್ಯನ್ಸಿ ಸೋಜನ್, ಅಬ್ದುಲ್ಲಾ ಅಬೂಬಕರ್, ಯು.ಕಾರ್ತಿಕ್, ಪ್ರವೀಣ್ ಚಿತ್ರವೇಲ್ ಸೇರಿದಂತೆ ದೇಶದ ಪ್ರಮುಖ ಜಿಗಿತದ ಸ್ಪರ್ಧಿಗಳು, ಶನಿವಾರ ಇಲ್ಲಿ ನಡೆಯುವ ನಾಲ್ಕನೇ ಇಂಡಿಯನ್ ಓಪನ್ ಜಂಪ್ಸ್ ಸ್ಪರ್ಧೆಯಲ್ಲಿ ಪಾಲ್ಗೊಳ್ಳಲಿದ್ದಾರೆ.

ಸತತ ಎರಡನೇ ವರ್ಷ ನಗರದಲ್ಲಿ ಈ ಕೂಟ ಹಮ್ಮಿಕೊಳ್ಳಲಾಗಿದೆ. ಕೆಂಗೇರಿಯ ಅಂಜು ಬಾಬಿ ಜಾರ್ಜ್ ಹೈ ಪರ್ಫಾರ್ಮೆನ್ಸ್ ಸೆಂಟರ್‌ನಲ್ಲಿ ಲಾಂಗ್‌ಜಂಪ್, ಹೈಜಂಪ್, ಟ್ರಿಪಲ್ ಜಂಪ್ ಮತ್ತು ಪೋಲ್‌ವಾಲ್ಟ್ ಸ್ಪರ್ಧೆಗಳು ನಡೆಯಲಿವೆ. ಈ ಹಿಂದಿನ ವರ್ಷ ಬರೇ ಪುರುಷರ ಮತ್ತು ಮಹಿಳಾ ವಿಭಾಗದಲ್ಲಿ ಸ್ಪರ್ಧೆಗಳು ನಡೆದಿದ್ದವು. ಈ ವರ್ಷ ವ್ಯಾಪ್ತಿ ವಿಸ್ತರಿಸಲಾಗಿದ್ದು, 18 ಮತ್ತು 20 ವರ್ಷದೊಳಗಿನ ಬಾಲಕ, ಬಾಲಕಿಯರ ವಿಭಾಗದಲ್ಲೂ ಸ್ಪರ್ಧೆಗಳು ನಡೆಯಲಿವೆ. ಟೋಕಿಯೊದಲ್ಲಿ ಸೆಪ್ಟೆಂಬರ್ 13 ರಿಂದ 21ರವರೆಗೆ ನಡೆಯಲಿರುವ ವಿಶ್ವ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ಗೆ ಈ ಕೂಟವು ಅರ್ಹತೆ ಪಡೆಯಲು ಅವಕಾಶ ಒದಗಿಸಿದೆ.

ಅಂಟೊನ್ಸೆನ್‌ಗೆ ಮುತ್ತುಸಾಮಿ ಆಘಾತ



ಮುತ್ತುಸಾಮಿ

ಬಾಸೆಲ್ (ಪಿಟಿಐ): ವಿಶ್ವದ ಎರಡನೇ ಕ್ರಮಾಂಕದ ಆಟಗಾರ ಆ್ಯಂಡರ್ಸ್ ಅಂಟೊನ್ಸೆನ್ ಅವರಿಗೆ ಮೂರು ಗೇಮ್‌ಗಳ ಪಂದ್ಯದಲ್ಲಿ ಆಘಾತ ನೀಡಿದ ಭಾರತದ ಶಂಕರ್ ಮುತ್ತುಸಾಮಿ ಸುಬ್ರಮಣಿಯನ್ ಅವರು ಸ್ವಿಸ್ ಓಪನ್ ಸೂಪರ್ 300 ಬ್ಯಾಡ್ಮಿಂಟನ್ ಟೂರ್ನಿಯ ಪುರುಷರ ಸಿಂಗಲ್ಸ್ ಎಂಟರ ಘಟ್ಟಕ್ಕೆ ತಲುಪಿದರು.

ತಮಿಳುನಾಡಿನ 21 ವರ್ಷ ವಯಸ್ಸಿನ ಆಟಗಾರ ಶಂಕರ್ ಸುಬ್ರಮಣಿಯನ್ ಗುರುವಾರ ತಡರಾತ್ರಿ ನಡೆದ ಪ್ರಿಕ್ವಾರ್ಟರ್ ಫೈನಲ್ ಪಂದ್ಯದಲ್ಲಿ 18–21, 21–12, 21–5 ರಿಂದ ಡೆನ್ಮಾರ್ಕ್‌ನ ಅಂಟೊನ್ಸೆನ್ ಅವರನ್ನು ಸೋಲಿಸಿದರು.

ಇದು ಶಂಕರ್ ವೃತ್ತಿಜೀವನದ ಅತಿ ದೊಡ್ಡ ಗೆಲುವೆನಿಸಿತು. ಈ ಟೂರ್ನಿಯ ಕಣದಲ್ಲಿ ಉಳಿದಿರುವ ಭಾರತ ಏಕೈಕ ಆಟಗಾರ ಎನಿಸಿರುವ ಅವರು ಎಂಟರ ಘಟ್ಟದ ಪಂದ್ಯದಲ್ಲಿ ಫ್ರಾನ್ಸ್‌ನ ಕ್ರಿಸ್ಟೊ ಪೊಪೊವ್ ಅವರನ್ನು ಎದುರಿಸಲಿದ್ದಾರೆ. ಪೊಪೊವ್ 2024ರಲ್ಲಿ ಜರ್ಮನ್ ಮತ್ತು ಹೈಲೊ ಓಪನ್ ಟೂರ್ನಿಗಳ ವಿಜೇತರಾಗಿದ್ದರು.

ಟ್ರೀಸಾ–ಗಾಯತ್ರಿ ಜೋಡಿ ಸೆಮಿಗೆ: ಭಾರತದ ಟ್ರೀಸಾ ಜೋಲಿ ಮತ್ತು ಗಾಯತ್ರಿ ಗೋಪಿಚಂದ್ ಜೋಡಿಯು ಮಹಿಳೆಯರ ಡಬಲ್ಸ್‌ನಲ್ಲಿ ಸೆಮಿಫೈನಲ್ ಪ್ರವೇಶಿಸಿತು. ಭಾರತದ ಆಟಗಾರ್ತಿಯರು 21-18, 21-14ರಿಂದ ಹಾಂಗ್‌ಕಾಂಗ್‌ನ ಪುಯಿ ಲ್ಯಾಮ್ ಯೆಂಗ್ ಮತ್ತು ನ್ಗಾ ಟಿಂಗ್ ಯೆಂಗ್ ಜೋಡಿಯನ್ನು ಮಣಿಸಿದರು.

ಮಹಿಳೆಯರ ಸಿಂಗಲ್ಸ್ ಎಂಟರ ಘಟ್ಟದ ಪಂದ್ಯದಲ್ಲಿ ಇಶಾರಾಣಿ ಬರೂವ ಹೋರಾಟ ನೀಡಿದರೂ ಅಂತಿಮವಾಗಿ ಚೀನಾದ ಹಾನ್ ಕ್ವಿಯಾನ್ ಅವರಿಗೆ 19–21, 21–18, 18–21ರಲ್ಲಿ ಮಣಿದರು. ವಿಶ್ವ ಕ್ರಮಾಂಕದಲ್ಲಿ 11ನೇ ಸ್ಥಾನದಲ್ಲಿರುವ ಕುಸುಮ ವಾರ್ದನಿ (ಇಂಡೊನೇಷ್ಯಾ) 21–17, 21–19ರಲ್ಲಿ ಅನುಪಮಾ ಉಪಾಧ್ಯಾಯ ಅವರನ್ನು ಸೋಲಿಸಿದರು.

ಹಸನ್ ಅಜೇಯ ಶತಕ; ಪಾಕ್‌ಗೆ ಜಯ

ಅಕ್ಲೆಂಡ್ (ಎಪಿ): ಆರಂಭ ಆಟಗಾರ ಹಸನ್ ನವಾಝ್ ಅವರ ಮಿಂಚಿನ ಶತಕದ (ಔಟಾಗದೇ 105, 45 ಎಸೆತ) ನೆರವಿನಿಂದ ಪಾಕಿಸ್ತಾನ ತಂಡ ಟಿ20 ಸರಣಿಯ ಮೂರನೇ ಪಂದ್ಯದಲ್ಲಿ ನ್ಯೂಜಿಲೆಂಡ್ ತಂಡವನ್ನು 9 ವಿಕೆಟ್‌ಗಳಿಂದ ಸೋಲಿಸಿತು.

ಐದು ಪಂದ್ಯಗಳ ಸರಣಿಯಲ್ಲಿ ನ್ಯೂಜಿಲೆಂಡ್ ಮುನ್ನಡೆ 2–1ಕ್ಕೆ ಇಳಿಯಿತು. ನ್ಯೂಜಿಲೆಂಡ್ 19.5 ಓವರುಗಳಲ್ಲಿ 204 ರನ್ ಗಳಿಸಿತು. ಮಾರ್ಕ್ ಚಾಪ್‌ಮನ್ 44 ಎಸೆತಗಳಲ್ಲಿ 94 ರನ್ (4x11, 6x4) ಬಾರಿಸಿದರು. ಉತ್ತರವಾಗಿ ಪಾಕ್ 16 ಓವರುಗಳಲ್ಲಿ 1 ವಿಕೆಟ್‌ಗೆ 207 ರನ್ ಗಳಿಸಿ ಗೆಲುವು ಆಚರಿಸಿತು. ಹಸನ್ 10 ಬೌಂಡರಿ, ಏಳು ಸಿಕ್ಸರ್ ಬಾರಿಸಿ ಪಂದ್ಯದ ಆಟಗಾರ ಎನಿಸಿದರು. ಮೊದಲ ವಿಕೆಟ್‌ಗೆ 5.5 ಓವರುಗಳಲ್ಲಿ 74 ರನ್ ಸೇರಿಸಿದ ಅವರು, ಅಜೇಯ ಅರ್ಧ ಶತಕ ಬಾರಿಸಿದ ನಾಯಕ ಸಲ್ಮಾನ್ ಆಘಾ (ಔಟಾಗದೇ 51, 31ಎ) ಜೊತೆ ಮುರಿಯದ ಎರಡನೇ ವಿಕೆಟ್‌ಗೆ 133 ರನ್ ಸೇರಿಸಿದರು.

ಅತಿ ಹೆಚ್ಚು ತಂಡಗಳಿಗೆ ಆಡಿದವರು

ಆ್ಯರನ್ ಫಿಂಚ್ (9)	ರಾಜಸ್ಥಾನ ರಾಯಲ್ಸ್, ಡೆಲ್ಲಿ ಡೇರ್‌ಡೆವಿಲ್ಸ್, ಪುಣೆ ವಾರಿಯರ್ಸ್, ಸನ್‌ರೈಸರ್ಸ್ ಹೈದರಾಬಾದ್, ಮುಂಬೈ ಇಂಡಿಯನ್ಸ್, ಗುಜರಾತ್ ಲಯನ್ಸ್, ಪಂಜಾಬ್ ಕಿಂಗ್ಸ್, ರಾಯಲ್ ಚಾಲೆಂಜರ್ಸ್ ಬೆಂಗಳೂರು, ಕೋಲ್ಕತ್ತ ನೈಟ್ ರೈಸರ್ಸ್
ಜಯದೇವ್ ಉನದ್ಕತ್ (8)	ಕೋಲ್ಕತ್ತ ನೈಟ್ ರೈಡರ್ಸ್, ಡೆಲ್ಲಿ ಡೇರ್‌ಡೆವಿಲ್ಸ್, ರಾಯಲ್ ಚಾಲೆಂಜರ್ಸ್ ಬೆಂಗಳೂರು, ರೈಸಿಂಗ್ ಪುಣೆ ಸೂಪರ್ ಜೈಂಟ್ಸ್, ರಾಜಸ್ಥಾನ ರಾಯಲ್ಸ್, ಮುಂಬೈ ಇಂಡಿಯನ್ಸ್, ಲಖನೌ ಸೂಪರ್ ಜೈಂಟ್ಸ್, ಸನ್‌ರೈಸರ್ಸ್ ಹೈದರಾಬಾದ್
ಮನೀಷ್ ಪಾಂಡೆ (7)	ಮುಂಬೈ ಇಂಡಿಯನ್ಸ್, ರಾಯಲ್ ಚಾಲೆಂಜರ್ಸ್ ಬೆಂಗಳೂರು, ಪುಣೆ ವಾರಿಯರ್ಸ್, ಕೋಲ್ಕತ್ತ ನೈಟ್ ರೈಡರ್ಸ್, ಸನ್‌ರೈಸರ್ಸ್ ಹೈದರಾಬಾದ್, ಲಖನೌ ಸೂಪರ್ ಜೈಂಟ್ಸ್, ಡೆಲ್ಲಿ ಕ್ಯಾಪಿಟಲ್ಸ್

PRERANA MOTORS Lalbagh Road: 7506024020; BTM Layout: 7506024118; Rajajinagar: 7506024039; Yelahanka: 9619489334
ADISHAKTI CARS Hebbal: 7506023837; Dasarahalli: 9167982568; Kalyana Nagar: 9167163087
BELLAD ENTERPRISES PVT LTD Bommsandra 8238883535, 9035354160; Sarajpura: 8879932503
CAUVERY MOTORS: Avalahalli: 8879156068; Mekhri Circle: 8422849049; Devanahalli: 8879078454
KEY MOTORS JP Nagar Kanakapura Road: 7506023980, Mysore Road: 9167395034, Kanakapura City: 8879145649, BG Road: 9167395164, Nelamangala: 9167881890, Sunkadakatte Magadi Road: 9167882027
KHT MOTORS Whitefield: 7506023988; Domlur: 7506024006, Kolar: 9731149668
KROPEX AUTO Hosur Road: 7506024016, Koramangala: 9167395364, Sarjapur road: 8291202713, Mahadevapura: 8291052641
SREE AUTO Tumkur: 7506024318, Tiptur: 9619050469, Chitradurga: 9619033465, Kunigal: 8879046819, Chikkaballapur: 9167082428, Chintamani: 8291927028
Images and Illustrations are indicative and for information purposes only. All features/specifications are not available in all variants and may vary for different variants. Specifications/features are subject to change without prior information. Colours may vary due to printing limitations. Altroz is available in Petrol, CNG & Diesel. ◆26.03 cm largest in hatchback segment less than 4m. Offers valid till 31st March '25. Starting price of Altroz XE Petrol, Ex Showroom New Delhi. *Offers are from multiple Financiers. *Finance at sole discretion of Financier. *Benefits up to differs from model to model and is inclusive of consumer offer, exchange bonus and maximum corporate offer. Terms & Conditions apply.